SRI M.C. NANAIAH:- The Minister who is in charge, should pilot the Bill. I think, this lapse will not occur.

MR.SPEAKER:- It is condoned.

4. 1995ನೇ ಸಾಲಿನ ಕರ್ನಾಟಕ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೇ, 1995ನೇ ಸಾಲಿನ ಕರ್ನಾಟಕ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ; 1995ನೇ ಸಾಲಿನ ಕರ್ನಾಟಕ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಂ.ಸಿ.ನಾಣಯ್ಯ:- ಮಾನ್ಯ ಅಧ್ಯಕ್ಷರೇ 1995ನೇ ಸಾಲಿನ ಕರ್ನಾಟಕ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು:- ವಿಧೇಯಕವನ್ನು ಮಂಡಿಸಲಾಗಿದೆ. ಈಗ ಸಭೆಯನ್ನು ಒಂದು ಗಂಟೆ ಕಾಲ ಮುಂದೂಡಿದ್ದೇನೆ.

(ಸದನವು 1 ಗಂಟೆ 45 ನಿಮಿಷಕ್ಕೆ ಒಂದು ಗಂಟೆ ವಿರಾಮಕ್ಕಾಗಿ ಮುಂದೂಡಲ್ಪಟ್ಟಿತು)

(ಮತ್ತೆ ಸಭೆಯು ಮಧ್ಯಾಹ್ನ 3.00 ಘಂಟೆಗೆ ಸಮಾವೇಶಗೊಂಡಿತು ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ವಿತ್ತೀಯ ಕಾರ್ಯಕಲಾಪಗಳು

1995-96ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ

+ಡಾ|| ಯು.ಚಿತ್ತರಂಜನ್:- ಮಾನ್ಯ ಉಪಾಧ್ಯಕ್ಷರೆ, ಇವತ್ತು ಈ ಡಿಮಾಂಡ್ ಮೇಲಿನ ನನ್ನ ಮಾತನ್ನು ಮುಂದುವರಿಸಲಿಚ್ಛಿಸುತ್ತೇನೆ. ತಾವು ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಕೃತಜ್ಞತೆಯನ್ನು ಸಲ್ಲಿಸಿ ನನ್ನ ಮಾತನ್ನು ಮುಂದುವರೆಸುತ್ತಿದ್ದೇನೆ. ನಿನ್ನೆ ನಾನು ನಾಲ್ಕು ನಿಮಿಷಗಳು ಇದರ ಬಗ್ಗೆ ಮಾತನಾಡುವಂತಹ ಸಂದರ್ಭದಲ್ಲಿ ಅತ್ಯಂತ ಪ್ರಾಮುಖ್ಯವಾದಂತಹ 3-4-ವಿಷಯಗಳ ಬಗ್ಗೆ ಸಭೆಯ ಗಮನವನ್ನು ಸೆಳೆದಿದ್ದೆ. ಇದು ಶಾಸಕರು ಮಾಡುವಂತಹ ಅತ್ಯಂತ ಪವಿತ್ರವಾದ ಕರ್ತವ್ಯವೆಂದು ತಿಳಿದಿದ್ದೇನೆ. ಎರಡನೆಯದು ಈ ಅಭಿಯಾಚನೆ ಏನಿದೆ ಇದನ್ನು ಮಂಡಿಸುವಂತಹ ಸಂದರ್ಭದಲ್ಲಿ ತುಂಬಾ ಚಿಂತನೆ ಮಾಡಿ, ಆಲೋಚನೆ ಮಾಡಿ ಮಂಡಿಸಬೇಕೆಂದು ಹೇಳಿ. ಮೂರನೆಯದು ಇದನ್ನು ಸಂಬಂಧಪಟ್ಟಂತಹ ಮಂತ್ರಿಗಳು ಯಾರಿದ್ದಾರೆ, ಅವರು ಇದನ್ನು ಸ್ವತ: ಅಭ್ಯಾಸ ಮಾಡಿ ಒಂದು ದೃಷ್ಟಿಕೋನವನ್ನಿಟ್ಟುಕೊಂಡು ಮಂಡಿಸಬೇಕು. They should have a vision. ಎನ್ನುವಂತಹ ವಿಚಾರವಾಗಿದೆ. ಕೊನೆಯದಾಗಿ ಯಾವುದು all said and done it should reach the people. ಜನ ಹಿತವಾಗುವಂತಹ ನಮ್ಮ ಡಿಮಾಂಡ್ಸ್ ಇರಬೇಕು ಎನ್ನುವಂಥಾದ್ದರ ಬಗ್ಗೆ

ನಾನು ಸಭೆಯ ಗಮನವನ್ನು ಸೆಳೆಯುತ್ತೇನೆ. ಬಹುಶಃ ಈ ಅಭಿಯಾಚನೆಯ ಬಗ್ಗೆ ಚರ್ಚೆಯನ್ನು ವಿರೋಧಪಕ್ಷದ ವತಿಯಿಂದ ನಾನು ಪ್ರಾರಂಭಿಸುತ್ತಿದ್ದೇನೆ. ಹಾಗಾಗಿ ನೇರವಾಗಿ ಶಿಕ್ಷಣ, ಪ್ರಾಥಮಿಕ ಶಿಕ್ಷಣ, ಉನ್ನತ ಶಿಕ್ಷಣ ಹಾಗೂ ಇನ್ನಿತರ ಏಳೆಂಟು ಭಾಗದಲ್ಲಿ ಈ ಸಭೆಯ ಒಪ್ಪಿಗೆಯನ್ನು ಮಾನ್ಯ ಮಂತ್ರಿಗಳು ಮತ್ತು ಸರ್ಕಾರ ಕೋರುತ್ತಿದ್ದಾರೆ. ಅದನ್ನು ಮಾತನಾಡುವ ಮೊದಲು ಪೂರ್ವಭಾವಿಯಾಗಿ ಇದರ ಕುರಿತು ಸ್ವಲ್ಪ ಚಿಂತನೆ ಮಾಡುವಂಥಾದ್ದು ತೀರಾ ಅವಶ್ಯಕತೆ ಇದೆ ಎಂದು ನನಗೆ ಅನಿಸಿದೆ. ಆ ದೃಷ್ಟಿಯಿಂದ ನಾನು ಅನೇಕ ಪ್ರಾರಂಭಿಕ ವಿಷಯಗಳನ್ನು ಹೇಳಲಿಕ್ಕೆ ಇಚ್ಛಿಸುತ್ತೇನೆ. ಈ ಶಾಸನಸಭೆಯಲ್ಲಿ ನಾವು ಮಾಡುವಂಥ ಯಾವುದೇ ಕೆಲಸ ಅದು ಜನರಿಗೆ ಉಪಯೋಗವಾಗುವಂತಹ ಕೆಲಸ ಆಗಬೇಕೇ ಹೊರತು; ನಾನು ಎರಡು ಬಾರಿ, ಮೂರು ಬಾರಿ ಶಾಸನ ಸಭೆಯ ಸದಸ್ಯನಾಗಿದ್ದೆ. ನಾನು ಈಗ ಐದನೆ ಬಾರಿಗೆ ಶಾಸನಸಭೆಯ ಸದಸ್ಯನಾಗಿ ಪ್ರವೇಶ ಮಾಡುತ್ತಿದ್ದೇನೆ ಎನ್ನುವಂತಹ ಮಾತು ನಮ್ಮ ಕಡೆಯಿಂದ ಬರಬಾರದು. ಅದರ ಬದಲಿಗೆ ಜನಸಾಮಾನ್ಯರಿಗೆ ಈ ಶಾಸನಸಭೆಯ ಮುಖಾಂತರ ಕಾರ್ಯಾಂಗ, ನ್ಯಾಯಾಂಗ, ಮತ್ತು ಶಾಸಕಾಂಗ, ಇವುಗಳಲ್ಲಿ ಸರ್ವಶ್ರೇಷ್ಠವಾದದ್ದು ಶಾಸಕಾಂಗ ಎಂದು ನಾವು ಒಪ್ಪಿದ ಮೇಲೆ ಈ ಶಾಸನಸಭೆಯ ಮುಖಾಂತರ ನಾವು ನಮ್ಮ ಕರ್ತವ್ಯವನ್ನು ಎಷ್ಟರಮಟ್ಟಿಗೆ ನಿರ್ವಹಿಸಿದ್ದೇವೆ ಎಂಬುದರ ಬಗ್ಗೆ ನಾವು ಚಿಂತನೆ ಮಾಡುವಂತಹ ಅವಶ್ಯಕತೆ ಇದೆ. ಡಿಮಾಂಡ್ಸ್ ಬಗ್ಗೆ ನಾನು ಮಾತನಾಡಿದೆ. ಇದರ ಚಿಂತನೆ ಏನು, ಕನಿಷ್ಟ ಅವಶ್ಯಕತೆ ಇವತ್ತು ಏನು? ಇವತ್ತು ಅನ್ನ ವಸತಿ, ಬಟ್ಟೆ ಆರೋಗ್ಯ, ಶಿಕ್ಷಣ, ಹಿಂದಿಯಲ್ಲಿ ರೋಟಿ ಕಪಡಾ ಔರ್ ಮಕಾನ್ ಎಂದು ಹೇಳಿದಹಾಗೆ ಇದನ್ನು ಜನಸಾಮಾನ್ಯರಿಗೆ ಪೂರೈಸುವಲ್ಲಿ ನಾವು ಶಾಸನಸಭೆಯಲ್ಲಿ ಕರ್ತವ್ಯ ನಿರ್ವಹಿಸಿದ್ದೇವೆಯೇ? ಸ್ವಾತಂತ್ರ್ಯ ಬಂದನಂತರ ಅನೇಕ ವರ್ಷಗಳಲ್ಲಿ ಈ ಶಾಸನಸಭೆಯಲ್ಲಿ ಕೆಲಸ ಮಾಡಿದಂತಹ ಜನರು ಈ ಮೂಲಭೂತ ಅವಶ್ಯಕತೆಗಳನ್ನು ಜನರಿಗೆ ಕೊಡುವುದರಲ್ಲಿ ನಾವು ಎಷ್ಟರಮಟ್ಟಿಗೆ ಸಫಲರಾಗಿದ್ದೇವೆ ಎಂಬುದನ್ನು ಚಿಂತನೆ ಮಾಡುವಂತಹ ಅವಶ್ಯಕತೆ ಇದೆ. ಇದರ ಮೇಲೆ ದೊಡ್ಡ ಭಾಷಣವನ್ನು ಪ್ಲಾಟ್ ಫಾರಂ ಸ್ಪೀಚನ್ನು ಮಾಡುವಂತಹ ಅವಶ್ಯಕತೆ ಏನು ಇಲ್ಲ. ಆದರೆ ಕನಿಷ್ಟವಾಗಿ ಈ ಅನ್ನವನ್ನು ಪೂರೈಸುವಲ್ಲಿ ನಾವು ಇವತ್ತು ಎಷ್ಟರಮಟ್ಟಿಗೆ ಸಫಲವಾಗಿದ್ದೇವೆ ಎಂಬುದು ತಿಳಿದುಕೊಳ್ಳಬೇಕು. ನಾನು ಭಾರತ ದೇಶದ ಬಗ್ಗೆ ಮಾತನಾಡುತ್ತಿಲ್ಲ, ಜಗತ್ತಿನ ಬಗ್ಗೆ ಮಾತನಾಡುತ್ತಿಲ್ಲ. ಕರ್ನಾಟಕ ರಾಜ್ಯದ ಬಗ್ಗೆ ನಾನು ಮಾತನಾಡಲಿಕ್ಕೆ ಇಚ್ಛಿಸುತ್ತೇನೆ. ನಮ್ಮದೇ ಆದಂತಹ ವರದಿ ಸರ್ಕಾರ ಪ್ರಕಟಿಸಿದಂತಹ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಪ್ರಕಟಿಸಿದಂತಹ ವರದಿಯ ಪ್ರಕಾರ ಇವತ್ತು ರಾಜ್ಯದಲ್ಲಿ 1-2-95 ರವರೆಗೆ 51,74; 691 ತ್ರಿವರ್ಣ ಪಡಿತರ ಚೀಟಿಗಳನ್ನು ಕಡಿಮೆ ಇರುವ ಕುಟುಂಬದ ವಾರ್ಷಿಕ ಆದಾಯ 6400 ರೂಪಾಯಿಗಳು ಬಡತನ ರೇಖೆಗಿಂತ ಗ್ರಾಮಾಂತರ ಬಡ ಕುಟುಂಬಗಳನ್ನು ಗುರುತಿಸಿ ಹಾಗೂ ನಗರದ ಕೊಳಚೆ ಪ್ರದೇಶದ ಬಡ ಕುಟುಂಬಗಳು ಮತ್ತು ನೇಕಾರರ ಕುಟುಂಬಗಳಿಗೂ ವಿತರಣೆ ಮಾಡಲಾಗಿದೆ. ಇದು ಸರ್ಕಾರದ ಹೆಗ್ಗಳಿಕೆಯಲ್ಲ, ಇವತ್ತು 51 ಲಕ್ಷ ಕುಟುಂಬಗಳಿಗೆ 6,400ರೂಪಾಯಿಗಳಿಗಿಂತ ಕಡಿಮೆ ವರಮಾನವಿದೆ, ಅವರಿಗೆ ಎರಡು ಹೊತ್ತು ಊಟ ಮಾಡುವಂಥ ತಾಕತ್ತು ಇಲ್ಲ, ಅವರಿಗೆ ನಮ್ಮ ಘನ ಸರ್ಕಾರ 3.20 ರೂಪಾಯಿಗಳಿಗೆ 10 ಕೆ.ಜಿ. ಅಕ್ಕಿ 5 ಜನ ಇರುವ ಕುಟುಂಬಕ್ಕೆ ಒಂದು ಐದು ದಿವಸವಾದರೂ ಹೊಟ್ಟೆ ತುಂಬುವಷ್ಟು ಕೆಲಸ ಮಾಡಿದರೆ ಅಡ್ಡಿ ಇಲ್ಲ, ಇದಕ್ಕಾಗಿ ನಾನು ಮಾನ್ಯ ಮುಖ್ಯ ಮಂತ್ರಿಗಳನ್ನು ಅಭಿನಂದಿಸುತ್ತೇನೆ. ಈ ರೀತಿ ಇಷ್ಟು ವರ್ಷ ಆದ ಮೇಲೆ ಇದು 51 ಲಕ್ಷ

ಕುಟುಂಬಗಳು ಎಂದರೆ ಕನಿಷ್ಠ 5 ರಿಂದ ಗುಣಿಸಿದರೆ ಒಂದು ಕುಟುಂಬಕ್ಕೆ ಎರಡೂವರೆ ಕೋಟಿ ಜನ ಇದ್ದಾರೆ. 5 ಕೋಟಿ ಜನರಲ್ಲಿ ಎರಡೂವರೆ ಕೋಟಿಗಿಂತ ಸ್ವಲ್ಪ ಜಾಸ್ತಿ. ಇವತ್ತು 5 ಜನರ ಕುಟುಂಬವಲ್ಲ ಅದಕ್ಕಿಂತ ಹೆಚ್ಚೇ ಇದೆ; ಇಂಡಿಯನ್ ಆವರೇಜ್ ಇಷ್ಟು ಜನರಿಗೆ ಎರಡು ಹೊತ್ತು ಆಹಾರವನ್ನು ಪೂರೈಸುವುದರಲ್ಲಿ ನಾವು ತೀರಾ ವಿಫಲವಾಗಿದ್ದೇವೆ ಎಂಬ ಕಟು ಸತ್ಯವನ್ನು ನಾವು ಕರ್ನಾಟಕದ ಶಾಸಕರು ಒಪ್ಪಲೇಬೇಕು. ಇನ್ನು ವಸತಿ ಎಷ್ಟು ಜನರಿಗೆ ಮನೆ ಕೊಡುವಂತಹ ಕೆಲಸವನ್ನು ಮಾಡಿದ್ದೀರಿ. ಸರ್ಕಾರಗಳು ಅಧಿಕಾರಕ್ಕೆ ಬಂದತಕ್ಷಣದಲ್ಲಿ ನಾನು ಈ ವರ್ಷ ಒಂದು ಲಕ್ಷ ಬಡವರಿಗೆ ಮನೆಗಳನ್ನು ಕೊಡುತ್ತೇವೆ. ನಾನು ಈ ವರ್ಷ ಎರಡು ಲಕ್ಷ ಬಡವರಿಗೆ ಮನೆಗಳನ್ನು ಕೊಡುತ್ತೇನೆ ಎನ್ನುವಂತಹ ಮಾತನ್ನು ಇವತ್ತು ಹೇಳುತ್ತಿದ್ದಾರೆ. ಈ ವರ್ಷ ನಮ್ಮ ಸರ್ಕಾರ ಪ್ರಕಟಣೆ ಮಾಡಿದ ಪ್ರಕಾರ ಎರಡು ಲಕ್ಷಕ್ಕಿಂತ ಜಾಸ್ತಿ ಜನರಿಗೆ ನಾವು ಮನೆಗಳನ್ನು ಕೊಡುವಂತಹ ಕೆಲಸವನ್ನು ಮಾಡಲಿದ್ದೇವೆ ಎಂಬುದನ್ನು ಒಂದು ಪ್ರಚಾರದ ದೃಷ್ಟಿಯಿಂದಲೊ ಅಥವಾ ಹೆಗ್ಗಳಿಕೆಯನ್ನು ತೆಗೆದುಕೊಳ್ಳುವುದಕ್ಕೊ ಹೇಳುವಂಥಾದ್ದು ತಮಗೆ ಗೊತ್ತಿದೆ. ಇದಕ್ಕೆ ನಾವು ಕೊಡುವಂತಹ ಹಣವೆಷ್ಟು? 15 ಸಾವಿರ ರೂಪಾಯಿಗಳು. ಮಾನ್ಯ ವಸತಿ ಸಚಿವರನ್ನು ಭೇಟಿಯಾದಾಗ ಅವರು ಸ್ವಲ್ಪ ಕಾಯಿರಿ, ಇಪ್ಪತ್ತು ಸಾವಿರ ರೂಪಾಯಿಗಳನ್ನು ಮಾಡಿ ನಾವು ಕೊಡುತ್ತೇವೆಂಬ ಮಾತನ್ನು ಇವತ್ತು ಹೇಳಲಿಕ್ಕೆ ಪ್ರಾರಂಭ ಮಾಡಿದ್ದೇವೆ. ಇದನ್ನು ಯಾವಾಗ ಕೊಡುತ್ತಾರೆಂಬುದು ಒಂದು ಕಗ್ಗಂಟಾಗಿದೆ. ಈ ಶಾಸನಸಭೆಯನ್ನು ಪ್ರವೇಶ ಮಾಡಿದ ತಕ್ಷಣ ಮಾನ್ಯ ರಾಜ್ಯಪಾಲರು ಭಾಷಣ ಮಾಡಿದಾಗ I wanted to conceive that I will talk ಆಮೇಲೆ ಅವರು ಎರಡನೇ ಬಾರಿ ಜಂಟಿ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಆಗ ಅವರು ಏನಾದರೂ ಹೇಳಬೇಕೆಂದು I conceived for the second time that I will talk ಮೂರನೆ ಬಾರಿ ಬಜೆಟ್ ಮಂಡಿಸಿದಾಗ I conceived that I will be able to express my impression. Shakespeare conceived thrice but he did not deliver. But fortunately I conceived thrice and at the fourth time, I am delivering. ಒಂಭತ್ತು ತಿಂಗಳು ಆದಮೇಲೆ ನಾನು ಡೆಲಿವರಿ ಮಾಡುತ್ತಿದ್ದೇನೆ ನನ್ನ ಭಾಷಣವನ್ನು, ದೌರ್ಭಾಗ್ಯ ಈ ಸರ್ಕಾರ ಅಧಿಕಾರಕ್ಕೆ ಬಂದು ಒಂಭತ್ತು ತಿಂಗಳಾದರೂ ಕೂಡ it is not delivering the goods to the common man. It has not been able to delivery anything.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಉಪಾಧ್ಯಕ್ಷರೆ, ಸುಮಾರು 16 ಬೇಡಿಕೆಗಳು ಇವೆ. ಮಾನ್ಯ ಸದಸ್ಯರು ಅದರ ಮೇಲೆ ಮಾತನಾಡುತ್ತಿದ್ದಾರೆ. ಈಗಾಗಲೇ ವಸತಿ, ಆಹಾರ ಬಂತು, ಶಿಕ್ಷಣ ಇಲಾಖೆ ಮೇಲೆ ಹೀಗೆ ಎಲ್ಲದರ ಮೇಲೆ ಮಾತನಾಡುತ್ತಿದ್ದಾರೆ. ಆದರೆ ಸಂಬಂಧಪಟ್ಟಂತಹ ಮಂತ್ರಿಗಳು ಹಾಜರು ಇರಲಿಲ್ಲವೆಂದರೆ ನಾವು ಮಾತನಾಡಿದ್ದುದನ್ನು ಬರೆದುಕೊಳ್ಳುವವರು ಯಾರು? ಅದಕ್ಕೆ ಉತ್ತರವನ್ನು ಕೊಡುವವರು ಯಾರು? ಅದಕ್ಕೆ ಸ್ಪಂದನೆ ಮಾಡುವವರು ಯಾರು ? ಯಾರ ಯಾರ ಡಿಮಾಂಡ್ ಇದೆಯೋ? ಅವರು ಹೇಳಬಹುದು.

ಶ್ರೀ ರಮೇಶ್ ಸಿ.ಜಿಗಜಿಣಗಿ:- ನೀವು ಕೇಳುವುದಕ್ಕೆ ಉತ್ತರ ಕೊಡುವುದಕ್ಕೆ...

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನಿಮಗೆ ಸಂಬಂಧಪಟ್ಟದ್ದುದು ಸೋಷಿಯಲ್

ವೆಲ್‌ಫೇರ್. ಅದರ ಬಗ್ಗೆ ನೀವು ಹೇಳಬಹುದು. 16 ಡಿಮಾಂಡ್ಸ್ ಇವೆ. ಸುಮಾರು 9 ಮಂತ್ರಿಗಳ ಇಲಾಖೆಗಳು ಇವೆ.ಅದಕ್ಕಾಗಿ ಒಂಬತ್ತು ಇಲಾಖೆಗಳ ಮಂತ್ರಿಗಳು ಇಲ್ಲಿ ಇದ್ದರೆ ಅವರು ಹೇಳುವುದಕ್ಕೆ ಅರ್ಥ ಇದೆ. ಇಲ್ಲದಿದ್ದರೆ ನಾವು ಎಲ್ಲರೂ ಇದ್ದೇವೆ ಅಂದರೆ ಹಾಗೇನಾದರೂ ಬೇರೆ ಪ್ರಶ್ನೆ ಇದ್ದಾಗ, ಯಾವುದಾದರು ಜನರಲ್ ಇದ್ದಾಗ ನಾನು ಬರೆದುಕೊಳ್ಳುತ್ತಿದ್ದೇನೆ ಮುಖ್ಯಮಂತ್ರಿಗಳ ಪರವಾಗಿ, ಅವರ ಪರವಾಗಿ ಅಂದರೆ ನಡೆಯುತ್ತದೆ. ಆದರೆ ನೀವು ಡಿಮ್ಯಾಂಡನ್ನು ಮೂವ್‌ಮಾಡಿರಿ, ನಿಮ್ಮ ಡಿಮ್ಯಾಂಡ್ ಮೇಲೆ ಅವರು ಏನು ಮಾತನಾಡುತ್ತಾರೆ ಅಂತ ಹೇಳಿ ಕೇಳುವುದಕ್ಕೂ ಕೂಡ ಮಂತ್ರಿಗಳು ಇಲ್ಲಿ ಇಲ್ಲದೆ ಹೋದರೆ ಅಧ್ಯಕ್ಷರೆ ನಾವು ಯಾರಿಗೆ ಹೇಳಬೇಕು? ಕೃಷಿ ಮಂತ್ರಿಗಳಿಲ್ಲ, ವಾರ್ತಾ ಮತ್ತು ಪ್ರಚಾರ ಇಲಾಖೆಯ ಮಂತ್ರಿಗಳಿಲ್ಲ, ಪಶುಸಂಗೋಪನಾ ಮಂತ್ರಿಗಳು ಈಗ ಬಂದಿದ್ದಾರೆ, ಮೀನುಗಾರಿಕಾ ಸಚಿವರು ಇಲ್ಲ ಇದು ಏನಾಗುತ್ತದೆ ಅಂದರೆ ಈ ಸದನಕ್ಕೆ ಅಗೌರವವನ್ನು ತರತಕ್ಕಂಥ ರೀತಿಯಲ್ಲಿ ಸರ್ಕಾರದವರು ನಡೆದುಕೊಳ್ಳುತ್ತಿದ್ದಾರೆ. This I have to say. Where is the Power Minister, where is the Information Minister, where is the Agriculture Minister and where is the Fisheries Minister? ಇವತ್ತು 16 ಬೇಡಿಕೆಗಳು ಇವೆ, ಚಿತ್ತರಂಜನ್‌ರವರೆ ನೀವು ಯಾರಿಗೆ ಹೇಳುತ್ತಿದ್ದೀರಿ, ನೀವು ಮಾತನಾಡುವುದನ್ನು ಯಾರು ಬರೆದುಕೊಳ್ಳುತ್ತಿದ್ದಾರೆ, ಯಾರಿಗೆ ಹೇಳಿದಿರಿ, ಸಂಬಂಧಪಟ್ಟ ಮಂತ್ರಿಗಳು ಒಬ್ಬರಾದರೂ ಇದ್ದಾರೆಯೆ?......

ಶ್ರೀ ರಮೇಶ್.ಸಿ.ಜಿಗಜಿಣಗಿ:- ಅವರು ಹೇಳುತ್ತಿರುವುದನ್ನು ನಾವು ಬರೆದುಕೊಳ್ಳುತ್ತಿದ್ದೇವೆ..

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಏನು ಬರೆದುಕೊಂಡಿದ್ದೀರಿ, ಸುಮ್ಮನೆ ಆ ರೀತಿಯಾಗಿ ಹೇಳಬೇಡಿ......

ಶ್ರೀ ಬಿ.ಬಿ.ಚಿಮ್ಮನಕಟ್ಟಿ:- ಮಾನ್ಯ ಅಧ್ಯಕ್ಷರೆ, ನೀವು ಹೇಳಿದ್ದನ್ನೆಲ್ಲಾ ಬರೆದುಕೊಳ್ಳುತ್ತಿದ್ದೇವೆ ಎಂದು ಹೇಳಿದೆನಲ್ಲ ಎಂದು ಹೇಳಿದಮೇಲೆ ಏನು ಬರೆದುಕೊಂಡಿದ್ದಾರೆ ಎಂಬುದನ್ನು ಮಾನ್ಯ ಮಂತ್ರಿಗಳು ಹೇಳಲಿ. ದಯವಿಟ್ಟು ಅವರು ಹೇಳುವವರೆಗೆ ನಾವು ಮುಂದುವರೆಸಬಾರದು. ಅವರು ಏನನ್ನು ಬರೆದುಕೊಂಡಿದ್ದಾರೆ ಎಂಬುದನ್ನು ಹೇಳಲಿ, ಆಮೇಲೆ ಚಿತ್ತರಂಜನ್‌ರವರಿಗೆ ಮಾತನಾಡುವುದಕ್ಕೆ ಹೇಳಿ ದಯವಿಟ್ಟು. ತಾವು ಏನು ಬರೆದುಕೊಂಡಿದ್ದೀರಿ ಎಂಬುದನ್ನು ಹೇಳಿ, ಇವತ್ತು ನಾವು ನಿಮ್ಮಿಂದ ತಿಳಿದುಕೊಳ್ಳದೆ ಹೋದರೆ ಸದನದಿಂದ ಸಭಾತ್ಯಾಗ ಮಾಡುತ್ತೇವೆ.....

ಶ್ರೀ ಆಯನೂರ್ ಮಂಜುನಾಥ್:- ತಾವು ಸರ್‌ನಾಯಕ್‌ರವರ ಹತ್ತಿರ ಮಾತನಾಡಿಕೊಂಡು ಕುಳಿತಿದ್ದಿರಿ, ಅದನ್ನು ನಾವು ನೋಡಿದ್ದೇವೆ. ಮಂತ್ರಿಗಳು ಅದೇನನ್ನು ಬರೆದುಕೊಂಡಿದ್ದಾರೆ ಎನ್ನುವುದನ್ನು ದಯಮಾಡಿ ಹೇಳಬೇಕು. ನಾವು ಹೊಸ ಸದಸ್ಯರು ಅಂತ ಹಗುರ ತೆಗೆದುಕೊಳ್ಳುವುದು ಬೇಡ.

ಉಪಾಧ್ಯಕ್ಷರು:- ಈಗ ಮಂತ್ರಿಗಳನ್ನು ಕರೆಯಿಸುವುದಕ್ಕೆ ಹೇಳಿದ್ದೇನೆ, ಅವರುಗಳು ಬರುತ್ತಾರೆ, ಡಾ॥ ಚಿತ್ತರಂಜನ್‌ರವರೆ ತಾವು ಮುಂದುವರೆಸಿ.

ಡಾ॥ಯು.ಚಿತ್ತರಂಜನ್:- ಮಂತ್ರಿಗಳಿಗೆ ರೆಕಾರ್ಡ್‌ಗಳನ್ನು ತರಿಸಿಕೊಂಡು ಓದುವಂಥ ಅಭ್ಯಾಸ ಇದೆ ಎಂದು ಹೇಳಿ I will take it granted that they will do the

job ಎಂದು ಹೇಳಿ ನಾನು ನನ್ನ ಮಾತನ್ನು ಮುಂದುವರೆಸುತ್ತೇನೆ. ಎರಡು ಲಕ್ಷ ಕುಟುಂಬಗಳಿಗೆ ಮನೆಯನ್ನು ಕೊಡುತ್ತೇನೆ ಎನ್ನುವಂತ ಮಾತನ್ನು ಹೇಳಿದ್ದಾರೆ. ಅದು ಹದಿನೈದು ಸಾವಿರ, ಇಪ್ಪತ್ತು ಸಾವಿರ. ಸ್ವಾಮಿ, ಇಲ್ಲಿ ಬೆಂಗಳೂರಿನಲ್ಲಿ ಕೆಲವು ಮಂತ್ರಿಗಳು ಸುಮಾರು 90 ಲಕ್ಷ ರೂಪಾಯಿಯ ಒಂದು ಕೋಟಿ ರೂಪಾಯಿ ಬೆಲೆಯ ಮನೆಗಳಲ್ಲಿ ವಾಸಿಸುತ್ತಾರೆ ಎಂಬುದಾಗಿ ಕೇಳಿದ್ದೇನೆ. ಬಹುಶಃ 50 ಲಕ್ಷ, 30 ಲಕ್ಷಕ್ಕಿಂತ ಜಾಸ್ತಿ ಇರುವಂಥ ಮನೆಗಳ ಸಂಖ್ಯೆ ಬೆಂಗಳೂರು ನಗರದಲ್ಲಿ ಎಷ್ಟು ಇವೆ ಎಂಬುದು ನನಗೆ ಗೊತ್ತಿಲ್ಲ ನಾನು ಒಂದು ಹಳ್ಳಿಯಿಂದ ಬಂದಿದ್ದೇನೆ. Have you got a vision? ಹದಿನೈದು ಸಾವಿರದಲ್ಲಿ ಆ ಬಡವ ಏನು ಮನೆಯನ್ನು ನಿರ್ಮಾಣ ಮಾಡುತ್ತಾನೆ. Have you applied your mind ಬಜೆಟ್ ಪ್ರಾವಿಷನ್ ಇಷ್ಟು ಉಂಟು, ಭಾಗಿಸಿ, ಗುಣಿಸಿ ಅಷ್ಟು ಹಾಕಿಬಿಟ್ಟಿರಿ. ಹದಿನೈದು ಸಾವಿರ ರೂಪಾಯಿಯಲ್ಲಿ ಒಂದು ಮನೆಯನ್ನು ಕಟ್ಟಿಕೊಳ್ಳಪ್ಪ ಎಂದು. ಇವತ್ತು ನಮ್ಮ ಪೇಟೆಯಲ್ಲಿರುವಂಥ ಮನೆಯ ಬಾತ್‌ರೂಮಿಗೆ ಐವತ್ತು ಸಾವಿರ ರೂಪಾಯಿ, ಎಪ್ಪತ್ತೈದು ಸಾವಿರ ರೂಪಾಯಿ, ಒಂದು ಲಕ್ಷ ರೂಪಾಯಿ ಖರ್ಚುಮಾಡುತ್ತೇವೆ. ಇದು ನಮ್ಮ ಆಯವ್ಯಯ ಪತ್ರದಲ್ಲಿ ಬಡವನನ್ನು, ಮನೆ ಇಲ್ಲದಿದ್ದವನನ್ನು ನೋಡುವಂತಹ ದೃಷ್ಟಿಕೋನವನ್ನು ನಾನು ಖಂಡಿಸುತ್ತೇನೆ. ಅದು ಹೋಗಲಿ ಬಟ್ಟೆ, ಎಷ್ಟು ಬಟ್ಟೆಯನ್ನು ಕೊಟ್ಟಿದ್ದೀರಿ, ಇವತ್ತು ನಮ್ಮ ಐದೂವರೆ ಕೋಟಿ ಜನರಲ್ಲಿ ಎಷ್ಟು ಜನ ಬಟ್ಟೆಯನ್ನು ಹಾಕಿಕೊಂಡಿದ್ದಾರೆ. ಶಾಲೆಗೆ ಮಕ್ಕಳನ್ನು ಕಳುಹಿಸಲಿಕ್ಕೆ, ಆ ಮಗುವಿಗೆ ಹಾಕಲಿಕ್ಕೆ ಬಟ್ಟೆ ಇಲ್ಲ. ಶಹಭಾಷ್‌ಗಿರಿ ಹೇಳುತ್ತಿದ್ದೀರಿ, ಈ ಬಾರಿ ಬಜೆಟ್‌ನಲ್ಲಿ ನಾವು 17 ಕೋಟಿ ಒದಗಿಸಿದ್ದೇವೆ. 17 ಕೋಟಿ ರೂಪಾಯಿಯ ವಸ್ತ್ರವನ್ನು ಶಾಲೆಯ ಮಕ್ಕಳಿಗೋಸ್ಕರ ಕೊಡುತ್ತೇವೆ ಎನ್ನುವಂಥ ಮಾತನ್ನು ಇವತ್ತು ಹೇಳುವಂಥ ಸಂದರ್ಭ ಕನಿಷ್ಟ ಅವಶ್ಯಕತೆಗಳನ್ನು ಪೂರೈಸುವಂತಹ ಕೆಲಸ ಆಗಿಲ್ಲ. ಹೋಗಲಿ ಆರೋಗ್ಯದ ಬಗ್ಗೆ ನಾನೊಬ್ಬ ವೈದ್ಯನಾಗಿ ಮಾತನಾಡಿದರೆ ನಾನೇ ಕಣ್ಣೀರು ಬಿಡಬೇಕು, ನಾನೇ ಅರಣ್ಯರೋಧನ ಮಾಡಬೇಕು ಏಕೆಂದರೆ ಮಲೇರಿಯಾ ಬಗ್ಗೆ ಮಾತನಾಡುವಾಗ ನಾನು ಈ ಸರ್ಕಾರದ ಕಾಳಜಿ ಎಷ್ಟು ಇದೆ ಎಂಬುದನ್ನು ನೋಡಿದೆ. ಮಲೇರಿಯಾ ಬಂದು ಎಷ್ಟು ಜನ ಸತ್ತಿದ್ದಾರೆ ಎಂಬುದನ್ನು ನಾನು ಕಣ್ಣಾರೆ ನೋಡಿದ್ದೇನೆ. ಮಾನ್ಯ ಆರೋಗ್ಯ ಮಂತ್ರಿಗಳು ಯಾರು ಸತ್ತಿಲ್ಲ ಎನ್ನುವಂಥ ಮಾತನ್ನು ಇವತ್ತು ಈ ಸದನದಲ್ಲಿ ಹೇಳುವಂತ ಕೆಲಸವನ್ನು ಮಾಡುವಂತಹದ್ದು ಅಷ್ಟು ಸೂಕ್ತವಲ್ಲ. ಈ ರೀತಿ ಮಾಡುತ್ತಿದ್ದಾರೆ. ಹಾಗಾಗಿ ಇವತ್ತು ಸಾಮಾನ್ಯವಾದಂಥ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ, ತಾಲ್ಲೂಕು ಕೇಂದ್ರಗಳಲ್ಲಿರುವಂಥ ಆಸ್ಪತ್ರೆಗಳಲ್ಲಿ ಒಂದು ಬಾಟಲ್ ಗ್ಲೂಕೋಸ್ ಇಲ್ಲದೆ ಎಷ್ಟು ಮಕ್ಕಳು ಸಾಯುತ್ತಿದ್ದಾರೆ. ಒಂದೂವರೆ ರೂಪಾಯಿಯ ಒಂದು ಆ್ಯಂಟಿ ಬಯೋಟಿಕ್ ಇಲ್ಲದೆ ಎಷ್ಟು ಮಕ್ಕಳು ಸಾಯುತ್ತಿದ್ದಾರೆ. ಒಂದು ಬೇಕು ಎರಡು ಸಾಕು ಎಂದು ನಾವು ಹೇಳುತ್ತಿದ್ದೇವೆ, ಆ ಒಂದು ಮಗುವನ್ನು ಪಡೆದಂಥ ತಾಯಿ ಐದು ರೂಪಾಯಿಯ ಔಷಧಿಯನ್ನು ಸರ್ಕಾರಿ ಆಸ್ಪತ್ರೆಯಲ್ಲಿ ಕೊಡಿಸಲಿಕ್ಕೆ ಆಗದೆ ಆ ಮಗು ಪ್ರಾಣ ಬಿಟ್ಟಾಗ ನಾವು ಒಂದು ಬೇಕು ಎರಡು ಸಾಕು ಎಂಬ ಕೋರಿಕೆಯನ್ನು ಯಾರ ತಲೆಗೆ ಬಿಚ್ಚಬೇಕು ಸ್ವಾಮಿ. ಈ ದೃಷ್ಟಿಕೋನ ನಮಗೆ ಬೇಕು. ಸನ್ಮಾನ್ಯ ಆರೋಗ್ಯ ಮಂತ್ರಿಗಳು ಮಾತನಾಡುವಂತ ಸಂದರ್ಭದಲ್ಲಿ ಇಡೀ ಜಗತ್ತಿನಲ್ಲಿ ಎಲ್ಲಿಯೂ ಕೂಡ ಎಲ್ಲರಿಗೂ ಬೇಕಾದಂಥ ಔಷಧಿಗಳನ್ನು ಪೂರೈಸುವಂತ ವ್ಯವಸ್ಥೆ ಇಲ್ಲ ಎಂದು ಹೇಳಿದರು. ಇಂತಹ ಸ್ಟೇಟ್‌ಮೆಂಟ್‌ಗಳನ್ನು ಕೇಳಿ ಬಹಳ ಬೇಸರ ಆಗುತ್ತದೆ. ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಆರೋಗ್ಯ ಮಂತ್ರಿಗಳನ್ನು ಹಾಗೂ ಸಂಬಂಧಪಟ್ಟವರನ್ನು, ಆಸ್ಟ್ರೇಲಿಯಾಕ್ಕೆ

ನ್ಯೂಜಿಲ್ಯಾಂಡಿಗೆ, ಇಂಗ್ಲೆಂಡಿಗೆ, ಅಮೆರಿಕಾಕ್ಕೆ ಪ್ರವಾಸ ಮಾಡಲಿಕ್ಕಾದರೂ ಕಳುಹಿಸಿಕೊಡಿ. ಒಂದು ರೂಪಾಯಿ ಇಂಜೆಕ್ಷನ್ ಅಥವಾ ಒಂದು ರೂಪಾಯಿ ವಸ್ತು ಇಲ್ಲದೆ ಯಾರಾದರು ಸತ್ತರೆ ಅಲ್ಲಿ you will be sued for Lakhs, you will be sued for thousands of dollars. ಅದನ್ನು ಇಲ್ಲಿ ಹೇಳುವಂಥ ಅವಶ್ಯಕತೆ ಇದೆ. ಇವತ್ತು ಪ್ರೈಮರಿ ಹೆಲ್ತ್ ನೀಡ್ಸ್ ಇವತ್ತು ಐದೂವರೆ ಕೋಟಿ ಜನರಲ್ಲಿ ಅರ್ಧಾಂಶ ಜನರಿಗೆ ಕೊಡುವಂಥ ಶಕ್ತಿ ನಮಗೆ ಬಂದಿಲ್ಲ, ನಾವು ಆಯವ್ಯಯವನ್ನು ಮಂಡಿಸುತ್ತಿದ್ದೇವೆ. ಇನ್ನು ಶಿಕ್ಷಣದ ಬಗ್ಗೆ ನಾನು ವಿಶೇಷವಾಗಿ ಮಾತನಾಡಬಯಸುತ್ತೇನೆ. ಇವತ್ತು ಪ್ರಾಥಮಿಕ ಶಿಕ್ಷಣ ಕೊಡುವಂತಹ ವಿಚಾರ ನಮಗೆ ಇದೆಯಾ? ನಾವು ಬಹಳ ಹೇಳುತ್ತೇವೆ. ನಾವು ಸಾಮಾಜಿಕ ನ್ಯಾಯ, ನಾವು ಹಿಂದುಳಿದ ವರ್ಗದವರ ಉದ್ಧಾರ ಮಾಡುತ್ತೇವೆ, ಬಡವರ ಕಲ್ಯಾಣ ಮಾಡುತ್ತೇವೆ, ಹರಿಜನಗಿರಿಜನರ ಕಲ್ಯಾಣ ಮಾಡುತ್ತೇವೆ ಎನ್ನುವಂತಹ ಮಾತನ್ನು ಹೇಳುತ್ತೀರಿ. ಚಿನ್ನಪ್ಪರೆಡ್ಡಿ ಆಯೋಗದ ವಿಚಾರಗಳನ್ನು, ಅವರು ಹೇಳಿದಂತಹ ವಿಚಾರಗಳನ್ನು ನಮ್ಮ ರಾಜಕೀಯ ಲಾಭಕ್ಕೋಸ್ಕರ, ಚುನಾವಣೆಯಲ್ಲಿ ಪ್ರಾತಿನಿಧ್ಯ ಕೊಡುವುದಕ್ಕಷ್ಟೆ ಮಾತ್ರ ಉಪಯೋಗಿಸಿಕೊಂಡು ಸ್ವಾಮಿ ಸನ್ಮಾನ್ಯ ಚಿನ್ನಪ್ಪ ರೆಡ್ಡಿಯವರು ಏನು ಹೇಳಿದ್ದಾರೆ.

"To my shock I discovered that in the State of Karnataka there are 13,024 single teacher schools as against the total of 20,830 primary, secondary and high schools in the entire State. The state of Karnataka leads all other States and has the highest percentage of such schools"

ಇದು ನಮಗೆ ಕೀರ್ತಿಯನ್ನು ತರುವುದಿಲ್ಲ.

"The number of pupils attending these 13,024 single teacher primary schools in Karnataka is 8,34,885. The naked fact, therefore, is that 8,34,885 pupils in the primary schools of Karnataka State are receiving next to no education, since it is humanly impossible for a single teacher to manage four different classes teaching different subjects simultaneously. What makes it even worse is a large number of these schools are also single roomed"

ಒಂದೇ ಕೋಣೆಯಲ್ಲಿ, ನಮ್ಮ ಭಾಷೆಯಲ್ಲಿ ನಮ್ಮ ಊರಿನಲ್ಲಿ ಹೇಳುತ್ತಾರೆ ಗಂಟಿಗಳು ಎಂದು. ಇಲ್ಲಿ ಜಾನುವಾರು ಅಂತ ಹೇಳುತ್ತಾರೆ, ದನಕರು ಅಂತ ಹೇಳುತ್ತಾರೊ ಏನೋ ಅವುಗಳನ್ನು ಕೂಡಿ ಹಾಕಿದ ಹಾಗೆ ನಾವು ಅವರನ್ನು ಕೂಡಿ ಹಾಕುತ್ತಿದ್ದೇವೆ.

"18,383 are single roomed while 3796 are two roomed. Out of 23,023 primary schools, only 5380 have adequate playgrounds. out of 14,969 pre primary schools in Karnataka State, only 4956 have adequate grounds. Out of 3572

secondary schools, only 1677 have adequate play grounds.

ಇನ್ನೂ ಇದೆ ಬಿಡಿ. ಈ ರೀತಿ ಶಿಕ್ಷಣದ ಬಗ್ಗೆ ಮಾನ್ಯ ಚಿನ್ನಪ್ಪರೆಡ್ಡಿಯವರು ಇದನ್ನು ಕೊಟ್ಟಿದ್ದಾರೆ ನಮ್ಮ ಸರ್ಕಾರ ಇದರ ಪ್ರಕಾರ ನಡೆಯಬೇಕು ಎಂದು ಮಾಡುತ್ತಿದೆ. ಬೇಡಿಕೆಯನ್ನು ಮಂಡಿಸುವಾಗ ಇದನ್ನು ಗಮನದಲ್ಲಿ ತೆಗೆದುಕೊಳ್ಳಲಾಗಿದೆಯೆ ಎನ್ನುವಂತದ್ದು ನನ್ನ ಪ್ರಶ್ನೆ. ಹಾಗಾಗಿ ಪೂರ್ವಭಾವಿಯಾಗಿ ನಾನು ಹೇಳಲಿಕ್ಕೆ ಇಚ್ಛೆ ಪಟ್ಟಂತಹ ವಿಚಾರ ಏನೆಂದರೆ, there should be a vision ಈ ಬೇಡಿಕೆಗಳನ್ನು ಇಡುವಾಗ ನಾವು ಏನು ಮಾಡಬೇಕು ಎನ್ನುವಂಥ ಗುರಿ ಇರಬೇಕಾಗುತ್ತದೆ. ನಮ್ಮ ಕಾರ್ಯಕ್ರಮದಿಂದ ಏನು ಆಗುತ್ತದೆ ಎನ್ನುವುದನ್ನು ನಾವು ತಿಳಿದುಕೊಳ್ಳುವಂತಹ ಅವಶ್ಯಕತೆ ಇದೆ. ಇವತ್ತು ಅನೇಕ ಕ್ಷೇತ್ರಗಳಲ್ಲಿ ನಾವು ನಮ್ಮ ಬೇಡಿಕೆಗಳನ್ನು ಮಂಡಿಸುತ್ತೇವೆ. ಅದನ್ನು ಒಂದೊಂದಾಗಿ ನಾನು ಹೇಳಲಿಕ್ಕೆ ಇಚ್ಛೆಪಟ್ಟರೂ ಕೂಡ ಗ್ಲೇರಿಂಗ್ ಆಗಿ ಇವತ್ತು ಶಿಕ್ಷಣದ ಬಗ್ಗೆ ಮಾತನಾಡುವ ಮೊದಲು ಒಂದು ಉದಾಹರಣೆಯನ್ನು ಕೊಟ್ಟು ನಾನು ಮುಂದೆ ಹೋಗುವುದಕ್ಕೆ ಇಚ್ಛೆಪಡುತ್ತೇನೆ. ಆರುನೂರು ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣವನ್ನು ಗಳಿಸುವಂತಹ ಮೀನುಗಾರಿಕಾ ಇಲಾಖೆ ಉತ್ತರ ಕನ್ನಡ ದಕ್ಷಿಣ ಕನ್ನಡದ 315 ಕಿಲೋ ಮೀಟರ್ ಕರಾವಳಿಯಲ್ಲಿ ಇರುವಂತಹ ಆರು ಲಕ್ಷ ಜನ ಅದರ ಮೇಲೆ ಅವಲಂಬಿತರಾಗಿದ್ದಾರೆ. ಇದು 182 ಕೋಟಿ ರೂಪಾಯಿಗಳ ವಿದೇಶಿ ವಿನಿಮಯವನ್ನು ಗಳಿಸುವಂತಹ ಶಕ್ತಿಯನ್ನು ಹೊಂದಿದೆ. 600 ಕೋಟಿ ರೂಪಾಯಿಗಳಿಂದ 2,000 ಕೋಟಿ ರೂಪಾಯಿಗಳವರೆಗೆ ಏರಿಸಬಲ್ಲ ಶಕ್ತಿ ಇವತ್ತು ನಮ್ಮ ನಾಡಿನ ಮೀನುಗಾರರಿಗೆ ಇದೆ. ನಮ್ಮ ಸರ್ಕಾರದಿಂದ 8ಕೋಟಿ ರೂಪಾಯಿ, ಕೇಂದ್ರ ಸರ್ಕಾರದಿಂದ 12 ಕೋಟಿ ರೂಪಾಯಿ, ಒಟ್ಟಾರೆ 20 ಕೋಟಿ ರೂಪಾಯಿ ಅನುದಾನವನ್ನು ನಾವು ಈ ವಿಭಾಗಕ್ಕೆ ಇಟ್ಟಿದ್ದೇವೆ. 20 ಕೋಟಿ ರೂಪಾಯಿಯ ಅನುದಾನವನ್ನು ಇಡುವಂತಹ ಸಂದರ್ಭ ಇದೆ, ಮಾನ್ಯ ಮೀನುಗಾರಿಕೆ ಮಂತ್ರಿಗಳು ನನ್ನ ಸ್ನೇಹಿತರು, ನಾನು ಬಹಳ ವರ್ಷಗಳಿಂದ ಅವರನ್ನು ಚೆನ್ನಾಗಿ ಬಲ್ಲೆ. ತುಂಬಾ ಕೆಪಾಸಿಟಿ, ಎಫಿಷಿಯೆನ್ಸಿ, ಪ್ರಾಮಾಣಿಕತೆ ಇರುವಂತಹವರು. 8 ಕೋಟಿ ರೂಪಾಯಿ ಮೀನುಗಾರಿಕೆಗೆ ಕೊಟ್ಟು ಅವರನ್ನು ಒಬ್ಬ ಮಂತ್ರಿಯನ್ನಾಗಿ ಮಾಡಿದ್ದೀರಿ. ಈ ಲೇಖಾನುದಾನವನ್ನು ನಿಮ್ಮ ಡಿಮ್ಯಾಂಡ್ಸ್‌ನ್ನು ಮಂಡಿಸುವಾಗ, ಈ ಮೀನುಗಾರಿಕೆ ಖಾತೆಯಿಂದ 600-700 ಕೋಟಿ ರೂಪಾಯಿಗಳ ವಿದೇಶಿ ವಿನಿಮಯವನ್ನು ನಾವು ಗಳಿಸಬಹುದು ಎನ್ನುವ ಒಂದು ವಿಷನ್ ಆ ರೀತಿಯಾದಂತಹ ಒಂದು ದೃಷ್ಟಿಕೋನ, ಆ ರೀತಿಯಾದಂತಹ ವಿಚಾರ ನಮ್ಮಲ್ಲಿ ಇತ್ತೆ? ಅದು ಇಲ್ಲದೇ ಈಗ ನೀವು ಬೇಡಿಕೆಯನ್ನು ಮಂಡಿಸಿ, ನಿಮ್ಮ ಸಂಖ್ಯಾಬಲದಿಂದ ಅದನ್ನು ಮಂಜೂರು ಮಾಡಿಸಿಕೊಳ್ಳಬಹುದು. ಬೇಡಿಕೆಯನ್ನು ಮತಕ್ಕೆ ಹಾಕಿದಾಗ, ಅದು ಮಂಜೂರಾಗುತ್ತದೆ. ಆದರೆ ಅದರ ಪರಿಣಾಮ ಏನು? ಎಷ್ಟು ಲಕ್ಷ ಜನರಿಗೆ ಅನ್ಯಾಯ ಆಗುವಂತಹ ಕೆಲಸವನ್ನು ನಾವು ಇವತ್ತು ಈ ಶಾಸನ ಸಭೆಯಲ್ಲಿ ಕುಳಿತುಕೊಂಡು ಮಾಡುತ್ತಿದ್ದೇವೆ. ಲಕ್ಷಾಂತರ ಮೀನುಗಾರರಿಗೆ, ಮೀನುಗಾರರಿಗೆ ಮಾತ್ರವಲ್ಲ, ಕರ್ನಾಟಕ ರಾಜ್ಯಕ್ಕೆ, ಭಾರತ ದೇಶಕ್ಕೆ ವಿದೇಶಿ ವಿನಿಮಯವನ್ನು ಗಳಿಸುವಂತಹ ಈ ಇಲಾಖೆಗೆ, ಜುಜುಬಿ 8 ಕೋಟಿ ರೂಪಾಯಿ ನೀಡಿ, ಆ ಬಗ್ಗೆ ಬೇಡಿಕೆ ಮಂಡಿಸಿ, ಅದನ್ನು ಮತಕ್ಕೆ ಹಾಕಿ, ಅದಕ್ಕೆ ನಮ್ಮ ಸಹಮತಿಯನ್ನು ಕೇಳುತ್ತಿರುವಂತಹ ಕೆಲಸ ನಮಗೆ ಶೋಭೆ ತರುವುದಿಲ್ಲ. ನಾವು ಕೂಡ ಇದರಲ್ಲಿ ಭಾಗಿಗಳಾಗಬೇಕಾಗುತ್ತದೆ. ನಾವು ಶಾಸಕರಾದ ಮೇಲೆ, ನೀವು ಒಂದು ಸಲ ಬೇಡಿಕೆಯನ್ನು ಮಂಜೂರು ಮಾಡಿಸಿಕೊಂಡ ಮೇಲೆ, ನಾವು ಕೂಡ ಅದರಲ್ಲಿ ಭಾಗಿಗಳಾಗುತ್ತೇವೆ. ದಯವಿಟ್ಟು

ಈ ರೀತಿ ವಿಷನ್ ಇಲ್ಲದೆ, ಒಂದು ಮುಂದಾಲೋಚನೆ ಇಲ್ಲದೇ ಕೆಲಸವನ್ನು ಮಾಡುವಂತಾದ್ದನ್ನು ನಮ್ಮ ಘನ ಸರ್ಕಾರ ಮಾಡಬಾರದು ಎಂದು ತಮ್ಮ ಮೂಲಕ ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳಲಿಕ್ಕೆ ನಾನು ಇಚ್ಛಿಪಡುತ್ತೇನೆ. ಮತ್ತೊಂದು ವಿಷಯವೆಂದರೆ, ಇವತ್ತು ಒಟ್ಟು 16 ಡಿಮ್ಯಾಂಡ್ಸ್ ಮೇಲೆ ನಾವು ಮಾತನಾಡಬೇಕು, ಇವತ್ತೇ ಮಾನ್ಯ ಸಚಿವರು ಉತ್ತರ ಕೊಡಬೇಕು, ಅದನ್ನು ಮತಕ್ಕೆ ಹಾಕಬೇಕು ಎನ್ನುವಂತಹ ಒಂದು ವ್ಯವಸ್ಥೆ ಇವತ್ತು ನಮ್ಮ ವಿಧಾನಸಭೆಯಲ್ಲಿದೆ. ಹೌದು,ನಾನು ಒಪ್ಪುತ್ತೇನೆ. ಯಾವು ಯಾವುದೋ ಕಾರಣಕ್ಕೋಸ್ಕರ ಅದು ಹಕ್ಕುಚ್ಯುತಿ ಇರಬಹುದು, ಕಾವೇರಿ ವಿಷಯ ಇರಬಹುದು, ಈ ರೀತಿ ಬೇರೆ ಬೇರೆ ವಿಷಯಗಳ ಚರ್ಚೆಯಿಂದಾಗಿ ನಮಗೆ ಸಮಯ ಬಹಳ ಕಡಿಮೆಯಾಗಿದೆ. ಆದರೆ ಇಷ್ಟು ಪ್ರಾಮುಖ್ಯವಾದಂತಹ ವಿಚಾರ, ಯಾರು ಶಾಸನಸಭೆಯ ಎಲ್ಲಾ ಶಾಸಕರು ಇದರ ಬಗ್ಗೆ ಆಲೋಚನೆ ಮಾಡಿ ತಮ್ಮ ವಿಚಾರವನ್ನು ಮಂಡಿಸಬೇಕೋ, ಅದಕ್ಕೆ ಹೆಚ್ಚಿನ ಸಮಯವನ್ನು ಒದಗಿಸಬೇಕಾಗಿತ್ತು. ಈ ವರ್ಷ ಮಾಡಿದಂತಹ ತಪ್ಪನ್ನು ತಿದ್ದಿಕೊಂಡು ಮುಂದಿನ ವರ್ಷವಾದರೂ, ನಮ್ಮನ್ನು ಆರಿಸಿ ಕಳುಹಿಸಿದಂತಹ ಪ್ರಜೆಗಳಿಗೆ ನ್ಯಾಯವನ್ನು ಒದಗಿಸಬೇಕು ಎನ್ನುವಂತಹ ವಿಚಾರ ಇರುವಂತಹ ಸಂದರ್ಭದಲ್ಲಿ, ಇಷ್ಟೊಂದು ವಿಚಾರಗಳ ಬಗ್ಗೆ ನಾವು ಏನು ಮಾತನಾಡಲಿಕ್ಕೆ ಸಾಧ್ಯ ಇದೆ. ಸ್ವಾಮಿ, ಇಷ್ಟು ವಿಚಾರಗಳನ್ನು, ಇಷ್ಟು ವಿಷಯದ ಬಗ್ಗೆ ಡಿಮ್ಯಾಂಡ್‌ಗಳನ್ನು, ನಾನು ಮಾನ್ಯ ಅಧ್ಯಕ್ಷರ ಬಳಿ ಮನವಿ ಮಾಡಿಕೊಳ್ಳುತ್ತೇನೆ, ನಮ್ಮ ಎಲ್ಲಾ ಸದಸ್ಯರೂ ಇದರ ಬಗ್ಗೆ ಮಾತನಾಡಲಿಕ್ಕೆ ಅವಕಾಶವನ್ನು ಮಾಡಿಕೊಡಿ. ನಾನು ಇಷ್ಟೇ ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಈ ಡಿಮ್ಯಾಂಡ್ಸ್‌ಗಳ ಮೇಲೆ ಇರುವಂತಹ ಚರ್ಚೆ ಏನಿದೆ ಮಾನ್ಯ ಮಂತ್ರಿಗಳೆಲ್ಲಾ ಅಧ್ಯಕ್ಷರು ಹೇಳಿದ ಕೂಡಲೇ ನನ್ನ ಮುಂದೆ ಇರುವ ಕಾಗದಗಳನ್ನು ಮಂಡಿಸುತ್ತೇನೆ ಎಂದು ಹೇಳಿ ಬಿಡುತ್ತಾರೆ. it has been a ritual ಅದಕ್ಕೆ ಬಹುಶಃ 'ಹರಕೆ ಸಂದಾಯ' ಎಂದು ನಮ್ಮ ಕಡೆ ಹೇಳುತ್ತಾರೆ. ಮಾನ್ಯ ಮಂತ್ರಿಗಳು ಮಂಡಿಸಿದರು, ನಾವು ಅದರ ಮೇಲೆ ಮಾತನಾಡಿದೆವು, ಅದನ್ನು ಮತಕ್ಕೆ ಹಾಕಿದ್ದೇವೆ ಎಂದು ನಿರ್ಣಯ ಆಯಿತು, ಅದನ್ನು ಅಂಗೀಕರಿಸಿಯಾಯಿತು. ಏಕೆ ಈ ರಿಚೂಯಲ್ ಆಗುತ್ತಿದೆ. ದಯವಿಟ್ಟು ನಾವೆಲ್ಲರೂ ಸೇರಿ ಇದರ ಬಗ್ಗೆ ಗಮನ ಕೊಡಬೇಕು. ಶಾಸನ ಸಭೆ ಇರುವಂಥಾದ್ದು ಇಂತಹ ಮೂಲಭೂತವಾದಂತಹ ತಪ್ಪುಗಳು ಏನಿವೆ, ಅದನ್ನು ಸರಿಪಡಿಸಿ ಜನ ಸಾಮಾನ್ಯರಿಗೆ ಬೇಕಾದಂಥಹ ಕನಿಷ್ಟ ಸೌಲಭ್ಯಗಳನ್ನು ಮಾಡಿಸಿಕೊಳ್ಳಲಿಕ್ಕೇ ಹೊರತು, ಶ್ರೀಮಂತರನ್ನು ರಕ್ಷಣೆ ಮಾಡಲಿಕ್ಕೆ ಅಲ್ಲ. ಅಧಿಕಾರಿಗಳನ್ನು ರಕ್ಷಣೆ ಮಾಡಲಿಕ್ಕೆ ಅಲ್ಲ. ದೊಡ್ಡವರ ಸಲುವಾಗಿ ಮಾತ್ರ ಈ ಶಾಸನಸಭೆ ಈ ಸರ್ಕಾರ ಇಲ್ಲ, ಸಾಮಾನ್ಯ ಮನುಷ್ಯನ ಹಿತ ಚಿಂತನೆ ಮಾಡುವುದಕ್ಕೋಸ್ಕರ ಈ ಸರ್ಕಾರ ಇದೆ, ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಶಿಕ್ಷಣದ ಬಗ್ಗೆ ಮಾತನಾಡಲಿಕ್ಕೆ ನನ್ನ ಸಹಪಾಠಿಗಳಿಗೂ ಕೂಡ ಸಾಕಷ್ಟು ಸಮಯ ಬೇಕಾಗುತ್ತದೆ. ಶಿಕ್ಷಣದ ಬಗ್ಗೆ ನನ್ನ ಕೆಲವೊಂದು ಅನಿಸಿಕೆಗಳನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಶಿಕ್ಷಣದ ಡಿಮ್ಯಾಂಡ್‌ಗಳ ಬಗ್ಗೆ ನಾನು ಹಿಂದೆ ಹೇಳಿಧಂತಹ ಮಾತಿಗೆ ಪೂರಕವಾಗಿ, ಅದಕ್ಕೆ ಅನುಗುಣವಾಗಿ ಹೇಳುವುದಾದರೆ, ನಾವು ಈ ಶಿಕ್ಷಣದ ಬಡ್ಜೆಟ್ ಅನ್ನು ತಯಾರಿಸುವಂತಹ ಸಂದರ್ಭದಲ್ಲಿ ನಮ್ಮ ಸರ್ಕಾರದ ಪಾಲಿಸಿ ಏನು? ಸರ್ಕಾರದ ಪಾಲಿಸಿಯನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳಲಾಗಿದೆ. ಮುಂದಿನ ಐದು ವರ್ಷಗಳಲ್ಲಿ ಎಲ್ಲರಿಗೂ ಶಿಕ್ಷಣ ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕು ಎನ್ನುವಂತಹ ಮಾತನ್ನು ನಾವು ಹೇಳುತ್ತಿದ್ದೇವೆ. ಈ

ಶಿಕ್ಷಣದ ಗುರಿ ಏನು? ಇದರ ಬಗ್ಗೆ ನಮ್ಮಲ್ಲಿ ಚಿಂತನೆ ಇದೆಯೇ? ಏನು ಗುರಿ ಈ ದೇಶದಲ್ಲಿದೆ? ಬ್ರಿಟಿಷರ ಆಡಳಿತದಲ್ಲಿ ಈ ದೇಶದಲ್ಲಿ ಶಿಕ್ಷಣಕ್ಕೆ ಯಾವ ಒಂದು ಗುರಿ ಇತ್ತು ಎಂದರೆ, ನಾನು ಇಲ್ಲಿ ಈಗ ಕಥೆ ಹೇಳುವುದಕ್ಕೆ ಹೊರಟಿಲ್ಲ. ಬ್ರಿಟಿಷರು ಆಡಳಿತ ಮಾಡುವಂತಹ ಸಂದರ್ಭದಲ್ಲಿ ಬ್ರಿಟಿಷ್ ಎಂಪೈರ್ ಅನ್ನು ಪ್ಲೀಸ್ ಮಾಡಲಿಕ್ಕೆ, ಅವರನ್ನು ಸಂತೋಷ ಪಡಿಸಲಿಕ್ಕೆ ಲಾರ್ಡ್ ಮೆಕಾಲೆ ಅನ್ನುವವರಿಗೆ ಒಂದು ಕೆಲಸ ಕೊಟ್ಟರು. ಈ ಭಾರತ ದೇಶದ ಜನರಿಗೆ ಶಿಕ್ಷಣ ಕೊಡಿ ಎಂತಹ ಶಿಕ್ಷಣ ಕೊಡಿ ಎಂದರೆ ನೂರಾರು ವರ್ಷ ಗುಲಾಮರಾಗಿ, ಕ್ಲಾರ್ಕ್ ಆಗಿ, ಪೀವನ್ ಆಗಿ, ಅಟೆಂಡರ್ ಆಗಿ, ಜವಾನರಾಗಿ ನಾವು ಹೇಳುವಂತಹ ಕೆಲಸ ಮಾಡಲು ಯೋಗ್ಯವಾಗುವಂತಹ ಶಿಕ್ಷಣವನ್ನು ಕೊಡಿ ಎಂದು ಬ್ರಿಟಿಷ್ ಸರ್ಕಾರ ಹೇಳಿತ್ತು. ಅದನ್ನು ನಾವು ಮಾಡಿಕೊಂಡು ಬಂದೆವು. ಸ್ವಾತಂತ್ರ್ಯ ಸಿಕ್ಕಿದ ನಂತರ ಅದರಲ್ಲಿ ಏನಾದರೂ ಬದಲಾವಣೆ ಮಾಡಿದ್ದೇವೋ? ಇವತ್ತು ಡಿಮ್ಯಾಂಡ್ಸ್‌ಗಳ ಬಗ್ಗೆ ಮಾತನಾಡುವಾಗ ಇದನ್ನು ನಾನು ಬಹಳ ಉದ್ದವಾಗಿ ಹೇಳುವುದು ಉಚಿತವಾಗಿರಲಿಕ್ಕಿಲ್ಲ. ಆದುದರಿಂದ ನಾನು ಸಂಕ್ಷಿಪ್ತವಾಗಿ ಹೇಳುತ್ತೇನೆ. ನಮ್ಮ ಶಿಕ್ಷಣದಲ್ಲಿ ಇರುವಂತಹ ಗುರಿಗಳ ಬಗ್ಗೆ ನಾವು ಬಡ್ಜೆಟ್ ಅನ್ನು ತಯಾರು ಮಾಡುವಂತಹ ಸಂದರ್ಭದಲ್ಲಿ ಯಾವ ಯಾವ ಪಠ್ಯಪುಸ್ತಕಗಳನ್ನು ಪ್ರಿಂಟ್ ಮಾಡಬೇಕು, ಒಂದನೇ ತರಗತಿಯಿಂದ ಐದನೇ ತರಗತಿಯವರೆಗೆ ಎಂತಹ ಪಠ್ಯಪುಸ್ತಕ ಬೇಕು. ಐದನೇ ತರಗತಿಯಿಂದ ಎಂಟನೇ ತರಗತಿಯವರೆಗೆ ಎಂತಹ ಪಠ್ಯಪುಸ್ತಕ ಬೇಕು. ಪ್ರೌಢ ಶಿಕ್ಷಣಕ್ಕೆ ಯಾವ ರೀತಿ ಆದಂತಹದ್ದನ್ನು ಕೊಡಬೇಕು. ಕಾಲೇಜ್ ಶಿಕ್ಷಣಕ್ಕೆ ಯಾವ ರೀತಿ ಪಠ್ಯಪುಸ್ತಕ ಇರಬೇಕು, ಆ ಪ್ರಾಥಮಿಕ ಶಿಕ್ಷಣ, ಮಾಧ್ಯಮಿಕ ಶಿಕ್ಷಣದ ಪಠ್ಯಪುಸ್ತಕಗಳಲ್ಲಿ ಅವನಿಗೆ ಏನಾದರೂ ದೇಶದ ಬಗ್ಗೆ ಭಕ್ತಿ ಇರುವಂತಾದ್ದು, ಗುರು ಹಿರಿಯರ ಬಗ್ಗೆ ಭಕ್ತಿ ಇರುವಂತಾದ್ದು, ಈ ರಾಷ್ಟ್ರಕ್ಕೋಸ್ಕರ ನಾನು ಕೆಲಸ ಮಾಡಬೇಕು, ನಾನು ನಿಸ್ವಾರ್ಥದಿಂದ ಕೆಲಸ ಮಾಡಬೇಕು ಎಂದು ಎಳೆ ಮನಸ್ಸಿಗೆ ಬರುವಂತಹ ಪ್ರಾಮಾಣಿಕವಾದ ಪ್ರಯತ್ನ ನಮ್ಮ ಪಠ್ಯಪುಸ್ತಕಗಳಿಂದ, ನಮ್ಮ ಶಿಕ್ಷಣದಿಂದ ಆಗಿದೆಯೇ? ನೈತಿಕ ಶಿಕ್ಷಣ ಎಂದು ಒಂದು ಪಾಠ ಇದೆ. ಆದರೆ ಅದಕ್ಕೆ ಪಠ್ಯಪುಸ್ತಕವೇ ಇಲ್ಲ. ಯಾರು ಏನು ಪಾಠ ಮಾಡುತ್ತಾರೋ, ದೇವರಿಗೇ ಗೊತ್ತು. ನೈತಿಕ ಶಿಕ್ಷಣ ಎನ್ನುವಂತಹ ಒಂದು ಪೀರಿಯಡ್ ಕೂಡ ಇಟ್ಟಿದ್ದಾರೆ. ಆದರೆ ಅದಕ್ಕೆ ಪಠ್ಯಪುಸ್ತಕ ಇಲ್ಲ. ಪಠ್ಯಪುಸ್ತಕ ಮಾಡುವಂತಹ ಒಂದು ಪ್ರಯತ್ನ ಮಾಡುತ್ತಿದ್ದೇವೆ ಎನ್ನುವಂತಹ ಮಾತನ್ನು ನಾನು ನಮ್ಮ ಸನ್ಮಾನ್ಯ ಶಿಕ್ಷಣ ಮಂತ್ರಿಗಳಿಂದ ತಿಳಿದುಕೊಂಡಿದ್ದೇನೆ. ಬಹಳ ಸಂತೋಷ. ಆದರೆ, ಈ ಗುರಿ, ಈ ಬಡ್ಜೆಟ್ ಅನ್ನು ತಯಾರು ಮಾಡುವಂತಹ ಸಂದರ್ಭದಲ್ಲಿ ತಮ್ಮ ಹತ್ತಿರ ಇಲ್ಲ. ಹಾಗಾಗಿ ನಾವು ಶಿಕ್ಷಣ ಕೊಡುವಂತಹ ಸಮಯದಲ್ಲಿ ನಮಗೆ ಒಂದು ಸ್ಪಷ್ಟವಾದಂತಹ ಗುರಿ ಇರಬೇಕು. ಕಾಲೇಜು ಶಿಕ್ಷಣ ಕೊಡುವಂತಹ ಸಂದರ್ಭದಲ್ಲಿ, ಬಿ.ಎ, ಬಿ.ಎಸ್ಸಿ, ಮತ್ತು ಬಿ.ಕಾಂ.ಗಳನ್ನು ಮಾಡಿ ಅವರು ಕೆಲಸ ಇಲ್ಲದೇ ಕೇವಲ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಹೆಸರು ನೋಂದಣಿ ಮಾಡಿಕೊಂಡು ಅಲೆದಾಡುವಂತಹ ನಿರುದ್ಯೋಗಿ ಪದವೀಧರರನ್ನು ಮಾಡುವಂತಹ ಒಂದು ವ್ಯವಸ್ಥೆಯನ್ನು ನಾವು ಮಾಡಿಕೊಂಡಿದ್ದೇವೆ. ಇದನ್ನು ಬದಲಾಯಿಸಬೇಕು. ಇದನ್ನು ಬದಲಾಯಿಸವುದಕ್ಕೆ ಈ ನಮ್ಮ ಶಾಸನಸಭೆಯ ಅಧಿಕಾರದಲ್ಲಿರುವ ಸರ್ಕಾರ ಪ್ರಯತ್ನ ಮಾಡಬೇಕು. ಇದನ್ನು ತಕ್ಷಣದಲ್ಲಿ ಬದಲಾಯಿಸುವಂತಹ ಪ್ರಾಮಾಣಿಕ ಪ್ರಯತ್ನವನ್ನು ಸರ್ಕಾರ ಮಾಡಬೇಕು. ವೃತ್ತಿ ಶಿಕ್ಷಣ ರೂಪದಲ್ಲಿ ಅಥವಾ ಬೇರೆ ಬೇರೆ ಶಿಕ್ಷಣದ ರೂಪದಲ್ಲಿ ಪ್ರಯತ್ನವನ್ನು ಮಾಡಬೇಕು. ಗುರಿಯನ್ನು ನಿಶ್ಚಯ ಮಾಡಿದಮೇಲೆ ಎಷ್ಟು ಹಣವನ್ನು

ಒದಗಿಸಿದ್ದೇವೆ ಎನ್ನುವುದರ ಬಗ್ಗೆ ವಿಚಾರ ಮಾಡಬೇಕು. ಇದಕ್ಕೆ ಎಷ್ಟು ಹಣವನ್ನು ಒದಗಿಸಬೇಕು? ಶೇಕಡ 18.5 ಒದಗಿಸಿದರೆ ಸಾಕೆ: 10,858 ಕೋಟಿ ರೂಪಾಯಿಗಳ ನಮ್ಮ ವಾರ್ಷಿಕ ಬಡ್ಜೆಟ್‌ನಲ್ಲಿ 1,250 ಕೋಟಿ ರೂಪಾಯಿ, ಹೆಚ್ಚು ಕಡಿಮೆ, ನಾನು ನಿಖರವಾದ ಅಂಕಿ ಅಂಶಗಳನ್ನು ನೀಡುತ್ತಿಲ್ಲ. ಬಹುಶಃ ಅಂಕಿ ಅಂಶಗಳನ್ನು ನೀವೇ ಒದಗಿಸಿದಂತಹ ದಾಖಲೆಗಳಿಂದ ಹೇಳಲಿಕ್ಕೆ ಹೊರಟರೆ ಬಹಳ ಉದ್ದವಾಗುತ್ತದೆ. The main theme which I want to convey to you will be missed. ನಾನು ಇಷ್ಟೇ ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. 800 ಕೋಟಿ ರೂಪಾಯಿಗಳನ್ನು ನಾವು ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣಕ್ಕೆ ಒದಗಿಸುವಂತಹ ಕೆಲಸವನ್ನು ಮಾಡಿದ್ದೇವೆ. ಸುಮಾರು 300 ಕೋಟಿ ರೂಪಾಯಿಗಳು ಹೆಚ್ಚು ಕಡಿಮೆ ಕಾಲೇಜು ಶಿಕ್ಷಣಕ್ಕ, 150 ಕೋಟಿ ರೂಪಾಯಿ ತಾಂತ್ರಿಕ ಮತ್ತು ಐ.ಐ., ಐ.ಟಿ.ಐ ಈ ರೀತಿಯಾದಂತಹ ಶಿಕ್ಷಣಕ್ಕೆ ಒದಗಿಸುವಂತಹ ಒಂದು ವ್ಯವಸ್ಥೆಯನ್ನು ಮಾಡಿದ್ದೇವೆ. ಇಷ್ಟು ಹಣವನ್ನು ನಾವು ಒದಗಿಸಿದ್ದು, ಫಲಾನುಭವಿಗಳು ಎಷ್ಟು ಜನರಿದ್ದಾರೆ ಎಂದರೆ, ನಮ್ಮ ಸರ್ಕಾರವೇ ಕೊಟ್ಟಂತಹ ಅಂಕಿ ಸಂಖ್ಯೆಗಳ ಪ್ರಕಾರ, ಶಿಕ್ಷಣ ಇಲಾಖೆಯ ವಾರ್ಷಿಕ ವರದಿಯ ಪ್ರಕಾರ ನಮ್ಮ ಶಿಕ್ಷಣ ಇಲಾಖೆಯಲ್ಲಿ 89.18 ಲಕ್ಷ ಜನ ಮಕ್ಕಳು ಹಿರಿಯ ಮತ್ತು ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಕಲಿಯುತ್ತಿದ್ದಾರೆ. ಸುಮಾರು 4 ಲಕ್ಷ ಮಕ್ಕಳು ಕಾಲೇಜುಗಳಲ್ಲಿ ಕಲಿಯುತ್ತಿದ್ದಾರೆ. ಸರ್ವೆ ಸಾಮಾನ್ಯವಾಗಿ 95 ಲಕ್ಷ ಜನ ವಿದ್ಯಾರ್ಥಿಗಳು ಇದರಲ್ಲಿ ಇದ್ದಾರೆ. ಅದರಲ್ಲಿ ಈಗಿರುವ ಶಿಕ್ಷಕರು ಮತ್ತು ಇತರರೆಲ್ಲಾ ಸೇರಿದರೆ ಅದರ ಸಂಖ್ಯೆ ಒಂದು ಕೋಟಿಗಿಂತ ಸ್ವಲ್ಪ ಜಾಸ್ತಿಯಾಗುತ್ತದೆ.

3.30ಪಿ.ಎಂ.

ಸ್ವಾಮಿ ನಮ್ಮ ಜನಸಂಖ್ಯೆ 5 ಕೋಟಿ ಹತ್ತಿರ ಹತ್ತಿರ ಇದೆ. ಈಗ ನಾನು ಹೇಳಬೇಕಾದಂತ ಅತ್ಯಂತ ಪ್ರಾಮುಖ್ಯವಾದಂತ ಅಂಶವೇನೆಂದರೆ ಇವತ್ತು ಐದನೆ ಒಂದಂಶದ ಜನಸಂಖ್ಯೆ ನಮ್ಮ ಈ ಶಿಕ್ಷಣ ಕೇತ್ರದಲ್ಲಿದ್ದಾರೆ. ಈ ಮಕ್ಕಳು ಏನಿದ್ದಾರೆ ಅವರು ಮುಂದೆ ನಮ್ಮ ಭಾವಿ ಪ್ರಜೆಗಳು ಅವರು ನಾಳೆ ಅಧಿಕಾರಿಗಳಾಗುವಂತಹವರು, ನಾಳೆ ವೈದ್ಯರಾಗುವಂತಹವರು, ವಕೀಲರಾಗುವಂತಹವರು, ಶಾಸನ ಸಭೆಯಲ್ಲಿ ಭಾಗವಹಿಸುವಂತಹ ಜನ ಇವರ ಬಗ್ಗೆ ನಮ್ಮ ಲಕ್ಷ್ಯ ಎಷ್ಟಿರಬೇಕೆಂದು ಹೇಳಿದರೆ, ನಾವು, ಬರುವಂತಹ ಏನು 1250 ಕೋಟಿ ರೂಪಾಯಿಗಳನ್ನು ಒದಗಿಸುವುದರಿಂದ ಅವರ ಗುರಿಯನ್ನು ಮುಟ್ಟಿಸಲಿಕ್ಕೆ ಸಾಧ್ಯವಿಲ್ಲ. ಏತಕ್ಕೆ ಸಾಧ್ಯವಿಲ್ಲವೆಂದು ಹೇಳಿದರೆ, ಚಿನ್ನಪ್ಪರೆಡ್ಡಿಯವರು ಏನು ಹೇಳಿದ್ದಾರೆಂದು ನಾನು ಆಗಲೇ ಓದಿ ಹೇಳಿದೆ. ಆ ಅಂಕಿಸಂಖ್ಯೆಗಳನ್ನು ನಾನು ಪುನಃ ಹೇಳತಕ್ಕಂತಹ ಅವಶ್ಯಕತೆ ಇಲ್ಲ. ಇವತ್ತು ಪ್ರಾಥಮಿಕ ಶಿಕ್ಷಣಕ್ಕೆ, ಎಲ್ಲಾ ಊರುಗಳಿಗೆ ಬೇಕಾದಂಥ ಕನಿಷ್ಟ ಅವಶ್ಯಕತೆಯಾದ ಒಂದು ಕೊಠಡಿ, ಆ ಮಕ್ಕಳು ಶಾಲೆಯಲ್ಲಿ ಹೋಗಿ ಕುಳಿತುಕೊಳ್ಳುವುದಕ್ಕೆ ಒಂದು ಕೊಠಡಿ ಇಲ್ಲ. ಮೊನ್ನೆ ನಾನು ಮಾನ್ಯ ವಿದ್ಯಾಮಂತ್ರಿಗಳಲ್ಲಿ ಒಂದು ಪ್ರಶ್ನೆಯನ್ನು ಕೇಳಿದೆ. ನನ್ನ ಕ್ಷೇತ್ರದಲ್ಲಿ 400 ಮಕ್ಕಳು ಇರುವಲ್ಲಿ 4 ಜನ ಅಧ್ಯಾಪಕರಿದ್ದಾರೆ, ಒಂದು ಮೂರ್ನಾಲ್ಕು ಕೊಠಡಿಗಳಿವೆ. 300 ಜನ ವಿದ್ಯಾರ್ಥಿಗಳು ಇರುವಲ್ಲಿ ಐದು ಜನ ಅಧ್ಯಾಪಕರಿದ್ದಾರೆ, ಮೂರ್ನಾಲ್ಕು ಕೊಠಡಿಗಳಿವೆ. ಇದರ ಅರ್ಥವೇನೆಂದರೆ ಅದರ ಮಧ್ಯೆ ಕಳಪೆ ಕಾಮಗಾರಿಗಳು ಬೇರೆ. ನಮ್ಮ ನಮ್ಮ ಕ್ಷೇತ್ರದಲ್ಲಂತೂ ಲ್ಯಾಂಡ್ ಆರ್ಮಿಯವರಿಂದ ನಿರ್ಮಿಸಲ್ಪಟ್ಟಂತ ಶಾಲಾ ಕಟ್ಟಡಗಳಿಗೆ ಆ ದೇವರೆ ಆ ಮಕ್ಕಳನ್ನು ಕಳುಹಿಸಬೇಕು. ಏತಕ್ಕೆಂದರೆ, ಅಲ್ಲಿ ಹೋದಂತ ಮಕ್ಕಳು ವಾಪಸ್ ಬರುತ್ತಾರೋ ಇಲ್ಲವೋ

ಎನ್ನುವುದು ಅನುಮಾನ. ಅಲ್ಲಿ ಬೊಂಬು ಕಟ್ಟಿಗೆಯ ಮೇಲೆ ಹಾಕಿರುವಂತಹ ಆ ಹೆಂಚು ಯಾವಾಗ ತಲೆಯ ಮೇಲೆ ಬಿದ್ದು ಆ ಮಕ್ಕಳು ಪರಲೋಕಕ್ಕೆ ಹೋಗುತ್ತಾರೋ ಎನ್ನುವ ಅನುಮಾನ ಆ ಶಾಲೆಗಳಲ್ಲಿ ಇದೆ. ಅಂತೂ ಮೊನ್ನೆ ನಮ್ಮ ಕ್ಷೇತ್ರಕ್ಕೆ ನಮ್ಮ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಬಂದಾಗ ಅವರ ಹತ್ತಿರ ಗೋಗರೆದು ಕುಳಿತುಕೊಳ್ಳುವಂತಹ ಕೆಲವೊಂದು ಕೊಠಡಿಯ ನೆಲಕ್ಕೆ ಸಿಮೆಂಟ್ ಹಾಕುವುದಕ್ಕೆ ಒಂದು ವಿಶೇಷ ವ್ಯವಸ್ಥೆಯನ್ನು ಮಾಡುವಂಥ ಕರುಣೆಯನ್ನು ಅವರು ತೋರಿದರು. ಆದರೆ ಇವತ್ತು ಅನೇಕ ಹಳ್ಳಿಗಳಲ್ಲಿ, ತಾಲ್ಲೂಕು ಕೇಂದ್ರಗಳಲ್ಲಿ ಇರುವಂಥ ಶಾಲೆಗಳ ದುರವಸ್ಥೆಯನ್ನು ನೋಡಿದರೆ ಬಹುಶಃ ಇವತ್ತು ನಾವು ನಮ್ಮ ಬೆನ್ನನ್ನು ಚಪ್ಪರಿಸಿಕೊಳ್ಳುವಂಥ ಸ್ಥಿತಿ ಇಲ್ಲ. ಪ್ರಾಮಾಣಿಕವಾಗಿ ಅವರಿಗೆ ಬೇಕಾಗಿರುವಂಥ ಒಂದು ಕೊಠಡಿಯನ್ನು ಒದಗಿಸುವಂತ ಕೆಲಸವನ್ನು ನಾವು ಮಾಡುವುದಕ್ಕಾಗುತ್ತಿಲ್ಲ. ಐದು ವರ್ಷಗಳಲ್ಲಿ ನಾವು ಎಲ್ಲರಿಗೂ ಅವರಿಗೆ ಬೇಕಾದಂತ ಕೊಠಡಿಗಳನ್ನು ನಿರ್ಮಾಣ ಮಾಡುವಂಥ ಕೆಲಸವನ್ನು ಮಾಡುತ್ತೇವೆಂದು ನಮ್ಮ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ನೀವು ಒದಗಿಸಿದಂತ ಆಯವ್ಯಯ ಎಲ್ಲಿ ಸಾಕಾಗುತ್ತದೆ ಸ್ವಾಮಿ? ನೀವು ಒದಗಿಸಿರುವಂತ ಆಯವ್ಯಯ ಬಹಳ ಕಡಿಮೆ ಇದೆ. ಇದಕ್ಕಾಗಿ ಅತ್ಯಂತ ಕಡಿಮೆ ಹಣವನ್ನು ಒದಗಿಸುವಂತಹ ಕೆಲಸವನ್ನು ನೀವು ಮಾಡಿದ್ದೀರಿ. ಹಣ ಎಲ್ಲಿಂದ ತರಬೇಕು? ಪ್ರತಿಯೊಬ್ಬರೂ ಕೂಡ, ಶಿಕ್ಷಣ ಇಲಾಖೆ ಇರಬಹುದು, ಉನ್ನತ ಶಿಕ್ಷಣ ಇಲಾಖೆ ಇರಬಹುದು, ಮೀನುಗಾರಿಕೆ ಇಲಾಖೆ ಇರಬಹುದು, ತೋಟಗಾರಿಕೆ ಇಲಾಖೆ ಇರಬಹುದು, ಕಲೆ ಹಾಗೂ ಸಂಸ್ಕೃತಿ ಇರಬಹುದು, ಎಲ್ಲರೂ ಹಣವನ್ನು ಕೇಳಿದರೆ ಎಲ್ಲಿಂದ ಒದಗಿಸಬೇಕು ಎನ್ನುವಂತ ಪ್ರಜ್ಞೆ ಇದ್ದರೆ, ಬಹುಶಃ ಇವತ್ತು ನಾನು ಮಾತನಾಡುವುದಕ್ಕಿಂತ ಆಯವ್ಯಯದ ಮೇಲೆ ನಮ್ಮ ಹಿರಿಯರು ಅನೇಕರು ಮಾತನಾಡುವಾಗ ಹೇಳಿದ್ದಾರೆ. ಇವತ್ತು ಬೇಕಾದಷ್ಟು ಹಣ, ಏನು ವಾಣಿಜ್ಯ ತೆರಿಗೆಯ ರೂಪದಲ್ಲಿ, ಇವತ್ತು ಇಡೀ ಭಾರತದಲ್ಲಿರುವ ಎಲ್ಲಾ ರಾಜ್ಯಗಳಿಗಿಂತ ಹೆಚ್ಚು ತೆರಿಗೆಗಳನ್ನು ನಮ್ಮ ಕರ್ನಾಟಕ ರಾಜ್ಯದಲ್ಲಿ ಹಾಕಿದ್ದೇವೆ. ಒಂದು ಸಾವಿರದಿಂದ ಎರಡು ಸಾವಿರ ಕೋಟಿ ರೂಪಾಯಿಗಳು ಮಾರಾಟ ತೆರಿಗೆಯ ರೂಪದಲ್ಲಿ ಇವತ್ತು ವಸೂಲ್ಮಾಡುವುದಕ್ಕೆ ಸಾಧ್ಯವಿದೆ, ಅದನ್ನು ವಸೂಲ್ಮಾಡುವಂಥ ಕೆಲಸ ಆಗುತ್ತಿಲ್ಲ. ಹಾಗಾಗಿ ಅದೇ ನಾವು ಪಬ್ಲಿಕ್ ಲಿಮಿಟೆಡ್ ಅಂದರೆ ಸಾರ್ವಜನಿಕ ವಿಭಾಗದ ಉದ್ದಿಮೆಗಳೇನಿದ್ದಾವೆ ಇವುಗಳಲ್ಲಿ ಇವತ್ತು ಎರಡು ಮೂರು ಉದ್ದಿಮೆಗಳನ್ನು ಬಿಟ್ಟು ಎಲ್ಲಾ ಉದ್ದಿಮೆಗಳು ನಷ್ಟದಲ್ಲಿ ಕೆಲಸ ಮಾಡುತ್ತಿದ್ದಾವೆ. ಹೀಗೆ ಅನೇಕ ವಿಚಾರಗಳನ್ನು ನಾನು ಇವತ್ತು ಮಂಡಿಸುವುದಕ್ಕೆ ಇಚ್ಛೆಪಡದಿದ್ದರೂ ಕೂಡ ಹೀಗೆ ಕೆಲವೊಂದು ಸ್ಪರ್ಶ ಮಾತ್ರ ನಾನು ಮಾಡಿದ್ದೇನೆ. ಆ ರೀತಿಯಾಗಿ ನಾವು ಹಣವನ್ನು ಕೂಡಿಸಿಕೊಂಡು ನಾವು ಈ ಪ್ರಾಥಮಿಕ ಶಿಕ್ಷಣಕ್ಕೆ ನಮ್ಮ ಏನು ಡಿಮಾಂಡನ್ನು ಮಂಡಿಸುತ್ತೇವೆ ಅಂತಹ ಪೌಷ್ಠಿಕ ಆಹಾರ, ಕ್ಷೀರ ಯೋಜನೆ, ಉಚಿತವಾಗಿ ವಸ್ತ್ರಗಳನ್ನು ವಿತರಿಸುವುದು ಇತ್ಯಾದಿ ಯೋಜನೆಗಳನ್ನೆಲ್ಲ ತೆಗೆಯಬೇಕೆಂದು ನಾನು ಹೇಳುತ್ತಿಲ್ಲ. ಆದರೆ ತಕ್ಷಾಲಕ್ಕೆ ನಿಮಗೆ ನಿಲ್ಲಲಿಕ್ಕೇ ಸ್ಥಳವಿಲ್ಲ, ಆ ಮಕ್ಕಳು ಕುಳಿತುಕೊಳ್ಳುವುದಕ್ಕೆ ಸ್ಥಳವಿಲ್ಲ, ಅಂತಹ ಸಂದರ್ಭದಲ್ಲಿ ಆ ಯೋಜನೆಗಳನ್ನು ಆಮೇಲೆ ಮಾಡಿ ಪರವಾಗಿಲ್ಲ, ಆ ಯೋಜನೆಗಳನ್ನು ಬದಿಗೊತ್ತಬೇಕೆಂದು ಹೇಳುವಂತ ವಿಚಾರ ನನ್ನಲ್ಲಿ ಇಲ್ಲ, ಅದರಲ್ಲಿ ಜನಕ್ಕೆ ಉಪಯೋಗವಾಗುವಂಥ ಅನೇಕ ಯೋಜನೆಗಳಿದ್ದಾವೆ. ಆದರೆ ಪ್ರಾಥಮಿಕ ಅವಶ್ಯಕತೆಗಳನ್ನು ಕೊಡುವುದಕ್ಕೆ ಹಣವನ್ನು ಬಳಸಿ. ಬಹುಶಃ 82 ಕೋಟಿ ರೂಪಾಯಿಗಳನ್ನು ಈ ಬಾರಿ, ಈ ಪಾಪುಲಿಸ್ಟಿಕ್ ಮೆಶರ್ ಎಂದು ಹೇಳಿದರೆ ಬಹುಶಃ ನೀವು

ಸಿಟ್ಟಿಗೇಳುತ್ತೀರೇನೋ, ಆದರೂ ಜನಕ್ಕೆ ಉಪಕಾರಿ ಎಂದು ನಾನು ಹೇಳುತ್ತೇನೆ, ಆ ರೀತಿಯಾದಂತಹ ಯೋಜನೆಗಳೇನು ಇದ್ದಾವೆ, ಅವನ್ನು ನೀವು ಅಳವಡಿಸುವುದಕ್ಕೆ ಪ್ರಯತ್ನವನ್ನು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಶಿಕ್ಷಕ ಮತ್ತು ವಿದ್ಯಾರ್ಥಿಯ ಅನುಪಾತ ಒಂದಕ್ಕೆ ಐವತ್ತರಷ್ಟು ಎಂದು ಮಾಡಿಕೊಂಡು ಆದರೂ, ಇನ್ನೂ ಕೂಡ ಅನೇಕ ಸಾವಿರಾರು,ಸುಮಾರು 50 ಸಾವಿರ ಶಿಕ್ಷಕರನ್ನು ಒದಗಿಸುವಂತಹ ಅವಶ್ಯಕತೆಯಿದೆ. ಸ್ವಾಮಿ, ಐವತ್ತು ಜನ ಮಕ್ಕಳಿಗೆ ಒಬ್ಬ ಶಿಕ್ಷಕ. ಈ ರೀತಿಯಾದಂತ ಶಿಕ್ಷಣವನ್ನು ಕೊಡುವಂತಹ ಗುರಿ ನಮಗೆ ಈಗ ಬೇಡ. ಈಗ ಅನಿವಾರ್ಯ. ನಮ್ಮ ಕೈಯಲ್ಲಿ ಆಗುತ್ತಿಲ್ಲ, ಇಷ್ಟಾದರೂ ಮಾಡೋಣ ಒಂದು. ಮೂವತ್ತು ಜನ ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕರನ್ನು ನೇಮಿಸುವಂತ ಗುರಿಯನ್ನು ನಾವು ಇಟ್ಟುಕೊಳ್ಳಬೇಕು. 50 ಸಾವಿರ ಶಿಕ್ಷಕರ ಕೊರತೆ ಎಂದು, ಈಗ ಇರುವಂತ ಡಿಮಾಂಡ್ಸ್‌ಗಳನ್ನು ನೀವೇನು ಮಾಡಿದ್ದೀರಿ, ಇದು ಬಹುಶಃ ನನಗನಿಸುತ್ತದೆ, 1986-87ರ ಜೂನ್‌ನಲ್ಲಿರುವಂತ ಜನ ಸಂಖ್ಯೆಯ ಆಧಾರದ ಮೇಲೆ ಈ ಅವಶ್ಯಕತೆಗಳನ್ನು ನಿರ್ಮಾಣ ಮಾಡಿದ್ದೀರೇ ಹೊರತು 1991- ಅಥವಾ 1994 ರಲ್ಲಿ ಇರುವಂತಹ ಜನಸಂಖ್ಯೆಯ ಆಧಾರದ ಮೇಲೆ ಅಥವಾ ವಿದ್ಯಾರ್ಥಿಗಳ ಸಂಖ್ಯೆಯ ಆಧಾರದ ಮೇಲೆ ಇದನ್ನು ತಯಾರಿಸಿಲ್ಲ. ನೀವು ಏನು ವೈಜ್ಞಾನಿಕವಾಗಿ ಈ ಬೇಡಿಕೆಗಳನ್ನು ಮಂಡಿಸುವಂತ ಕೆಲಸವನ್ನು ಮಾಡಲಿಲ್ಲ. ಸರಿ ಈ ಶಾಲೆಗಳಿಗೆ ಪೀಠೋಪಕರಣಗಳಿವೆಯೇ ಎಂದರೆ ಅದೂ ಇಲ್ಲ. ಪೀಠೋಪಕರಣಗಳನ್ನು ಬಿಡಿ, ಶಾಲಾ ಕೊಠಡಿಯ ಬಾಗಿಲನ್ನು ಹಾಕುವುದಕ್ಕೂ ಆಗುವುದಿಲ್ಲ. ಕಿಟಕಿಯನ್ನು ಹಾಕುವುದಕ್ಕೂ ಆಗುವುದಿಲ್ಲ. ಅಂತಹ ಪರಿಸ್ಥಿತಿಯಲ್ಲಿರುವಾಗ ಪೀಠೋಪಕರಣಗಳನ್ನು ಒದಗಿಸುವಂತ ಕೆಲಸವನ್ನು ಎಲ್ಲಿ ಮಾಡುತ್ತೇವೆ? ಇನ್ನೊಂದು ಪ್ರಾಮುಖ್ಯವಾದಂತ ವಿಚಾರವನ್ನು ತಮ್ಮ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ. ಸಂವಿಧಾನದ ಪ್ರಕಾರ ನಾವು 14 ವರ್ಷದವರೆಗೆ ಮಕ್ಕಳಿಗೆ ಕಡ್ಡಾಯವಾಗಿ ಉಚಿತ ಶಿಕ್ಷಣವನ್ನು ಕೊಡಿಸುವಂತ ಕೆಲಸವನ್ನು ಮಾಡಬೇಕಾಗಿತ್ತು. 14 ವರ್ಷ ಇವತ್ತು ವಿದ್ಯಾರ್ಥಿ ಪ್ರೌಢಶಾಲೆಗೆ ಹೋಗುವಂತ ವರ್ಷ ಅದು. ವಿದ್ಯಾರ್ಥಿ 9 ಅಥವಾ 10ನೇ ತರಗತಿಯಲ್ಲಿ ಓದುತ್ತಿರುವುದಕ್ಕೆ ಸಾಧ್ಯವಿಲ್ಲ. ಪ್ರೌಢ ಶಾಲೆಗೆ ಹೋಗುವಂತ ವರ್ಷದವರೆಗೆ ಅಂದರೆ 8ನೇ ತರಗತಿಗೆ ಬಂದಾಗ ಅವನಿಗೆ 13-14 ವರ್ಷವಾಗಿರುತ್ತದೆ. ಇವನಿಗೆ ಉಚಿತ ಶಿಕ್ಷಣವನ್ನು ಕೊಡುವಂತಹದ್ದು ನಮ್ಮ ಕರ್ತವ್ಯ. ನಾವು ಸಂವಿಧಾನದ ಹೆಸರಿನಲ್ಲಿ ಯಾರ್ಯಾರು ಪ್ರಮಾಣವಚನವನ್ನು ತೆಗೆದುಕೊಂಡಿದ್ದೇವೆ ಇದು ನಮ್ಮ ಕರ್ತವ್ಯ. ಈ ಕರ್ತವ್ಯವನ್ನು ನಾವು ಇವತ್ತು ಮಾಡುತ್ತಿದ್ದೇವೆಯೇ? ಖಾಸಗಿ ಶಾಲೆಗಳನ್ನು ತಾವು ಪ್ರಾರಂಭ ಮಾಡುತ್ತೇವೆಂದು ಹೇಳಿದರೆ, ಬಹುಶಃ ಎಲ್ಲಾ ಖಾಸಗಿ ಶಾಲೆಗಳು ಒಳ್ಳೆಯದಾಗಿರುವುದಿಲ್ಲ. ಆದರೆ ನಿಜವಾಗಿಯೂ ಪ್ರಾಮಾಣಿಕವಾಗಿ ತಾಲ್ಲೂಕು ಕೇಂದ್ರದಲ್ಲಿ ಬೆಂಗಳೂರು ನಗರವನ್ನು ಬಿಡಿ, ಮಂಗಳೂರು ನಗರವನ್ನು ಬಿಡಿ, ಮೈಸೂರು ನಗರವನ್ನು ಬಿಡಿ, ಸಾಮಾನ್ಯ ತಾಲ್ಲೂಕು ಸ್ಥಳಗಳಲ್ಲಿ, ಹೋಬಳಿ ಸ್ಥಳಗಳಲ್ಲಿ, ಎಲ್ಲಿ ಪ್ರೌಢಶಾಲೆಗಳನ್ನು ಪ್ರಾರಂಭ ಮಾಡುವಂಥ ಅವಶ್ಯಕತೆ ಇದೆ ಅಲ್ಲಿ ಖಾಸಗಿಯವರು ಪ್ರಾರಂಭ ಮಾಡುವುದಕ್ಕೆ ಮುಂದೆ ಬಂದಾಗ, ಏನು ಅನುಮತಿಯನ್ನು ಕೊಡುವಂತ ಕೆಲಸವನ್ನು ನೀವು ಮಾಡುತ್ತೀರಿ. ನೀವು ನಮ್ಮ ಹತ್ತಿರ ಏನೆಂದು ಬರೆಸಿಕೊಳ್ಳುತ್ತೀರಿ? ಖಾಯಂ ಆಗಿ ಅನುದಾನರಹಿತವಾದಂತ ಶಾಲೆಗಳನ್ನು ನಡೆಸುತ್ತೇವೆಂದು ಬಾಂಡ್ ಪೇಪರ್ ಮೇಲೆ, ಅದಕ್ಕೆ ಸಂಬಂಧಪಟ್ಟ ಟ್ರಸ್ಟ್‌ಗಳು, ಹೆಬ್ಬೆಟ್ಟು ರುಜು, ನ್ಯಾಯಾಧೀಶರ ಎದುರು ಪ್ರಮಾಣವಚನ, ಅಫಿಡವಿಟ್ ಮಾಡಿ ಕೊಟ್ಟಮೇಲೆ ನಮ್ಮ

ಶಾಲೆಗೆ ಪರವಾನಿಗೆಯನ್ನು ಕೊಡುತ್ತೇವೆ, ನೀವು ಖಾಯಂ ಅನುದಾನರಹಿತ ಶಾಲೆಯನ್ನು ಪ್ರಾರಂಭ ಮಾಡುವುದಕ್ಕೆ ಅನುಮತಿ ಕೊಡಲು ಅಡ್ಡಿ ಇಲ್ಲವೆನ್ನುವ ವ್ಯವಸ್ಥೆ ಇವತ್ತು ನಮ್ಮ ಸರ್ಕಾರದಲ್ಲಿದೆ ಎಂದು ಹೇಳುವುದಕ್ಕೆ ನನಗೆ ನಾಚಿಕೆಯಾಗುತ್ತದೆ. ಆ ಪ್ರೌಢ ಶಿಕ್ಷಣವನ್ನು ಕೊಡಿಸುವಂತ ಕೆಲಸವನ್ನು ನಾವು ಏತಕ್ಕೆ ಮಾಡುವುದಿಲ್ಲ? ನಮಗೆ ಕೊಠಡಿಗಳನ್ನು ಒದಗಿಸುವುದಕ್ಕೆ ಆಗುವುದಿಲ್ಲ, ಪೀಠೋಪಕರಣಗಳನ್ನು ಒದಗಿಸುವುದಕ್ಕೆ ಆಗುವುದಿಲ್ಲ. 1986ನೇ ಇಸವಿಯಿಂದ ನನ್ನ ಕ್ಷೇತ್ರದಲ್ಲಿ ಹರಿಜನಗಿರಿಜನ ಬಂಧುಗಳು ಖಾಸಗಿ ಹೈಸ್ಕೂಲ್‌ಗಳನ್ನು ಪ್ರಾರಂಭ ಮಾಡಿದ್ದಾರೆ. ಇನ್ನೂ ಕೂಡ ಅವರಿಗೆ ಅನುದಾನವನ್ನು ಕೊಡುವಂಥ ಕೆಲಸವಾಗಿಲ್ಲ. ಹರಿಜನಗಿರಿಜನರು ಯಾರು ತಮ್ಮ ಖಾಸಗಿ ಶಾಲೆಗಳನ್ನು ಪ್ರೌಢ ಶಾಲೆಗಳನ್ನು ಪ್ರಾರಂಭ ಮಾಡುತ್ತಾರೆ, ಅವರಿಗೆ ಅನುದಾನವನ್ನು ಕೊಡುವಂಥ ಕೆಲಸವನ್ನು ಶಿಕ್ಷಣ ಇಲಾಖೆ ಮಾಡಬೇಕೆಂದು ಕಾಯಿದೆ ಹೇಳುತ್ತದೆ. 1986ನೆ ಇಸವಿಯಿಂದ ಪ್ರಾರಂಭವಾದಂತ ಹರಿಜನಗಿರಿಜನರ ಶಾಲೆಗಳಿಗೆ ಇನ್ನೂ ಕೂಡ ಅನುದಾನವನ್ನು ಕೊಡುವಂಥ ಕೆಲಸವನ್ನು ನಮ್ಮ ಸರ್ಕಾರ ಮಾಡಿಲ್ಲ. ಅದಕ್ಕೆ ನೀವು ಆಯವ್ಯಯದಲ್ಲಿ ಪ್ರಾವಿಷನ್ ಮಾಡಿದ್ದೀರೋ? ಅದರ ಬಗ್ಗೆ ಆಲೋಚನೆ ಮಾಡಿದ್ದೀರೋ? ಇಲ್ಲ, ಮಾಡಿಲ್ಲ. ಅಯ್ಯೋ ದೇವರೆ, ಖಾಸಗಿ ಶಾಲೆಗಳಿಗೆ ಅನುದಾನವನ್ನು ಈ ಮೊದಲು ಎಷ್ಟು ಕೊಟ್ಟಿದೆ ನೋಡಿ, ಅಷ್ಟೆ ಕೊಟ್ಟಿರುವುದು. ನಮ್ಮಲ್ಲಿ ನೊಣ ಪ್ರತಿ ಎಂದು ಹೇಳುತ್ತಾರೆ, ಇಂಗ್ಲಿಷ್‌ನಲ್ಲಿ ಜೆರಾಕ್ಸ್ ಕಾಫಿ ಎಂದು ಹೇಳುತ್ತಾರೆ. ಒಂದು ಪ್ರತಿ ಏನಾದರು ಇದ್ದರೆ, ಅದರಲ್ಲಿ ಒಂದು ನೊಣದ ಕಲೆ ಇರುತ್ತದೆ. ಅದನ್ನು ಪ್ರತಿ ಮಾಡುವವ ಆ ನೊಣದ ಕಲೆ ಇದ್ದಂತೆ ಮಾಡುತ್ತಾನೆ. ಹಿಂದಿನ ಸರ್ಕಾರ ಆರ್ಥಿಕ ಮಿತವ್ಯಯ ಎಂದು ಮಾಡಿದ್ದರು. ಆರ್ಥಿಕವಾಗಿ ಹಣವಿಲ್ಲದೆ ಇರುವ ಸಂದರ್ಭದಲ್ಲಿ ಅದನ್ನು ಮಾಡಿದ್ದು. ಈ ಖಾಸಗಿ ಶಾಲೆಗಳನ್ನು ಯಾರು ನಡೆಸುತ್ತಿದ್ದಾರೆ ಅವರಿಗೆ ವಿದ್ಯಾರ್ಥಿಗಳ ಅನುಪಾತಕ್ಕೆ ಅನುಗುಣವಾಗಿ ಶಿಕ್ಷಕರನ್ನು ಕೊಡುವಂಥ ಕೆಲಸವನ್ನು ಸರ್ಕಾರ ಮಾಡುತ್ತಿಲ್ಲ. ಅಂಧೇರೆ ಮೆ ಏಕ್ ಚಿರಾಗ್, ಅದೇನು ಆಶಾದಾಯಕ? ನಮ್ಮ ಶಿಕ್ಷಣ ಮಂತ್ರಿಗಳ ಬಗ್ಗೆ ನನಗೆ ಬಹಳ ಗೌರವವಿದೆ, ಅವರು ಬಹಳ ಅನುಭವಸ್ಥರು, ಪ್ರಾಮಾಣಿಕರಿದ್ದಾರೆ. ಇದನ್ನು ಸ್ವಲ್ಪ ಸಡಿಲಿಸಲಾಗಿದೆ ಎಂದು ಮೊನ್ನೆ ಒಂದು ಸ್ಟೇಟ್‌ಮೆಂಟನ್ನು ಕೊಟ್ಟಿದ್ದಾರೆ. ಮರಣದಿಂದ, ನಿವೃತ್ತಿಯಿಂದ ಹಾಗೂ ರಾಜಿನಾಮೆಯಿಂದ ಏನು ಹುದ್ದೆಗಳು ಖಾಲಿಯಾಗುತ್ತವೆ ಅಂತಹದ್ದರಲ್ಲಿ ನಾವು ಇನ್ನೊಂದು ಶಿಕ್ಷಕರನ್ನು ಕೊಡುವಂತ ವ್ಯವಸ್ಥೆಯನ್ನು ಮಾಡಿದ್ದೇವೆಂದು ಹೇಳಿದ್ದಾರೆ. ಈ ಬೋಧನೇತರ ಸಿಬ್ಬಂದಿಗಳಲ್ಲಿ ಇಬ್ಬರು ಗುಮಾಸ್ತರಿದ್ದಲ್ಲಿ ಒಂದು ಹುದ್ದೆಯನ್ನು ಕೊಡುವಂತ ಕೆಲಸವನ್ನು ಮಾಡುತ್ತಿದ್ದೇವೆ. ಕೆಲವೊಂದು ಬಾರಿ ಅಟೆಂಡರ್‌ಗಳನ್ನು ಕೊಡುವಂತ ಕೆಲಸವನ್ನು ಮಾಡುತ್ತಿದ್ದೇವೆ. ಸ್ವಾಮಿ ಖಾಸಗಿ ಹೈಸ್ಕೂಲ್‌ನಲ್ಲಿ ಒಬ್ಬನೇ ಅಟೆಂಡರ್ ಇದ್ದಾನೆ ಅವನು ನಿವೃತ್ತಿ ಹೊಂದಿದ್ದಾನೆ. ಅವನ ಪೋಸ್ಟಿಗೆ ಅಪಾಯಿಂಟ್‌ಮೆಂಟ್ ಮಾಡಲು ನಮ್ಮ ಎಕಾನಮಿ ಮೆಜರ್ ಪ್ರಕಾರ ಆ ಖಾಸಗಿ ಅನುದಾನಿತ ಕಾಲೇಜಿಗಿಲ್ಲ. ಹೆಡ್ ಮಾಸ್ಟರ್ ಬೆಳಿಗ್ಗೆ ಎದ್ದು ಕಸ ಗುಡಿಸಬೇಕು, ಬೆಲ್ಲನ್ನು ಕೂಡ ಹೆಡ್‌ಮಾಸ್ಟರ ಹೊಡೆಯಬೇಕು. ಹಳ್ಳಿಶಾಲೆಗಳಲ್ಲಿ ಮಕ್ಕಳ ಹತ್ತಿರ ಮಾಡಿಸುತ್ತಾರೆ ಬಿಡಿ. ನಿಮ್ಮ ಬೆಂಗಳೂರಿನಲ್ಲಿ ಮಾಡಿದರೆ ನಾಳೆ ಬಂದು ಶಾಸನ ಸಭೆಗೆ ಛೀಮಾರಿ ಹಾಕುವಂಥ ಕೆಲಸಗಳನ್ನು ಆ ತಂದೆ ತಾಯಿಗಳು ಮಾಡುತ್ತಾರೆ. ಪಾಪ ಹಳ್ಳಿ ಜನ ಬಡವರ ಉದ್ಧಾರ ನಾವು ಮಾಡುತ್ತಿದ್ದೇವೆ, ಇಲ್ಲಿಯವರೆಗೆ ಬರುವ ತಾಕತ್ತು ಅವರಿಗಿಲ್ಲ, ಅವರಿಗೆ ಮಾತನಾಡುವಂಥ ಶಕ್ತಿ ಇಲ್ಲ, ಅವರ

ಕೂಗು ವಿಧಾನ ಸಭೆಯವರೆಗೆ ಬರುತ್ತಾ ಇಲ್ಲ. ಈ ರೀತಿಯಾದಂಥ ವ್ಯವಸ್ಥೆ ಇದೆ. ಹಾಗಾಗಿ ನಾನು ಈ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಬರುವ ವರ್ಷದಿಂದಾದರೂ ನೀವು ಎಲ್ಲೆಲ್ಲಿ ಹಳ್ಳಿಗಳಲ್ಲಿ, ಗ್ರಾಮಾಂತರ ಪ್ರದೇಶಗಳಲ್ಲಿ ಎಲ್ಲಿ ನಿಮಗೆ ಸರಕಾರಿ ಶಾಲೆಗಳನ್ನು ತೆರೆಯಲಿಕ್ಕೆ ಸಾಧ್ಯವಿಲ್ಲ, ಸ್ವಾಮಿ ನಾನೊಂದು ಬೇಡಿಕೆ ಇಟ್ಟೆ ಕಳೆದ ವರ್ಷ ಗೆರಸಪ್ಪ ಎನ್ನುವಂಥ ಊರಿನಲ್ಲಿ ನಗರಬಸ್ತಿ ಕೇರಿ ಎಂದು ಹೇಳಿ ಶರಾವತಿ ನದಿಯ ಇನ್ನೊಂದು ದಂಡೆ. ಶರಾವತಿ ನದಿಯನ್ನು ದಾಟಿಕೊಂಡು 15 ಕಿ.ಮೀ. ನಮ್ಮ ಸರ್ಕಾರಿ ಬಸ್‌ನಲ್ಲಿ ಹೋಗಬೇಕು. ಅದರ ಬಗ್ಗೆ ವಿವರಣೆ ಕೊಡುವಂಥ ಅವಶ್ಯಕತೆ ಇಲ್ಲ, ಮಾನ್ಯ ಸಾರಿಗೆ ಮಂತ್ರಿಗಳು ಇಲ್ಲಿ ಇಲ್ಲ. ಬಸ್ಸು ಬಂದರೆ ಬಂತು ಬಿಟ್ಟರೆ ಬಿಟ್ಟು. ಇಂತಹ ಸಾರಿಗೆ ಬಸ್ಸಿನಲ್ಲಿ ಅವರು ಸುಮಾರು 15 ಕಿ.ಮಿ. ನದಿ ದಾಟಿ 15 ಕಿ.ಮಿ. ಪ್ರಯಾಣ ಮಾಡಿ ಬಂದು ಒಂದು ಹೈಸ್ಕೂಲ್‌ಗೆ ಹೋಗುವಂಥ ಒಂದು ಕೆಲಸವನ್ನು ಅವರು ಮಾಡಬೇಕಾಗಿದೆ. ನಾನು ಆ ಗ್ರಾಮಕ್ಕೆ ಹೋಗಿದ್ದೆ. 14ವರ್ಷದ ಪುಟ್ಟ ಬಾಲಕ 14ವರ್ಷದ ಹೆಣ್ಣುಮಗಳು ಬಸ್ಸಿಗೋಸ್ಕರ ಕಾಯುತ್ತಾ ಇದ್ದರು. ನಾನು ಅವರಿಗೆ ಕೇಳಿದೆ ಏನಪ್ಪ ಯಾವಾಗ ಊಟ ಮಾಡಿದೆ ಎಂದು. ನಿನ್ನೆ ರಾತ್ರಿ ಊಟ ಮಾಡಿದೆ ಎಂದು ಹೇಳಿತು. ಸಂಜೆ ಆರು ಗಂಟೆ ಆಗಿದೆ. ಬೆಳಿಗ್ಗೆ ಐದುವರೆಗೆ ಅವನು ಅಲ್ಲಿಂದ ಹೊರಡಬೇಕು. ನದಿ ದಾಟಬೇಕು. ಸರ್ಕಾರಿ ಬಸ್ ಬಂದಾಗ ಅದನ್ನು ಹತ್ತಿ ಅಲ್ಲಿಗೆ ಹೋಗಬೇಕು ಶಾಲೆ ಬಿಟ್ಟ ತಕ್ಷಣ ಆ ಸರ್ಕಾರಿ ಬಸ್ಸು ಯಾವಾಗ ಬರುತ್ತದೆಯೋ ಏಳು ಗಂಟೆಗೋ, ಒಂಭತ್ತು ಗಂಟೆಗೋ ಬಂದಾಗ ಹತ್ತಿ ನಂತರ ಅವನು ಮನೆಗೆ ಹೋಗಬೇಕು. ರಾತ್ರಿ ಒಂಭತ್ತು ಗಂಟೆಗೋ ಒಂಭತ್ತುವರೆ ಗಂಟೆಗೋ ಆ ಮಗು ಮನೆಗೆ ಹೋಗುತ್ತದೆ. ಬೆಳಿಗ್ಗೆ ಮತ್ತೆ ಬರುತ್ತದೆ. ಸ್ವಾಮಿ ನನ್ನ ಕ್ಷೇತ್ರದ ನಗರಬಸ್ತಿ ಕೆರೆಯಲ್ಲಿ ಖಾಸಗಿಯವರಿಗಾದರೂ ಒಂದು ಹೈಸ್ಕೂಲ್ ಮಾಡಲಿಕ್ಕೆ ಪರ್ಮಿಷನ್ ಕೊಡಿ ಎಂದು ಹೇಳಿದ್ದೆ. ಅದಕ್ಕೆ ನಮ್ಮ ಹತ್ತಿರ ಹಣ ಇಲ್ಲ ಎಂದು ಹೇಳಿದರು. ಬರುವ ವರ್ಷವಾದರೂ ನೀವು ಬಡ್ಜೆಟ್ಟನ್ನು ಮಂಡಿಸುವಾಗ ಈ ಶಿಕ್ಷಣ ಖಾತೆಗೆ ಬಡ್ಜೆಟ್ಟನ್ನು ಕೊಡುವಂಥ ಸಂದರ್ಭದಲ್ಲಿ ಇಂತಹ ಕ್ಷೇತ್ರಗಳಲ್ಲಿ ನಿಮ್ಮ ಕೈಯಲ್ಲಿ ಆಗದಿದ್ದರೂ ಕೂಡ ಖಾಸಗೀಯವರಿಗಾದರೂ ಹೈಸ್ಕೂಲ್‌ಗಳನ್ನು ಮಾಡುವಂಥ ಅನುಮತಿಯನ್ನು ಕೊಡಿ, ಅವರಿಗೆ ಗ್ರ್ಯಾಂಟನ್ನು ಕೊಡಿ, ಸಾಧ್ಯವಾದರೆ ಸರ್ಕಾರಿ ಶಾಲೆಗಳನ್ನೇ ಅಲ್ಲಿ ಮಾಡುವಂಥ ಉದಾರತೆ ದಯವಿಟ್ಟು ಈ ಸರ್ಕಾರಕ್ಕೆ ಬರಲಿ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನೈತಿಕ ಶಿಕ್ಷಣದ ಬಗ್ಗೆ ನಾನು ಅವಾಗಲೇ ಉಲ್ಲೇಖ ಮಾಡಿದ್ದೆ ಇದಕ್ಕೆ ಬೇಕಾಗುವಂಥ ಪಠ್ಯ ಕ್ರಮವೇ ಇಲ್ಲವೆಂದು. ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ ಬಹುಶಃ ಇದಕ್ಕೆ ಸದ್ಯವೇ ಒಂದು ಪಠ್ಯ ಕ್ರಮವನ್ನು ಮಾಡುವಂತ ಒಂದು ಯೋಜನೆ ಇದೆ ಎಂದು ಹೇಳಿದ್ದಾರೆ. ಬಹಳ ಸಂತೋಷ. ಬರುವ ವರ್ಷವಾದರು ಕಡ್ಡಾಯವಾಗಿ ಪ್ರಾರಂಭ ಮಾಡುವಂಥ ವ್ಯವಸ್ಥೆಯನ್ನು ಈ ಸರ್ಕಾರ ಮಾಡುತ್ತದೆ. ಅದಕ್ಕೆ ಬೇಕಾದಂತ ನೈತಿಕ ಶಿಕ್ಷಕರು, ವಿಶೇಷವಾಗಿ ಇರುವಂಥ ಶಿಕ್ಷಕರು ಅಲ್ಲದೇ ಅದಕ್ಕೆ ವಿಶೇಷವಾದಂಥ ತರಬೇತಿಯನ್ನು ಕೊಟ್ಟು ಇದ್ದಂಥವರನ್ನೇ ಅಡ್ಜೆಸ್ಟ್ ಮಾಡಿರಿ ನೀವು ಹೆಡ್ ಮಾಸ್ತರರೇ ನೀವೆ ಅಡ್ಜೆಸ್ಟ್ ಮಾಡಿ ನೈತಿಕ ಶಿಕ್ಷಣಕ್ಕೆ ಹಾಜರಿ ಕರೆದು ಬಂದು ಬಿಡಿ ಭಗವಂತ ಹಾಗಿದಾನೆ, ದೇಶ ಹಾಗಿದೆ, ಮಹಾತ್ಮಾ ಗಾಂಧಿ ಹಾಗಿದ್ದಾರೆ, ಅಂಬೇಡ್ಕರ್ ಇಂಥವರು ಎಂದು ಹೇಳಿ ಬಂದುಬಿಡಿ, ದಯವಿಟ್ಟು ಹಾಗೆ ಮಾಡಬೇಡಿ ಅದಕ್ಕೆ ಬೇಕಾದಂಥ ಸರಿಯಾದಂಥ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಿ ನಿಮ್ಮಲ್ಲಿ ವಿನಂತಿ ಮಾಡುತ್ತೇನೆ.

ಇನ್ನು ನಮ್ಮ ಗೊತ್ತು ಗುರಿಗಳ ಬಗ್ಗೆ ಮಾತನಾಡುತ್ತಿದ್ದೆ, ಸ್ವಾಮಿ ನಮ್ಮ ದೇಶ ಇವೊತ್ತು

ಜಗತ್ತಿನಲ್ಲಿ ಪ್ರಖ್ಯಾತಿಯಾಗಿದ್ದು ಏಕೆಂದರೆ ಈ ದೇಶದ ಮೌಲ್ಯಗಳು ಈ ದೇಶದ ಸಂಸ್ಕೃತಿ, ಈ ದೇಶದ ಆಧ್ಯಾತ್ಮಿಕ ವಿಚಾರಗಳು ಇದರಿಂದಾಗಿದೆ. ನಾವು ಹಣವನ್ನು ಬೇಡಲಿಕ್ಕೆ ಬೇರೆ ದೇಶದ ಹತ್ತಿರ ಹೋಗುತ್ತೇವೆ ಆದರೆ ಇದುವರೆಗೆ ಈ ದೇಶದ ಜನರಿಗೆ ಸಾಂಸ್ಕೃತಿಕ ವಿಚಾರದ ಬಗ್ಗೆ, ಧಾರ್ಮಿಕ ವಿಚಾರದ ಬಗ್ಗೆ, ಆಧ್ಯಾತ್ಮಿಕ ವಿಚಾರದ ಬಗ್ಗೆ ಮನುಷ್ಯ ಏಕೆ ಬದುಕಬೇಕು, ಬದುಕಿ ಏನು ಮಾಡಬೇಕು ಎನ್ನುವಂಥ ಅತ್ಯಂತ ಉನ್ನತ ವಿಚಾರದ ಬಗ್ಗೆ ಯಾರ ಹತ್ತಿರ ಬೇಡುವಂಥ ಅವಶ್ಯಕತೆ ಇಲ್ಲ. ಆದರೆ ಇದೆಲ್ಲಾ ಯಾವುದರಲ್ಲಿ ಇದೆ. ಈ ಗ್ರಂಥಗಳೆಲ್ಲ ಸಂಸ್ಕೃತದಲ್ಲಿ ಇದೆ. ಇವೊತ್ತು ಜರ್ಮನ್‌ನಿಂದ ಬಂದು ಇಲ್ಲಿ ಸಂಸ್ಕೃತ ಅಭ್ಯಾಸ ಮಾಡಿಕೊಂಡು ಹೋಗುತ್ತಾರೆ. ಕಳೆದ ವರ್ಷ ಜರ್ಮನ್‌ನಿಂದ ಒಬ್ಬಳು ಪ್ರೊಫೆಸರ್ ನಮ್ಮ ಊರಿಗೆ ಬಂದಿದ್ದರು. ದಲಾಲ್ ಪಿಕೋಲಾ ಎಂದು ಅವರ ಹೆಸರು. ನಾನು ಅವರನ್ನು ಏನು ಕೆಲಸ ಮಾಡುತ್ತೀರಿ ಎಂದು ಕೇಳಿದೆ. I am a Professor in german University about South Indian culture ಎಂದು ಹೇಳಿದರು. ಇಲ್ಲಿ ಏತಕ್ಕೆ ಬಂದಿದ್ದೀರಿ ಎಂದು ಕೇಳಿದೆ. The effect of Ramayan on the South Indian culture. ಇದನ್ನು ಅಭ್ಯಾಸ ಮಾಡಲಿಕ್ಕೆ ನಾನು ಬಂದಿದ್ದೇನೆ ಎಂದು ಹೇಳಿದರು ಹಾಗೂ ನಮ್ಮ ದಕ್ಷಿಣ ಭಾರತದಲ್ಲಿ ಸಂಚಾರ ಮಾಡಿದರು. ನಾನೊಂದು ಐದು ಪ್ರಶ್ನೆಯನ್ನು ಅವರಿಗೆ ಕೇಳಿದೆ, ಅನಂತರ ಏತಕ್ಕೆ ಕೇಳಿದೆ ಎನಿಸಿತು. ನಿಮಗೆ ಸಂಸ್ಕೃತ ಗೊತ್ತಿದೆಯಾ? ಅಲ್ಲಿ ಸಂಸ್ಕೃತ ಹೇಳಿಕೊಡುತ್ತಾರೋ ಎಂದು anything you want to learn about India ಭಾರತದ ಬಗ್ಗೆ ನಾವು ಏನು ಕಲಿಯಬೇಕಾದರೂ ಮೂರು ವರ್ಷ ಸಂಸ್ಕೃತವನ್ನು ಕಡ್ಡಾಯವಾಗಿ ಅಭ್ಯಾಸ ಮಾಡಬೇಕು, ಸಂಸ್ಕೃತ ಅಭ್ಯಾಸ ಮಾಡಿದಮೇಲೆ you can be a Reader in Indian culture, You can be a Professor in Indian culture. You can be a Lecturer in Indian culture. ಪರ ದೇಶದಿಂದ ಇವೊತ್ತು ಸಂಸ್ಕೃತವನ್ನು ಕಲಿಯಲಿಕ್ಕೆ ನಮ್ಮ ದೇಶಕ್ಕೆ ಬರುತ್ತಿದ್ದಾರೆ. ಆದರೆ ಸಂಸ್ಕೃತ ವಿದ್ಯಾಭ್ಯಾಸದ ಬಗ್ಗೆ ನಮ್ಮಲ್ಲಿ ಕಳಕಳಿ ಇಲ್ಲ. ಕಲಿಯಲಿಕ್ಕೆ ಯಾರು ಬರುವುದಿಲ್ಲರೀ ಎಂದು ಹೇಳುತ್ತಾರೆ. ಏಕೆ ಬರುವುದಿಲ್ಲ? ನಾವು ಅದಕ್ಕೆ ವ್ಯವಸ್ಥೆ ಮಾಡಿದ್ದೇವೆಯೇ? ಇವೊತ್ತು ಸಂಸ್ಕೃತ ಶಿಕ್ಷಕ 'ಬಿ' ಕ್ಲಾಸ್ ಶಿಕ್ಷಕ, ಅವನಿಗೆ ಬೇಕಾದಂಥ ಮನ್ನಣೆ ಇದೆಯೇ? ಸಂಸ್ಕೃತ ಕಲಿಸುವಂತಹ, ಉಪನ್ಯಾಸಕರನ್ನು ಕೊಡುವಂಥ ಶಕ್ತಿ ನಮ್ಮಲ್ಲಿ ಇಲ್ಲ. ಬೆಳಿಗ್ಗೆನೆ ಆ ಪ್ರಶ್ನೆ ಬಂತು. ಇವೊತ್ತು ಬೆಂಗಳೂರಿನಲ್ಲಿ, ಮೈಸೂರಿನಲ್ಲಿ ಇರುವಂಥ ಮಹಾ ವಿದ್ಯಾಲಯಗಳಲ್ಲಿ ಬೇಕಾದಂಥ ಉಪನ್ಯಾಸಕರನ್ನು ಕೊಡುವಂಥ ಶಕ್ತಿ ನಮ್ಮಲ್ಲಿ ಇಲ್ಲ. ಸಂಸ್ಕೃತವನ್ನು ಕಲಿಯಲಿಕ್ಕೆ ಬೇರೆ ದೇಶದಿಂದ ಈ ದೇಶಕ್ಕೆ ಬರುತ್ತಾರೆ. ಆದರೆ ಬಹುಶಃ ನಾಳೆಯೋ, ನಾಡಿದ್ದೋ ನಾವು ಸಂಸ್ಕೃತವನ್ನು ಕಲಿಯಲಿಕ್ಕೆ ಜರ್ಮನ್‌ಗೆ ಹೋಗಬೇಕಾಗುತ್ತದೇನೋ. ತಾಯಿಯಂತೆ ಇರುವಂಥ ಈ ಕರ್ನಾಟಕದಲ್ಲಿ, ಇಂತಹ ವಿಚಾರಗಳಿಗೆ ಮಾನ್ಯ ವಿದ್ಯಾಮಂತ್ರಿಗಳು ಸಂಸ್ಕೃತಕ್ಕೆ ವಿಶೇಷ ಪ್ರೋತ್ಸಾಹವನ್ನು ಕೊಡುವಲ್ಲಿ ಬೇಕಾದಂಥ ಹಣವನ್ನು ಬಿಡುಗಡೆ ಮಾಡಿಸಿ. ಅದನ್ನು ಈ ವರ್ಷವಂತೂ ಮಾಡಲಿಕ್ಕೆ ಆಗಲಿಲ್ಲ. ಮುಂದಿನ ವರ್ಷವಾದರು ಅದನ್ನು ಸೇರಿಸುವಂಥ ಕೆಲಸವನ್ನು ತಾವು ಮಾಡಬೇಕು.

ಇನ್ನು ಉರ್ದು ಶಾಲೆಗಳ ಬಗ್ಗೆ ಒಂದು ಮಾತನ್ನು ಹೇಳಲೇಬೇಕಾಗಿದೆ. ಸ್ವಾಮಿ ಇವೊತ್ತು ನೀವು ಉರ್ದು ಶಾಲೆಗಳಿಗೆ ಮತ್ತಷ್ಟು ಪ್ರೋತ್ಸಾಹವನ್ನು ಕೊಡುತ್ತಿದ್ದೀರಿ. ಏಕೆ ಅವರನ್ನು ನಮ್ಮೆಲ್ಲರಿಂದ ಬೇರ್ಪಡಿಸುತ್ತಿದ್ದೀರಿ. Let them come to the mainstream.

ಇವೊತ್ತು ಇಂಗ್ಲೀಷ್ ಶಿಕ್ಷಣದ ಶಾಲೆಯನ್ನು ಮಾಡಬೇಕಾದರೆ ನಾಲ್ಕನೇ ತರಗತಿಯವರೆಗೆ ಕನ್ನಡ ಕಲಿಯುವುದನ್ನು ಕಡ್ಡಾಯ ಎನ್ನುವುದು ಸರ್ಕಾರದ ಧೋರಣೆ. ನಾನು ನಿಮ್ಮನ್ನು ಪ್ರಶಂಶಿಸುತ್ತೇನೆ. ಸರ್ಕಾರವನ್ನು ಈ ವಿಷಯದಲ್ಲಿ ನಾನು ಅಭಿನಂದಿಸುತ್ತೇನೆ. ಇದೊಂದು ಒಳ್ಳೆಯ ಹೆಜ್ಜೆ. ನೆನ್ನೆ ನಾನು ಯಾರೋ ಸ್ನೇಹಿತರ ಹತ್ತಿರ ಮಾತನಾಡುತ್ತಿದ್ದೆ, ಇಲ್ಲಿ ಬೆಂಗಳೂರಿನಲ್ಲಿ ಕೆಲವು ಕಡೆಗಳಲ್ಲಿ ಅವರು ಕರ ಪತ್ರವನ್ನು ಪ್ರಿಂಟ್ ಮಾಡಿಸಿದ್ದರು. ಅವರು ಅದನ್ನು ಇಂಗ್ಲೀಷನಲ್ಲಿ ಮಾಡಿಸಿದ್ದರು. ನಾನು ಕೇಳಿದೆ. ಏಕೆ ಸ್ವಾಮಿ ಇದನ್ನು ಇಂಗ್ಲೀಷ್‌ನಲ್ಲಿ ಮಾಡಿದ್ದೀರಿ ಎಂದು. ಅದಕ್ಕೆ ಅವರು ಹೇಳಿದರು ಆ ಏರಿಯಾದಲ್ಲಿ ಕನ್ನಡ ಗೊತ್ತೇ ಇಲ್ಲ ಎಂದು. ಅದು ಯಾವುದೋ ಒಂದು ಏರಿಯಾ, ಅದು ಯಾವುದೇಂದು ನನಗೆ ಗೊತ್ತಿಲ್ಲ. ಬೆಂಗಳೂರಿನ ಪರಿಚಯ ನನಗೆ ಜಾಸ್ತಿ ಇಲ್ಲ. ನಾನೂ ಕೂಡ ಇಂಗ್ಲೀಷ್ ಶಬ್ದವನ್ನು ಹೆಚ್ಚಿಗೆ ಬಳಸುತ್ತಿದ್ದೇನೆ. ಏಕೆಂದರೆ ನಾನು ಕಲಿತದ್ದು ಇಂಗ್ಲೀಷನಲ್ಲಿ ಈಗ ಕನ್ನಡಕ್ಕೆ ಅಳವಡಿಸಿಕೊಂಡಿದ್ದೇನೆ. ಈ ಉರ್ದು ಶಾಲೆಗಳು ಏನು ಇವೆ ಅದನ್ನು ಬೇರೆಯಾಗಿ ಇರುವುದನ್ನು ಮಾಡಿದ್ದು ಬಹಳ ತಪ್ಪು. ಪಾಪ, ಬೆಳೆಯುವಂಥ ಆ ವಿದ್ಯಾರ್ಥಿಗಳಿಗೆ you are keeping them in a water-tight compartment. ಜಗತ್ತು ಏನೂ ಎಂದು ಗೊತ್ತಿಲ್ಲ ಅವರಿಗೆ, ಅಂದರೆ ಉರ್ದು ಕಲಿಯುವಂಥ ಮಕ್ಕಳು ಇಂಜಿನಿಯರ್ ಆಗುವುದು ಬೇಡವೇ, ಅವರು ಡಾಕ್ಟರ್ ಆಗುವುದು ಬೇಡವೇ, ಅವರು ವಕೀಲ್‌ರು ಆಗುವುದು ಬೇಡವೆ, ಅವರು ದೊಡ್ಡ ವಿಜ್ಞಾನಿ ಆಗುವುದು ಬೇಡವೇ? ಸನ್ಮಾನ್ಯ ಮಂತ್ರಿಗಳೇ, ಅವರು ಇನ್ನೂ ಕೂಡ ಫಿಟರ್ ಕೆಲಸ ಸೈಕಲ್ ರಿಪೇರಿ ಮಾಡುವಂಥ ಕೆಲಸ ಇಲ್ಲವೇ ಹಳೇ ವಸ್ತುಗಳನ್ನು ಒಟ್ಟುಗೂಡಿಸುವ ಕೆಲಸ-ಇಂತಹ ಕೆಲಸಗಳನ್ನೇ ಮಾಡಿಕೊಂಡು ಬದುಕಬೇಕಾಗುವಂಥ ಆಸೆ ಏನಾದರೂ ನಿಮಗೆ ಇದೆಯೋ? ಖಂಡಿತ ಇಲ್ಲ, ಆ ಆಸೆ ಖಂಡಿತ ನಿಮ್ಮಲ್ಲಿ ಇಲ್ಲ ಎಂದು ನನಗೆ ಗೊತ್ತಿದೆ. ಹಾಗಾದರೆ ಅವರನ್ನು ನಮ್ಮ ಹಾಗೆ ಇಂಜಿನಿಯರ್, ಡಾಕ್ಟರ್, ವಿಜ್ಞಾನಿಗಳನ್ನಾಗಿ ಮಾಡಬೇಕಾದರೆ ಅವರುಗಳನ್ನೂ ಕೂಡ ನಮ್ಮ ಶಾಲೆಗಳಿಗೆ ಕರೆತನ್ನಿ, ನಮ್ಮ ಶಾಲೆಯಲ್ಲಿ ಸಿಗುವಂಥ ಶಿಕ್ಷಣಕ್ಕೆ ಅವರು ಕೂಡ ಭಾಗಿಗಳಾಗಲಿ, ಹಾಗೆಯೇ ಇವೊತ್ತು ಯಾವ ಯಾವ ಉರ್ದು ಶಾಲೆಗಳು ಇದ್ದಾವೆ ಅವುಗಳಲ್ಲಿ ನಾಲ್ಕನೆಯ ತರಗತಿಯವರೆಗೆ ಕನ್ನಡ ಕಲಿಯಬೇಕಾದಂಥದ್ದನ್ನು ಕಡ್ಡಾಯ ಮಾಡಬೇಕಾಗಿದೆ. ಈಗ ಮಾಡಿದ್ದಾರೋ ಏನೋ ನನಗೆ ಗೊತ್ತಿಲ್ಲ.

ಇನ್ನು ರೆಸಿಡೆನ್ಸಿಯಲ್ ಸ್ಕೂಲ್ಸ್ ಬಗ್ಗೆ. ನಾನು ಮೊನ್ನೆ ಒಂದು ಪ್ರಶ್ನೆಯನ್ನು ಕಳಿಸಿದ್ದೆ. ಮಾನ್ಯ ಅಧ್ಯಕ್ಷರೇ, ಅದು ಇನ್ನೂ ಬಂದಿಲ್ಲ. ಅಲ್ಪಸಂಖ್ಯಾತರಿಗಾಗಿ ರೆಸಿಡೆನ್ಸಿಯಲ್ ಸ್ಕೂಲ್‌ಗಳನ್ನು ಮತ್ತು ಹೈಸ್ಕೂಲ್‌ಗಳನ್ನು ಮಾಡುತ್ತೇವೆ ಮತ್ತು ಈಗಾಗಲೇ ಐದು ಮಾಡಿದ್ದೇವೆ ಎಂದು ಮೊನ್ನೆ ಈ ಸಭೆಯಲ್ಲಿ ಮಾನ್ಯ ಪ್ರಕಾಶ್‌ರವರು ಹೇಳಿದರು. ಇವೊತ್ತು ಹಿಂದುಳಿದ ವರ್ಗ ಅಲ್ಪಸಂಖ್ಯಾತರ ಹಾಸ್ಟೆಲ್‌ಗಳು ಇರುವಾಗ ಮತ್ತೇ ಪುನಃ ಏಕೆ ಅಲ್ಪಸಂಖ್ಯಾತರದ್ದು ಬೇರೆ ಮಾಡುತ್ತಿದ್ದೀರಿ ನೀವು ? ಇದರ ಅರ್ಥ ಏನು ? ಏಕೆ Again you are keeping them into a water-tight compart-ment ಅವರನ್ನು ಈ ದೇಶದ ಮೂಲ ವಿಚಾರಧಾರೆಯಿಂದ ಬೇರ್ಪಡಿಸುವಂಥ ಕೆಲಸವನ್ನು ಮಾಡುತ್ತಿದ್ದೀರಿ. ದಯವಿಟ್ಟು ಇದನ್ನು ಮಾಡಬೇಡಿ. ಈಗಲೇ ಇದನ್ನು ತಕ್ಷಣ ನಿಲ್ಲಿಸಿಬಿಡಿ. ಅಲ್ಪಸಂಖ್ಯಾತರಿಗೆ ಮತ್ತು ಹಿಂದುಳಿದ ವರ್ಗದ ಹಾಸ್ಟೆಲ್‌ಗಳು, ನೀವು ಹೆಚ್ಚಿಗೆ ಕೇಳಿದರೆ ಹರಿಜನ ಗಿರಿಜನರಿಗೆ ಬೇರೆ ಹಾಸ್ಟೆಲ್‌ಗಳನ್ನು

ಮಾಡುವುದುರ ಬಗ್ಗೆ ಕೂಡ ನನ್ನ ತಾತ್ವಿಕ ವಿರೋಧ ಇದೆ. ಇವೊತ್ತು ನಾನು ಅದನ್ನು ಒಪ್ಪಿದರೂ ಕೂಡ ತಾತ್ವಿಕವಾಗಿ ನಾನು ವಿರೋಧ ಮಾಡುತ್ತೇನೆ. ಏಕೆ ಅವರನ್ನು ಬೇರೆ ಇಡುತ್ತೀರಿ? ಅವರನ್ನು ಒಟ್ಟಿಗೆ ಸೇರಿಸಿ. ಅವರಿಗೆ ಹೆಚ್ಚು ಪ್ರಾಧಾನ್ಯತೆ ಕೊಡಿ. ಆ ಹಾಸ್ಟೆಲ್‌ಗಳಿಗೆ ಶೇಕಡಾ 50ರಷ್ಟು ರಿಸರ್ವೇಶನ್ ಕೊಡಿ. ಶೇಕಡಾ 75ರಷ್ಟು ರಿಸರ್ವೇಶನ್ ಕೊಡಿ. ಏಕೆ ಅವರನ್ನು ಬೇರೆ ಇಡುತ್ತೀರಿ. ನಾವು ಬೇರೆ ಎನ್ನುವಂಥದ್ದನ್ನು ಏಕೆ ಮಾಡುತ್ತೀರಿ? ಮೊಟ್ಟೆ ಯೋಜನೆಯೊಂದು ನಮ್ಮ ಊರಿನಲ್ಲಿ ಬಂತು. ಹರಿಜನ ಮಕ್ಕಳಿಗೆ ಮಾತ್ರ ಮೊಟ್ಟೆಗಳನ್ನು ಕೊಡಬೇಕು ಎಂದು. ಸ್ವಾಮಿ ಶಾಲೆಯಲ್ಲಿ ಆರು ವರ್ಷದ ಮಗು ಕುಳಿತುಕೊಂಡಿದೆ ನೀನು ಹರಿಜನನಾ, ನೀನು ಯಾವ ಜಾತಿ, ನಿನಗೆ ಮೊಟ್ಟೆ ಕೊಡುತ್ತೇನೆ, ನಿನಗೆ ಮೊಟ್ಟೆ ಕೊಡುತ್ತೇನೆ ಎಂದು ಕೇಳುವುದು ಸರಿಯಲ್ಲ. ಪುಣ್ಯಕ್ಕೆ ಅದು ಅಷ್ಟಕ್ಕೆ ನಿಂತುಹೋಯಿತು. ಕೊಡಿ ಎಲ್ಲರಿಗೂ ಕೊಡಿ. ಆ ಹುಡುಗನ ಮನೆಗೆ ಹೋಗಿ ಆ ಉಪವಾಸ ಬಿದ್ದ ತಾಯಿಗೆ ಕೊಡಿ. ಬಟ್ಟೆ ಕೊಡಿ. ಅವನು ಹಾಕುವಂತ ಬಟ್ಟೆಗಳನ್ನು ಅವನ ಮನೆಗೆ ಹೋಗಿ ಕೊಡುವಂಥ ಕೆಲಸ ಮಾಡಿ, ಈ ರೀತಿಯಾದಂಥ ಯೋಜನೆಗಳನ್ನು ತಾವು ದಯವಿಟ್ಟು ಮಾಡುವುದಕ್ಕೆ ಹೋಗಬಾರದು. ಇನ್ನು ವರ್ಗಾವಣೆಯ ನೀತಿಯ ಬಗ್ಗೆ ಮಾತನಾಡಬೇಕಾಗುತ್ತದೆ. ಇದನ್ನು ಉಲ್ಲೇಖ ಮಾಡಬೇಕಾಗುತ್ತದೆ. ಏಕೆಂದರೆ ಸಾಕಷ್ಟು ಹಣ ಇಲ್ಲಿ ಖರ್ಚಾಗಿದೆ. ಈ ವರ್ಗಾವಣೆಯಲ್ಲಿ ಲಕ್ಷಾಂತರ ರೂಪಾಯಿ ಖರ್ಚಾಗಿದೆ ಬೆಂಗಳೂರಿನ ಶಿಕ್ಷಕ ಗುಲ್ಬರ್ಗಾಕ್ಕೆ, ಗುಲ್ಬರ್ಗಾದ ಶಿಕ್ಷಕ ಉತ್ತರ ಕನ್ನಡಕ್ಕೆ ಉತ್ತರ ಕನ್ನಡದ ಶಿಕ್ಷಕ ರಾಯಚೂರಿಗೆ, ರಾಯಚೂರಿನ ಶಿಕ್ಷಕ ಬಿಜಾಪುರಕ್ಕೆ ವರ್ಗಾವಣೆ. ಆದ್ದರಿಂದ ವರ್ಗಾವಣೆಯಲ್ಲಿ ಸ್ಪಷ್ಟವಾದ ಒಂದು ನೀತಿ ಬೇಕು. ಲಕ್ಷಾಂತರ ರೂಪಾಯಿ ಹಣವನ್ನು ಈ ವರ್ಗಾವಣೆಗೋಸ್ಕರ ಹಾಳು ಮಾಡಿದ್ದೇವೆ. ಸರ್ಕಾರದ ಅಧಿಕೃತ ಕೋಶದಿಂದ ಹಾನಿಯಾದುದನ್ನು ಮಾತ್ರ ನಾನು ಈಗ ಹೇಳುತ್ತಿರುವುದು. ಈ ವ್ಯವಹಾರದಲ್ಲಿ ಈಚೆ ಆಚೆ ಎಷ್ಟೋ ಕೋಟ್ಯಾಂತರ ರೂಪಾಯಿ ಹಸ್ತಾಂತರವಾಗಿದೆ. ಅದರ ಬಗ್ಗೆ ನಾನು ಈಗ ಮಾತನಾಡುತ್ತಿಲ್ಲ. ನಾನು ಹೇಳುತ್ತಿರುವುದು ಸರ್ಕಾರದ ಖಜಾನೆಯಿಂದ ಈ ವರ್ಗಾವಣೆಗೆ ಎಷ್ಟು ಖರ್ಚಾಗುತ್ತಿದೆ ಎಂದು ಈ ಶಾಸನ ಸಭೆಯಲ್ಲಿ ಕೇಳುತ್ತಿದ್ದೇನೆ. ಇದೆಲ್ಲಾ ಏಕೆ ಖರ್ಚು ಆಗುತ್ತಿದೆ, ಹೌದು ಶಾಸಕರು ಬಂದು ಒತ್ತಾಯ ಮಾಡಿದರು, ನಾನೇ ಹೋಗಿ ಗೋವಿಂದೇಗೌಡರ ಹತ್ತಿರ ಸ್ವಾಮಿ ಈ ವರ್ಗಾವಣೆಯನ್ನು ಮಾಡಿ ಎಂದು ಕೇಳಿದೆ, ಅದಕ್ಕೊಂದು ಸ್ಪಷ್ಟವಾದಂತ ನೀತಿ ಬೇಕು, ನಿಯಮ ಬೇಕು, ಸುಮಾರು 3 ರಿಂದ 5 ವರ್ಷದೊಳಗಿರುವವರನ್ನು ನಾವು ವರ್ಗಾವಣೆ ಮಾಡುವುದಿಲ್ಲ, ಒಂದೇ ಕಡೆ 8 ವರ್ಷಗಳಿಗಿಂತ ಹೆಚ್ಚಾಗಿ ಸೇವೆ ಮಾಡಲು ಬಿಡುವುದಿಲ್ಲ, ಗಂಡ-ಹೆಂಡತಿ ಕೆಲಸದಲ್ಲಿ ಒಂದೇ ಸ್ಥಳದಲ್ಲಿ ಇರುವಂತೆ ಮಾಡಲು ಪ್ರಾಮಾಣಿಕ ಪ್ರಯತ್ನವನ್ನು ನಾವು ಮಾಡುತ್ತೇವೆ, ಒಂದು ಹಳ್ಳಿಯ ಜಿಯಾಗ್ರಫಿ ಗೊತ್ತಿಲ್ಲ ನಿಮಗೆ. ನನ್ನ ಕ್ಷೇತ್ರದ ಹಾಗೆ ಬಹುಶಃ ಅನೇಕ ಮಾನ್ಯ ಸದಸ್ಯರ ಕ್ಷೇತ್ರಗಳಲ್ಲಿರಬಹುದು, 5 ಮೈಲಿ ಕಾಡಿನಲ್ಲಿ ನಡೆದುಕೊಂಡು ಹೋಗಿ ಒಬ್ಬ ಹೆಣ್ಣು ಮಗಳು ಒಂದು ಹಳ್ಳಿಯ ಏಕೋಪಾಧ್ಯಾಯ ಶಾಲೆಯಲ್ಲಿ ಕೆಲಸ ಮಾಡಬೇಕು. ಸಾಧ್ಯವಿದೆಯೇ ಎಂಬುದನ್ನು ಸ್ವಲ್ಪ ವಿಚಾರ ಮಾಡಿ, ಅಲ್ಲಿಗೆ ಯಾರಾದರೂ ಹೊಸದಾಗಿ ಬಂದಂಥ ಯುವಕನನ್ನು ಹಾಕಿ. ಈ ರೀತಿಯ ವರ್ಗಾವಣೆ ಇರುವಂಥ ಸಂದರ್ಭದಲ್ಲಿ, ನಾನು ಇಂದು ಡೀಟೆಲ್ಸ್‌ಗೆ ಹೋಗುತ್ತಿಲ್ಲ, ನಾನು ಇಷ್ಟು ಮಾತ್ರ ಸ್ಪಷ್ಟವಾಗಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ವರ್ಗಾವಣೆ ಬಗ್ಗೆ ನಮ್ಮಲ್ಲಿ ಒಂದು ಸ್ಪಷ್ಟವಾದ ನೀತಿ ಇದ್ದರೆ ಲಕ್ಷಾಂತರ ರೂಪಾಯಿಗಳನ್ನು

ನಾವು ಉಳಿಸಬಹುದು. ಇದರ ಜೊತೆಗೆ ಎಲ್ಲಿಗೆ ಯಾವ ಶಿಕ್ಷಕ ಬೇಕು, ಎಲ್ಲಿಗೆ ಮನಸ್ಸಿದೆ ಅವನಿಗೆ ಆ ಶಿಕ್ಷಕ ಉತ್ತಮವಾಗಿ ಕೆಲಸವನ್ನು ನಿರ್ವಹಿಸಲಿಕ್ಕೆ ಸಾಧ್ಯವಾಗುತ್ತದೆ ಎನ್ನುವಂಥ ಮಾತನ್ನು ಹೇಳುತ್ತೇನೆ.

ಶ್ರೀ ಹೆಚ್.ಡಿ.ಬಸವರಾಜು:- ಮಾನ್ಯ ಅಧ್ಯಕ್ಷರೇ, ಈ ವರ್ಗಾವಣೆ ವಿಷಯಕ್ಕೆ ಬಂದಾಗ, ಇಂದು ಬೆಳಿಗ್ಗೆ ಕೂಡ ಮಾನ್ಯ ಸಚಿವರನ್ನು ನಾನು ಕೇಳಿಕೊಂಡಿದ್ದೇನೆ. ವರ್ಗಾವಣೆಯೇನೋ ಸರ್ಕಾರದ ನಿಟ್ಟಿನಲ್ಲಿ ಮತ್ತು ಅಧಿಕಾರಿ ವಲಯದಿಂದ ಮಾಡಿದರೆ ಬಹಳಷ್ಟು ಚೆನ್ನಾಗಿರುತ್ತದೆ ಮತ್ತು ಅದಕ್ಕೂ ಕೂಡ ಒಂದು ಬೆಲೆ ಬರುತ್ತದೆ. ಮಾನ್ಯ ಗೋವಿಂದೇಗೌಡರು ಮಂತ್ರಿಯಾಗಿ ಇರುವಂಥ ಈ ಸಂದರ್ಭದಲ್ಲಿ ಖೊಟ್ಟಿ ಟ್ರಾನ್ಸ್‌ಫರ್ ಆರ್ಡ್‌ರ್‌ಗಳು ಇಶ್ಯೂ ಆಗುತ್ತಾ ಇದೆ. ಹುಕ್ಕೇರಿಯಲ್ಲಿ ಖೊಟ್ಟಿ ಟ್ರಾನ್ಸ್‌ಫರ್ ಆರ್ಡ್‌ರ್ ತೆಗೆದುಕೊಂಡು ಹೋಗಿ ಬದಲಾವಣೆ ಮಾಡಿಕೊಂಡಿದ್ದಾರೆ. ಅದೇ ರೀತಿ ಖಾನಾಪುರದಲ್ಲಿಯೂ ಕೂಡ ಬದಲಾವಣೆ ಮಾಡಿಕೊಂಡಿದ್ದಾರೆ. ಇದು ಹೇಗೆ ಆಯಿತು ಎಂದು ತಪ್ಪಿತಸ್ಥರನ್ನು ಕಂಡುಹಿಡಿಯಬೇಕು.

ಉಪಾಧ್ಯಕ್ಷರು:- ಬಸವಾರಜುರವರೇ, ಇದರ ಬಗ್ಗೆ ನಿಮ್ಮದೂ ಕೂಡ ಹೆಸರು ಮಾತನಾಡುವವರ ಲಿಸ್ಟ್‌ನಲ್ಲಿದೆ. ನಿಮ್ಮ ಹೆಸರು ಬಂದಾಗ ಹೇಳುತ್ತೇನೆ, ಆಗ ಮಾತನಾಡಿ.

ಶ್ರೀ ಹೆಚ್.ಡಿ.ಬಸವರಾಜು:- ಅದರ ಬಗ್ಗೆ ತನಿಖೆ ಮಾಡಿ ತಪ್ಪಿತಸ್ಥರನ್ನು ಕಂಡುಹಿಡಿದು ಅವರ ಮೇಲೆ ಕ್ರಮ ಕೈಗೊಳ್ಳಬೇಕು ಮತ್ತು ಇನ್ನು ಮುಂದೆ ಈ ರೀತಿಯ ವರ್ಗಾವಣೆ ಆಗದೇ ಇರುವ ಹಾಗೆ ತಡೆಯಬೇಕು ಎಂದು ನಾನು ಮಂತ್ರಿಗಳಲ್ಲಿ ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಡಾ|| ಯು.ಚಿತ್ತರಂಜನ್:- ಸನ್ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ಉನ್ನತ ಶಿಕ್ಷಣದ ಬಗ್ಗೆ ನಾನು ಈಗಾಗಲೇ ಹಲವಾರು ವಿಷಯಗಳನ್ನು ಹೇಳಿದ್ದೇನೆ. ಈ ಉನ್ನತ ಶಿಕ್ಷಣಕ್ಕೆ ಒದಗಿಸಿದಂಥ ಅನುದಾನ ಏನಿದೆ ಅದು ತೀರ ಕಡಿಮೆಯಾಗಿದೆ. ಏಕೆ? ಇವೊತ್ತು ಉನ್ನತ ಶಿಕ್ಷಣವನ್ನು ನಮ್ಮ ಸರ್ಕಾರದ ವತಿಯಿಂದ ಅನೇಕ ಕಡೆಗಳಲ್ಲಿ ಕೊಡಲಿಕ್ಕೆ ಆಗುತ್ತಿಲ್ಲ. ಕಳೆದ ಅಧಿವೇಶನದಲ್ಲಿ ನಾನು ಈ ಬಗ್ಗೆ ಒಂದು ಪ್ರಶ್ನೆ ಕೇಳಿದ್ದೆ. ಉತ್ತರ ಕನ್ನಡ ಜಿಲ್ಲೆಯಾದ್ಯಂತ ಪೋಸ್ಟ್ ಗ್ರಾಜ್ಯುಯೇಟ್ ಸ್ನಾತಕೋತ್ತರ ಪದವಿ ಕೊಡತಕ್ಕಂಥ ಒಂದೇ ಒಂದು ಕಾಲೇಜು ಕೂಡ ಇಲ್ಲ. ಏನೋ ಕಳೆದ ವರ್ಷವೋ ಅಥವಾ ಅದರ ಹಿಂದಿನ ವರ್ಷವೋ ಮೀನುಗಾರಿಕೆ ಇಲಾಖೆಯಲ್ಲಿ ಮಾಡಿದರು. ಏಕೆಂದರೆ ಬೇರೆ ಯಾವ ಭಾಗದಲ್ಲು ಮಾಡಲಿಕ್ಕೆ ಆಗಲಿಲ್ಲ ಎಂದು ಕಾಣುತ್ತದೆ. ಅದಕ್ಕೋಸ್ಕರ ಕಾರವಾರದಲ್ಲಿ ಮಾಡಿದರು. ಇದನ್ನು ಬಿಟ್ಟರೆ ಬೇರೆ ಯಾವುದೇ ಸ್ನಾತಕೋತ್ತರ ಪದವಿಯನ್ನು ಕೊಡತಕ್ಕಂಥ ಕಾಲೇಜನ್ನು ಉತ್ತರ ಕನ್ನಡ ಜಿಲ್ಲೆಯಲ್ಲಿ ಕೊಡಲಿಕ್ಕೆ ಏಕೆ ಆಗಲಿಲ್ಲ ಎಂದು ಪ್ರಶ್ನೆ ಕೇಳಿದರೆ ಕರ್ನಾಟಕ ಯುನಿವರ್ಸಿಟಿಯ ನಿಯಮಗಳ ಪ್ರಕಾರ ಮಾಡಲಿಕ್ಕೆ ಆಗುವುದಿಲ್ಲ ಎಂದು ಹೇಳಿದ್ದಾರೆ. ಅದು ಯಾವ ನಿಯಮ ಮಾಡಿದೆ ಈ ಕರ್ನಾಟಕ ಯುನಿವರ್ಸಿಟಿ ಎಂದು ನನಗೇನೊ ಅರ್ಥವಾಗುತ್ತಿಲ್ಲ. ಇದಕ್ಕೆ ಒಂದು ಸರಿಯಾದಂಥ, the mind has not been applied in this direction. ಇದೇ ಉತ್ತರ ಕನ್ನಡ ಜಿಲ್ಲೆಯಲ್ಲಿ ಇಷ್ಟು ಪ್ರತಿಭಾವಂತರು ಇದ್ದಾರೆ. ಇವೊತ್ತು ಬಹಳ ಹೆಮ್ಮೆಯಿಂದ ಹೇಳುತ್ತಿದ್ದೇನೆ, ರಾಷ್ಟ್ರನಾಯಕರಾಗಿರುವ ನಮ್ಮ ನಿಮ್ಮ ನೆಚ್ಚಿನ ರಾಮಕೃಷ್ಣಹೆಗಡೆಯವರು ಉತರ ಕನ್ನಡ ಜಿಲ್ಲೆಯಿಂದ ಬಂದಂಥವರು. ಅವರು ಎಂ.ಎ ಪದವಿ ಪಡೆಯಲಿಕ್ಕೆ ಬನಾರಸ್‌ಗೆ

ೋಗಬೇಕಾಯಿತು. ಕಾಶಿಗೆ ಹೋಗಬೇಕಾಯಿತು. ಇವೊತ್ತು ಸಾವಿರಾರು ಜನ ್ರತಿಭಾವಂತರು ಇದ್ದಾರೆ. ಇಲ್ಲಿ ಎಂ.ಎ ಪದವಿ ಎಂಎಸ್‌ಸ್ಸಿ ಪದವಿ ಪಡೆಯುವಂಥ ಸೌಭಾಗ್ಯ ವೊತ್ತಿನವರೆಗೂ ಸರ್ಕಾರ ನಮಗೆ ಕಲ್ಪಿಸಿಕೊಟ್ಟಿಲ್ಲ. ಇದಕ್ಕೆ ಹಣದ ತೊಂದರೆಯೇ? ಇದಕ್ಕೆ ೇಕಾದಂತ ಹಣವನ್ನು ಕೊಡಲಿಕ್ಕೆ ಆಗುವುದಿಲ್ಲವೇ? ಸ್ವಾತಂತ್ರ್ಯಯೋಧರು ಹೋರಾಟ ಮಾಡಿದಂಥ ದಿ ಬಾರ್ಡೋಲಿ ಆಫ್ ಕರ್ನಾಟಕ ಎನ್ನುವಂಥ ಅಂಕೋಲೆಯಲ್ಲಿ ಅತ್ಯಂತ ಉತ್ತಮವಾದ ಕಾಲೇಜ್ ಇದೆ, ಅಲ್ಲಿ ಏಕೆ ನಿಮಗೆ ಸ್ನಾತಕೋತ್ತರ ಪದವಿಯನ್ನು ಮಾಡುವುದಕ್ಕೆ ಆಗುವುದಿಲ್ಲ? ಅದೇ ರೀತಿ ಹೊನ್ನಾವರದಲ್ಲಿ ಧರ್ಮಸ್ಥಳ ಮಂಜುನಾಥೇಶ್ವರ ಅತ್ಯಂತ ಉತ್ತಮವಾದ ಕಾಲೇಜ್ ಇದೆ, ಅಲ್ಲಿ ಸ್ನಾತಕೋತ್ತರ ಪದವಿಯನ್ನು ಮಾಡುವುದಕ್ಕೆ ನಿಮಗೆ ಆಗುವುದಿಲ್ಲವೇ? ಅದೇ ರೀತಿ ಶಿರಸಿಯಲ್ಲಿಯೂ ಇದೆ. ಎಲ್ಲಾದರೂ ಒಂದು ಕಡೆಯಾದರೂ ಕೊಡಿ, ಇದನ್ನು ಮಾಡಲು ನೀವು ಪ್ರಯತ್ನವನ್ನೇ ಇನ್ನೂ ಮಾಡಲಿಲ್ಲ. ಈ ರೀತಿಯ ಉನ್ನತ ಶಿಕ್ಷಣದ ಪೂರ್ವಭಾವಿಯಾಗಿ ಇರುವಂಥ ಗ್ರಾಜ್ಯುಯೇಶನ್ ಏನಿದೆ ಅಂದರೆ ಬಿ.ಎ, ಬಿ.ಕಾಂ, ಕೋರ್ಸ್ ಏನಿದೆ ಅದರ ಬಗ್ಗೆ ನಾನು ಉಲ್ಲೇಖ ಮಾಡಲಿಲ್ಲ. ಏಕೆ ನಾವು ಇನ್ನೂ ಬ್ರಿಟಿಶ್ ಪದ್ಧತಿಯನ್ನು ಅನುಸರಿಸುತ್ತಿದ್ದೇವೆ? ಗುಮಾಸ್ತರನ್ನು ತಯಾರು ಮಾಡುವಂಥದ್ದು, ಆ ಬಿ.ಎ, ಬಿಎಸ್ಸಿ, ಕಲಿತವನು ಅರ್ಜಿಯನ್ನು ಸರಿಯಾಗಿ ಬರೆಯುವುದಕ್ಕೂ ಬರುವುದಿಲ್ಲ, ಇಂಥ ವ್ಯಕ್ತಿಗಳನ್ನು ನಾವು ಏಕೆ ನಿರ್ಮಾಣ ಮಾಡುತ್ತಿದ್ದೇವೆ, ಇದಕ್ಕೆ ಒಂದು ಕಡಿವಾಣ ಹಾಕಬೇಕಾಗಿದೆ, ಇಂಥ ಕಾಲೇಜ್‌ಗಳಲ್ಲಿ ನಾವು ವೃತ್ತಿ ಶಿಕ್ಷಣವನ್ನು ಕೊಡುವಂಥ ಒಂದು ವ್ಯವಸ್ಥೆಯನ್ನು ಮಾಡಬೇಕು. ಈ ವೃತ್ತಿ ಶಿಕ್ಷಣವನ್ನು ಕೊಡುವುದರಲ್ಲೂ ಕೂಡ ಇವೊತ್ತು ಡೂಪ್ಲಿಕೇಶನ್ ಇದೆ, ಇವೊತ್ತು ಐ.ಟಿ.ಐ.ನಲ್ಲಿ ಒಂದು ನಮೂನೆ, ಪಾಲಿಟೆಕ್ನಿಕ್‌ನಲ್ಲಿ ಒಂದು ನಮೂನೆ, ವೃತ್ತಿ ಶಿಕ್ಷಣದಲ್ಲಿ ಒಂದು ನಮೂನೆ. ಇದನ್ನು ಸರಿಯಾಗಿ ಅಭ್ಯಾಸ ಮಾಡಿ ಅದಕ್ಕೆ ಎಷ್ಟು ಹಣ ಬೇಕಾಗಿದೆ ಎಂದು ನೋಡಿ ಸರಿಯಾದಂಥ ಅಕೌಂಟೆನ್ಸಿ ಬಗ್ಗೆ ಇರಬಹುದು, ಕಮರ್ಷಿಯಲ್ ಪ್ರಾಕ್ಟೀಸ್ ಬಗ್ಗೆ ಇರಬಹುದು, ಸೈಂಟಿಫಿಕ್ ಅಸಿಸ್ಟೆನ್ಸ್ ಬಗ್ಗೆ ಇರಬಹುದು ಲ್ಯಾಬ್ ಟೆಕ್ನೀಷಿಯನ್ಸ್ ಬಗ್ಗೆ ಇರಬಹುದು, ಕಾರ್ಪೆಂಟರಿ ಬಗ್ಗೆ ಇರಬಹುದು, ಬಿಲ್ಡಿಂಗ್ ಕನ್‌ಸ್ಟ್ರಕ್ಶನ್ ಬಗ್ಗೆ ಇರಬಹುದು, ಪೇಂಟಿಂಗ್ ಬಗ್ಗೆ ಇರಬಹುದು, ಟೇಲರಿಂಗ್ ಬಗ್ಗೆ ಇರಬಹುದು, ಹೋಟೆಲ್ ಮ್ಯಾನೇಜ್‌ಮೆಂಟ್ ಬಗ್ಗೆ ಇರಬಹುದು ಹೀಗೆ ಬೇರೆ ಬೇರೆ ವಿವಿಧವಾದಂಥ ವೃತ್ತಿಗಳು ಏನು ಇವೆ, ಇದರಲ್ಲಿ ಪರಿಣಿತರನ್ನು ತಯಾರು ಮಾಡುವಂಥ ಕೆಲಸ ಈ ಕಾಲೇಜ್‌ನಿಂದ ಆಗಬೇಕೇ ಹೊರತು ನಿರುದ್ಯೋಗಿ ಪದವೀಧರರನ್ನು ಸೃಷ್ಟಿ ಮಾಡಿದರೆ ಅವರು ನಾಳೆ ನಮ್ಮ ಮನೆಗೂ ಸಮಸ್ಯೆ ಊರಿಗೂ ಸಮಸ್ಯೆ ಮತ್ತು ದೇಶಕ್ಕೂ ಸಮಸ್ಯೆ ಮಾಡುವಂಥ ಕೆಲಸಕ್ಕೆ ನಾವು ಶಾಸಕರಾಗಿ, ನಾವು ಶಾಸನ ಮಾಡುವವರಾಗಿ ನಾವು ಇದಕ್ಕೆ ಬೇಕಾದಂಥ ಸೌಲಭ್ಯವನ್ನು ಒದಗಿಸಿಕೊಡುವಂಥ ಸ್ಥಾನದಲ್ಲಿ ನಿಂತುಕೊಂಡು ಈ ರೀತಿಯ ಕೆಲಸವನ್ನು ಮಾಡಬಾರದು ನಾವು. ಇದನ್ನು ಸರಿಪಡಿಸುವಂಥದ್ದನ್ನು ನಾವು ಮಾಡುವಂಥದ್ದರ ಬಗ್ಗೆ ಲಕ್ಷ್ಯವನ್ನು ವಹಿಸಬೇಕು ಎಂದು ಹೇಳುವುದಕ್ಕೆ ನಾನು ಇಚ್ಛಿಪಡುತ್ತೇನೆ. ಇವೊತ್ತು ಇಂಜಿನಿಯರಿಂಗ್ ಶಿಕ್ಷಣ, ವೈದ್ಯಕೀಯ ಶಿಕ್ಷಣ, ಬಹುಶಃ ವೈದ್ಯಕೀಯ ಶಿಕ್ಷಣದ ಬಗ್ಗೆ ಬೇರೆ ಡಿಮ್ಯಾಂಡ್ ಇದೆ. ಅದಕ್ಕೇ ನಾನು ಇಲ್ಲಿ ವೈದ್ಯಕೀಯ ಶಿಕ್ಷಣದ ಬಗ್ಗೆ ವಿಶೇಷವಾಗಿ ಈಗ ಹೇಳುವುದಕ್ಕೆ ಹೋಗುವುದಿಲ್ಲ, ಈ ಇಂಜಿನಿಯರಿಂಗ್ ಶಿಕ್ಷಣ, ವೈದ್ಯಕೀಯ ಶಿಕ್ಷಣದ ಬಗ್ಗೆ ಈ ಕಾಲೇಜ್‌ಗಳ ಬಗ್ಗೆ ನಮಗೊಂದು ಸ್ಪಷ್ಟವಾದ ಒಂದು ನೀತಿ ಇಲ್ಲ. ಸುಪ್ರೀಂ ಕೋರ್ಟ್ ಹಾಗೆ

ಹೇಳುತ್ತದೆ, ಹೀಗೆ ಹೇಳುತ್ತದೆ ಬಹುಶಃ ಬೇಸರದಿಂದ ಹೇಳಬೇಕಾಗುತ್ತದೆ, ಇವೊತ್ತು ಹಿರಿಯ ಸದಸ್ಯರಾದ ಸನ್ಮಾನ್ಯ ನಂಜೇಗೌಡರು ಒಂದು ರೆಫರೆನ್ಸ್‌ನ್ನು ಮಾಡಿದರು, ಅದು ಮಂತ್ರಿಗಳ ಗಮನಕ್ಕೆ ಬಂದಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಇವೊತ್ತು ಕಾರ್ಯಾಂಗ, ನ್ಯಾಯಾಂಗ, ಶಾಸಕಾಂಗದ ಅರ್ಥದಲ್ಲಿ ಸರಿಯಾದ ರೀತಿಯಲ್ಲಿ ವಿಂಗಡಣೆಯಾಗಬೇಕು. ಇವೊತ್ತು ನ್ಯಾಯಾಂಗ, a judge should interpret law. If there is no law, he should say that there is no law ಸ್ವಾಮಿ ನಾವು ಸುಪ್ರೀಂ ಕೋರ್ಟ್ ಹತ್ತಿರ ಹೋಗಿ ಎಲ್ಲೆಲ್ಲಿ ಎಷ್ಟು ಸಾವಿರ ಕಲೆಕ್ಟ್ ಮಾಡಬೇಕು, ದಾವಣಗೆರೆಯಲ್ಲಿ ಎಷ್ಟು ಕಲೆಕ್ಟ್ ಮಾಡಬೇಕು, ಮಣಿಪಾಲ್‌ದಲ್ಲಿ ಎಷ್ಟು ಕಲೆಕ್ಟ್ ಮಾಡಬೇಕು, ಬೆಂಗಳೂರಿನಲ್ಲಿ ಎಷ್ಟು ಕಲೆಕ್ಟ್ ಮಾಡಬೇಕು, ತುಮಕೂರಿನಲ್ಲಿ ಎಷ್ಟು ಕಲೆಕ್ಟ್ ಮಾಡಬೇಕು, ಆ ಕಾಲೇಜ್‌ಗೆ ಎಷ್ಟು ಕೊಡಬೇಕು, ನಾವು ಸರಿಯಾಗಿ we have not represented our cases properly. ಕರ್ನಾಟಕ ಸರ್ಕಾರದಿಂದ ಪ್ರೊಫೆಶನಲ್ ಕಾಲೇಜ್‌ಗಳ ಬಗ್ಗೆ ನಾವು ವರ್ಷಕ್ಕೊಂದು ಸಲ ರಿಸರ್ವೇಶನ್ ಪಾಲಿಸಿಯನ್ನು ಬದಲಾವಣೆಯನ್ನು ಮಾಡುತ್ತಿದ್ದೇವೆ. ರಿಸರ್ವೇಶನ್ ಪಾಲಿಸಿ ಬಗ್ಗೆ ನನ್ನದೇನೂ ಟೀಕೆಯಿಲ್ಲ. ಆದರೆ ಇವೊತ್ತು ಇವರಿಗೆ ಇಷ್ಟು ರಿಸರ್ವೇಶನ್, ನಾಳೆ ಅವರಿಗೆ ಇಷ್ಟು ರಿಸರ್ವೇಶನ್, ಖಾಸಗಿ ಇನ್ಸ್‌ಟ್ಯೂಶನ್‌ಗೆ ಇಷ್ಟು, ಬೇರೆ ರಾಜ್ಯದವರಿಗೆ ಇಷ್ಟು, ಎನ್‌ಆರ್‌ಐ ಸೀಟು ಇಷ್ಟು, ಈ ರೀತಿಯ ರಿಸರ್ವೇಶನ್ ಮಾಡಿ ಇದು ಇವೊತ್ತು ಎಲ್ಲಿಗೆ ಹೋಗಿ ಮುಟ್ಟಿದೆಯೆಂದು ನೋಡಿದರೆ. ನಾನು ಒಬ್ಬ ಸ್ನೇಹಿತರ ಹತ್ತಿರ ಕೇಳಿದೆ, ಸ್ವಾಮಿ, ಎನ್‌ಆರ್‌ಐ ಸೀಟು ಏನು ಬೆಲೆ ಇದೆ ಎಂದಾಗ nothing less than 75,000 Dollars for a medical seat 20ಲಕ್ಷಕ್ಕಿಂತ ಜಾಸ್ತಿ ಕೊಟ್ಟಿದ್ದಾರೆ. ಅದರ ಬಗ್ಗೆ ಕನ್‌ವರ್‌ಶನ್ ಟೇಬಲ್ ನನ್ನ ತಲೆಯಲ್ಲಿ ಇಲ್ಲ. 20 ಲಕ್ಷ ರೂಪಾಯಿಗಳನ್ನು ಕೊಟ್ಟು ಎಂಬಿಬಿಎಸ್ ಮಾಡುವುದಕ್ಕೆ ಕರ್ನಾಟಕಕ್ಕೆ ಬರುತ್ತಾರೆ ಎಂದಾಯಿತು. ಇವೊತ್ತು ಈ ರೀತಿ ಇರುವಂಥ ಒಂದು ನೀತಿಯಿಂದ ಅಸಮತೋಲನ ಏನಿದೆ ಇದರಿಂದ ಸಾಮಾನ್ಯ ಶುಲ್ಕವನ್ನು ಕೊಟ್ಟು ಕಾಲೇಜ್‌ಗೆ ಸೇರುವ ಪರಿಸ್ಥಿತಿ ಇಲ್ಲ. ಒಬ್ಬ ಗ್ರಾಮಾಂತರದಿಂದ ಬಂದಂಥ ವಿದ್ಯಾರ್ಥಿ ಮೆಡಿಕಲ್ ಕಾಲೇಜ್‌ಗೆ ಸೇರಲಿಕ್ಕೆ ಆಗುತ್ತಿಲ್ಲ. ಬಹಳ ಹೇಳುತ್ತೇವೆ ನಮ್ಮ ಸರ್ಕಾರ ಬಂದಮೇಲೆ, ನಮ್ಮ ಸರ್ಕಾರ ಅಂದರೆ ನನ್ನನ್ನೂ ಸೇರಿಸಿಕೊಂಡು ಹೇಳುತ್ತಿದ್ದೇನೆ, ಏಕೆಂದರೆ ನಾನೂ ಕೂಡ ಇಲ್ಲಿ ಒಬ್ಬ ಶಾಸಕ. ನಮ್ಮ ಊರಿಗೆ ಹೋದರೆ ಹೇಳುತ್ತಾರೆ, ನೀವು ನಮ್ಮ ಕ್ಷೇತ್ರದ ಎಂ.ಎಲ್.ಎ.ಎಂದು ಹೇಳುತ್ತಾರೆಯೇ ವಿನಃ ಜನತಾ ದಳದ ಸರ್ಕಾರ ಎಂದು ಹೇಳುವುದಿಲ್ಲ. ಇವೊತ್ತು ಈ ಸರ್ಕಾರ ಬಂದಮೇಲೆ ಒಬ್ಬ ಹಳ್ಳಿಯ ಬಡವನಿಗೆ ಮೆಡಿಕಲ್ ಕಾಲೇಜಿನ ಸೀಟು, ಇಂಜಿನಿಯರಿಂಗ್ ಕಾಲೇಜಿನ ಸೀಟು ಕನಸಿನ ಗಂಟಾಗಿದೆ. ಸರ್ಕಾರದಿಂದ ಇರುವಂಥ ಫ್ರೀ ಸೀಟಿಗೂ ಎಷ್ಟು ಹಣವನ್ನು ಕೊಡಬೇಕು, ಆತ ಮುಂದೆ ಏನು ಮಾಡಬಲ್ಲ, ಇದರ ಬಗ್ಗೆ ನಮ್ಮ ಸ್ಪಷ್ಟ ನೀತಿ ಇರಬೇಕು. ಪ್ರತಿವರ್ಷ ಏಪ್ರಿಲ್, ಮೇ ತಿಂಗಳು ಬಂದಕೂಡಲೇ ನಾವು ಹೇಳುತ್ತೇವೆ, ಈ ವರ್ಷ ನಾವು ತಡ ಮಾಡುವುದಿಲ್ಲ ನಾವು ಈಗಲೇ ಹೇಳುತ್ತೇವೆ. We have to await for Supreme Court Orders, ಇನ್ನು ಒಂದು ತಿಂಗಳೊಳಗೆ ಅಡ್ಮಿಷನ್ಸ್ ಮುಗಿಯಬಹುದು. ನಮ್ಮ ಸರ್ಕಾರ ಪ್ರಯತ್ನ ಮಾಡುತ್ತಿದೆ ಎಂದು ಕೇಳಿದ್ದೇನೆ. ಅದು ಏನೇ ಇರಲಿ ಈಗಲೇ ಪ್ರಾರಂಭ ಮಾಡಿ. start your exercise right now, call your officers, sit along with them, talk to them, call the law

ecretary, call the Department people, call higest luminaries in aw. ಕಾಯಿದೆಯಲ್ಲಿ ಏನು ತೊಡಕಿದೆ ಎಂಬುದನ್ನು ಈಗಲೇ ಕೇಳಿ. ಈಗಲೇ ನಿರ್ಧಾರ ಮಾಡಿ. ನವೆಂಬರ್, ಡಿಸೆಂಬರ್‌ನಲ್ಲಿ ಬರುವ ವರ್ಷ ಈ ಪ್ರೊಫೆಷನಲ್ ಕಾಲೇಜುಗಳಿಗೆ ಯಾವರೀತಿಯ ನೀತಿಗಳನ್ನು ಮಾಡಿದ್ದೇವೆಂಬುದನ್ನು ಪ್ರಕಟಪಡಿಸಿ. ಮುಂದಿನ ಏಪ್ರಿಲ್‌ವರೆಗೆ ಏತಕ್ಕೆ ಕಾಯುತ್ತೀರಿ? ನಿಮ್ಮ ಸರ್ಕಾರ 5 ವರ್ಷಕಾಲ ಪೂರ್ತಿ ಇರಬೇಕೆಂದು ನನ್ನ ಹಂಬಲವಾಗಿದೆ. ಅದೇರೀತಿ 5 ವರ್ಷಕಾಲ ಶಾಸಕನಾಗಿ ಮುಂದುವರೆಯಬೇಕೆಂಬ ಆಸೆ ನನಗಿದೆ. ಆದರೆ ಇದೇರೀತಿಯಲ್ಲಿ ಹೋದರೆ ಸ್ವಲ್ಪ ಮಟ್ಟಿನ ಅನುಮಾನ ಕಾಣುತ್ತದೆ. ಅದಕ್ಕೆ ನಾನು ಆಗಲೇ ಹೇಳಿದೆ. Goods are not delivered to the people ಎಂದು. ಯಾವುದೇ ರೀತಿಯ ಕೆಲಸವೂ ಆಗುತ್ತಿಲ್ಲ. ಜೂನ್ 15ನೇ ತಾರೀಖಿನೊಳಗೆ ಪ್ರೊಫೆಷನಲ್ ಕಾಲೇಜುಗಳು ತೆರೆಯಲೇಬೇಕು. ಇವತ್ತು ಅಲ್ಲಿ ನಾವು ಯಾರನ್ನು ತಯಾರು ಮಾಡುತ್ತಿದ್ದೇವೆ. ಇಂಜಿನಿಯರ್‌ಗಳನ್ನು, ವೈದ್ಯರುಗಳನ್ನು ತಯಾರು ಮಾಡುತ್ತಿದ್ದೇವೆ. ಯಾರು ನಮ್ಮ ಜೀವವನ್ನು ರಕ್ಷಣೆ ಮಾಡತಕ್ಕ ಜನರಿದ್ದಾರೆ ಅವರನ್ನು ತಯಾರು ಮಾಡುತ್ತಿದ್ದೇವೆ ನಮ್ಮ ಬ್ರಿಡ್ಜ್‌ಗಳನ್ನು ಕಟ್ಟುವವರನ್ನು, ರೈಲುಗಳನ್ನು ಓಡಿಸುವಂಥ ತಾಕತ್ತು ಇರುವವರನ್ನು ತಯಾರು ಮಾಡುತ್ತಿದ್ದೇವೆ. ನನ್ನ ಕ್ಷೇತ್ರದಲ್ಲಿರುವ ಶರಾವತಿ ಬ್ರಿಡ್ಜ್ ಕಟ್ಟಿ ಇನ್ನೂ 20 ವರ್ಷ ಕೂಡ ಆಗಿಲ್ಲ, ಆಗಲೇ ಬೀಳುತ್ತಿದೆ. ಆ ವಿಚಾರವನ್ನು ಬಿಡಿ. ಇವತ್ತು ಒಳ್ಳೆಯ ಮೇಧಾವಿ ಡಾಕ್ಟರಗಳನ್ನು, ಇಂಜಿನಿಯರ್‌ಗಳನ್ನು ತಯಾರು ಮಾಡಬೇಕಾದ ಪ್ರೊಫೆಷನಲ್ ಕಾಲೇಜುಗಳಲ್ಲಿ ಅಕ್ಟೋಬರ್, ನವೆಂಬರ್ ತಿಂಗಳಾದರೂ ಇನ್ನೂ ಅಡ್ಮಿಷನ್ಸ್ ಗೊತ್ತಿಲ್ಲ. You have deemed to have been admitted. You have been deemed to have been put in attendance. ನನಗೆ ಒಂದು ವಿಚಾರ ನೆನಪಾಗುತ್ತದೆ. ನಾನು ವೈದ್ಯಕೀಯ ಪರೀಕ್ಷೆಯನ್ನು ಕಟ್ಟುವುದಕ್ಕೆ ನನ್ನ ಮುಂದೆ ಹೋದಂಥ ವಿದ್ಯಾರ್ಥಿ, ಅಲ್ಲಿದ್ದಂಥ ಡಾಕ್ಟರಗಳನ್ನು ಕೇಳಿ. what is the dose of dicaxine, ಎಂದು ಹೇಳಿ. 2.5 ಮಿಲಿಗ್ರಾಂಸ್ ಎಂದು ಹೇಳಿದರು. I am sorry your patient is dead, ಪ್ರೊಫೆಸರ್ ಹೇಳಿದರು. ಮಾನ್ಯ ಮಂತ್ರಿಗಳಿಗೆ ಹೇಳುತ್ತೇನೆ, ನಿಮ್ಮನ್ನೂ ಚಿಕಿತ್ಸೆ ಮಾಡುವಂಥ ಡಾಕ್ಟರ್‌ಗಳು, ನಿಮ್ಮ ಮನೆಯನ್ನು ಕಟ್ಟುವಂಥ ಇಂಜಿನಿಯರ್‌ಗಳ ಬಗ್ಗೆ ಹೇಳುತ್ತೇನೆ. ನಿಮ್ಮ ರಸ್ತೆ, ಸೇತುವೆಗಳನ್ನು ಮಾಡುವವರ ಬಗ್ಗೆ ಹೇಳುತ್ತೇನೆ. ಇವರಿಗೆ ಸರಿಯಾದಂಥ ತರಬೇತಿಯ ಅವಶ್ಯಕತೆ ಇದೆ. deemed to have been attended, ಆಗುವುದಿಲ್ಲ. ಅನಾಟಮಿ, ಫಿಸಿಯಾಲಜಿಯನ್ನು ಕಲಿಯಲೇಬೇಕು. ಇಂಜಿನಿಯರಿಂಗ್‌ನಲ್ಲಿ ಬೇಸಿಕನ್ನು ಕಲಿಯಲೇಬೇಕು. ಅದನ್ನು ಬಿಟ್ಟು ಅವನನ್ನು ಕ್ಲಿನಿಕಲ್‌ಗೆ ದಬ್ಬಿಬಿಟ್ಟರೆ ಅನಾಟಮಿ, ಫಿಸಿಯಾಲಜಿ ಗೊತ್ತಿಲ್ಲ. ಬೇಸಿಕ್ ಇನ್ ಇಂಜಿನಿಯರಿಂಗನ ಸ್ಟ್ರಕ್ಚರ್ ಗೊತ್ತಿಲ್ಲ, ಮೆಟಲರ್ಜಿ ಗೊತ್ತಿಲ್ಲ. ಅಂದಮೇಲೆ ಅವನೇನು ಇಂಜಿನಿಯರ್ ಆಗುತ್ತಾನೆ. I don't want to dwell with much time on this subject. I just want to impress upon you - you start with your Departmental officers, your people right earnestly now. ಜನವರಿಯೊಳಗೆ ತಾವು ಹೇಳಿ. ನಿಮ್ಮ ನೀತಿ ಏನಿದೆ ಎಂಬುದನ್ನು ತಿಳಿಸಿ. ಅನಂತರ ಯಾರಾದರೂ ಸುಪ್ರೀಂಕೋರ್ಟಿಗೆ ಹೋಗಲಿ. ಅಷ್ಟರೊಳಗೆ ಸುಪ್ರೀಂ ಕೋರ್ಟ್‌ನಿಂದ ಬರಬಹುದು. ಸುಪ್ರೀಂ ಕೋರ್ಟ್‌ನಲ್ಲಿ ನಮ್ಮ ಕೇಸಿನ ಬಗ್ಗೆ ಸರಿಯಾದ ರೀತಿಯಲ್ಲಿ ರೆಪ್ರೆಸೆಂಟ್

ಮಾಡತಕ್ಕ ಕೆಲಸವನ್ನು ಮಾಡಿ. ನಮ್ಮ ವೈದ್ಯಕೀಯ ಶಿಕ್ಷಣದ ಡೈರೆಕ್ಟರ್ ಹತ್ತಿರ ನನ್ನ ಒಂದು ಅನುಮಾನವನ್ನು ಕೇಳಿದೆ. ಇವತ್ತು ನಮ್ಮಲ್ಲಿ ಇಷ್ಟೊಂದು ಡೆಂಟಲ್‌ಕಾಲೇಜುಗಳಿವೆ, ಆದರೆ ನಮ್ಮ ಸರ್ಕಾರದ ವತಿಯಿಂದ ನಡೆಯುತ್ತಿರುವ ಒಂದೇ ಒಂದು ಡೆಂಟಲ್ ಕಾಲೇಜು ಈ ಬೆಂಗಳೂರಿನಲ್ಲಿದೆ, ಸಾವಿರಾರು ಜನರು ಈ ಡೆಂಟಲ್ ಕಾಲೇಜನಲ್ಲಿ ಓದಲು ಇಷ್ಟಪಡುತ್ತಿದ್ದಾರೆ, ಇದಕ್ಕೆ ಸರ್ಕಾರ ಏತಕ್ಕೆ ಮುಂದೆ ಬರುತ್ತಿಲ್ಲ? ಬಹುಶಃ ಖಾಸಗಿ ಕಾಲೇಜಿನವರೊಂದಿಗೆ ಈ ಸರ್ಕಾರ ಏನಾದರೂ ಅಗ್ರಿಮೆಂಟನ್ನು ಮಾಡಿಕೊಂಡಿದೆಯೆ? ಹೇಗೆ? ಇದು ನನಗೂ ಗೊತ್ತಿಲ್ಲ, ಆ ಮೆಡಿಕಲ್ ಎಜುಕೇಷನ್ ಡೈರೆಕ್ಟರ್.ರವರಿಗೂ ಕೂಡ ಗೊತ್ತಿಲ್ಲ. ಅವರು ಸರ್ಕಾರಿ ಅಧಿಕಾರಿಗಳು. ಅವರು ನಮಗೆ ಬೇಕಾದಂಥ ಶಿಕ್ಷಕರು ಸಿಕ್ಕುತ್ತಿಲ್ಲ ಎಂದು ಹೇಳುತ್ತಾರೆ. ಖಾಸಗಿ ಕಾಲೇಜಿನವರು ಹೆಚ್ಚು ಹೆಚ್ಚು ಸಂಬಳ ಕೊಟ್ಟು ಅವರನ್ನು ತೆಗೆದುಕೊಂಡು ಹೋಗುತ್ತಿದ್ದಾರೆ. ಆದರೆ ಎಂ.ಡಿ.ಎಸ್. ಆದವರು ನಮ್ಮಲ್ಲಿ ಸಾಕಷ್ಟು ಜನರಿಲ್ಲವೆ? ಇದ್ದಾರೆ. ಆದರೆ ಅವರನ್ನು ಕರೆಯಿಸಿಕೊಂಡು ಅವರಿಗೆ ಉದ್ಯೋಗ ಕೊಡುವಂಥ ಸೌಭಾಗ್ಯ, ಅದಕ್ಕೆ ಬೇಕಾದ ಬಜೆಟರಿ ಪ್ರೊವಿಷನ್, ಅದಕ್ಕೆ ಬೇಕಾದ ಹಣವನ್ನು ಒದಗಿಸುವ ತಾಕತ್ತು ನಮ್ಮಲ್ಲಿ ಇಲ್ಲ. ಒಂದೇ ಒಂದು ಡೆಂಟಲ್ ಕಾಲೇಜು ನಮ್ಮಲ್ಲಿದೆ. ಅದರಲ್ಲಿ ಬೆರಳೆಣಿಕೆಯಷ್ಟು ಸೀಟುಗಳಿವೆ. ಪ್ರೈವೇಟ್ ಕಾಲೇಜುಗಳಲ್ಲಿರುವಂಥ ಪೋಸ್ಟ್ ಗ್ರ್ಯಾಜುಯೇಟ್ ಸೀಟುಗಳ ಬಗ್ಗೆ ಸುಪ್ರೀಂಕೋರ್ಟ್ ಕೊಟ್ಟಂಥ ಆರ್ಡರ್‌ಗಳನ್ನು ಪಾಲಿಸುವಂಥ ಕೆಲಸವನ್ನೂ ನಾವು ಮಾಡಿಲ್ಲ. ಸುಪ್ರೀಂ ಕೋರ್ಟ್‌ನ ಬಗ್ಗೆ ಹೆಚ್ಚು ಮಾತನಾಡುವುದು ಸೂಕ್ತ ಎಂದು ಕಾಣಿಸುವುದಿಲ್ಲ. ತಮಗೆ ಒಂದು ಉದಾಹರಣೆಯನ್ನು ಮಾತ್ರ ಹೇಳುತ್ತೇನೆ, ಎಂಡಿ ಸೀಟುಗಳಲ್ಲಿ (ನಾನ್ ಕ್ಲಿನಕಲ್) ಪೆಥಾಲಜಿ, ಫಿಸಿಯಾಲಜಿ ಇಂಥಾದ್ದರ ಬಗ್ಗೆ ಯಾವುದಕ್ಕೆ ಬೇಡಿಕೆ ಇಲ್ಲ ಅಂಥಾದ್ದಕ್ಕೆ ಪರ್ಸೆಂಟೇಜ್ ಮಾಡಿ ತೋರಿಸುತ್ತಿದ್ದಾರೆ, ಮೆಡಿಸಿನ್, ಆರ್ತೋಪೆಡಿಕ್, ಆಫ್ತಾಲಜಿ, ಗೈನಕಾಲಜಿ, ಇವುಗಳಿಗೆ ಖಾಸಗಿಯವರು ವಿದ್ಯಾರ್ಥಿಗಳನ್ನು ತುಂಬಿಕೊಳ್ಳುತ್ತಿದ್ದಾರೆ. ಬೇಡದೇ ಇರತಕ್ಕ ಪೆಥಾಲಜಿ, ಕ್ಲಿನಕಲ್ ಪೆಥಾಲಜಿ, ಫಿಸಿಯಾಲಜಿ, ಫಾರ್ಮಾಸ್ಯುಟಿಕಲ್ಸ್ ಸೀಟುಗಳನ್ನು ಸರ್ಕಾರದವರು ತೆಗೆದುಕೊಂಡು ಹೋಗಿ ನಿಮ್ಮ ಹುಡುಗರಿಗೆ ಕೊಟ್ಟುಬಿಡಿ ಎಂದು ಹೇಳುತ್ತಾರೆ. ನಮ್ಮ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅಂಥ ಸೀಟುಗಳನ್ನು ಕೊಡುತ್ತಾರೆ. ಈ ವ್ಯವಸ್ಥೆ ಸರಿಯಲ್ಲ.

ಇನ್ನು ಉನ್ನತ ಶಿಕ್ಷಣದಲ್ಲಿ ವಿವಿಧ ರೀತಿಯ ಉಪನ್ಯಾಸಕರಿದ್ದಾರೆ. ಅರೆಕಾಲಿಕ ಉಪನ್ಯಾಸಕರು, ಕಾಂಟ್ರ್ಯಾಕ್ಟ್ ಆಧಾರದ ಉಪನ್ಯಾಸಕರು, ಸ್ವ್ಯಾಪ್‌ಗ್ಯಾಪ್ ಅರೇಂಜ್‌ಮೆಂಟ್ ಇಂಥಾದ್ದೆಲ್ಲಾ ಇದೆ. ಅವರಿಗೆ 500ರೂಪಾಯಿ ಸಂಬಳ, ಈಚೆ ಕುರ್ಚಿಯಲ್ಲಿ ಕುಳಿತವರಿಗೆ 8 ಸಾವಿರ ರೂಪಾಯಿ ಸಂಬಳ. ಅಂದರೆ ನಾವಿಬ್ಬರೂ ಒಂದೇರೀತಿಯ ಕೆಲಸವನ್ನು ಮಾಡಿದರೂ ಅವರಿಗೆ 8 ಸಾವಿರ, ನನಗೆ 500ರೂಪಾಯಿ ಸಂಬಳ ಎಂದು ಮಾತನಾಡಿಕೊಳ್ಳುತ್ತಾರೆ. ಅವರೂ ಇವರೂ ಸೇರಿ 1100 ಕ್ಕೆ ಏರಿಸಿದ್ದಾರೆ. ಡಾ॥ ಕರ್ಕಿಯವರು ಕಾಲೇಜುಗಳನ್ನು ನಡೆಸುತ್ತಿದ್ದಾರೆ. ಅವರಿಗೆ ಒಳ್ಳೆಯ ಅನುಭವ ಇದೆ. ಇದನ್ನೆಲ್ಲಾ ತೆಗೆದುಹಾಕಿ make budgetary provision to employ. ಸರ್ಕಾರವೇ ಕೊಟ್ಟಿರತಕ್ಕ ಅಂಕಿಸಂಖ್ಯೆಗಳನ್ನು ನಾನು ಹೇಳುತ್ತೇನೆ. ಕಾಲೇಜುಗಳಲ್ಲಿ ಅವಶ್ಯಕತೆ ಇರತಕ್ಕ ಸಿಬ್ಬಂದಿ 6274ಜನ. ಈಗಿರತಕ್ಕದ್ದು *4148.* ಕೊರತೆ 2126 ಮಂದಿ. ಇದೇನು ಸ್ವಾಮಿ, ಇದೇನು ಕಟ್ಲರಿ ಶಾಪೇ? ಇದು ಗೋಡೌನೇ? ಸಿಮೆಂಟ್ ಚೀಲವೇ? ಈ ರೀತಿ ಇರುವಂಥ ಕಾಲೇಜುಗಳಲ್ಲಿ ಆ ಪೀರಿಯಡ್‌ನಲ್ಲಿ ಮಕ್ಕಳಿಗೆ

ಪಾಠದ ವ್ಯವಸ್ಥೆ ಏನು? ಏನು ವ್ಯವಸ್ಥೆ ಮಾಡಿದ್ದೀರಿ. ನಾವು ಶಿಕ್ಷಣದ ಬಗ್ಗೆ ಇಲ್ಲಿ ಬಹಳ ಮಾತನಾಡುತ್ತೇವೆ. ಆದರೆ ನಮ್ಮ ಮಕ್ಕಳಿಗೆ ಯೋಗ್ಯ ಶಿಕ್ಷಣವನ್ನು ಒದಗಿಸುವ ಕೆಲಸವನ್ನು ನಾವು ಮಾಡುತ್ತಿಲ್ಲ. ಇವತ್ತು ನಮ್ಮ ಶಿಕ್ಷಣದ ಬಗ್ಗೆ ವಿಶೇಷ ಗಮನವನ್ನು ಹರಿಸಬೇಕು. ಇವತ್ತು ಶಿಕ್ಷಣಕ್ಕಾಗಿ ಒದಗಿಸಿರತಕ್ಕ ಹಣ ಏನಿದೆ ಇದು ತೀರಾ ಕಡಿಮೆಯಾಗಿದೆ. ಇದನ್ನು ಕನಿಷ್ಠ 22ಕ್ಕೆ ಆದರೂ ಏರಿಸಬೇಕು. ಈಗಿರತಕ್ಕ 18.52 ಏನೇನೂ ಸಾಲದು. ಈ ಹಣದಲ್ಲಿ ಏನನ್ನೂ ಮಾಡುವುದಕ್ಕೆ ಸಾಧ್ಯವಿಲ್ಲ. ಪ್ರಾಥಮಿಕ ಅವಶ್ಯಕತೆಗಳನ್ನು ಪೂರೈಸುವುದಕ್ಕೆ ನಿಮಗೆ ಸಾಧ್ಯವಿಲ್ಲ. ಇನ್ನೂ ಅನೇಕ ವಿಚಾರಗಳ ಬಗ್ಗೆ ಅನೇಕ ಮಾನ್ಯ ಸದಸ್ಯರು ಇನ್ನೂ ಪ್ರಸ್ತಾಪ ಮಾಡಬಹುದು.

ಇನ್ನು ಕೃಷಿಯ ಬಗ್ಗೆ ನಾನು ಏನೂ ಮಾತನಾಡದೆ ಕೇವಲ ಒಂದೇ ಒಂದು ಉದಾಹರಣೆಯನ್ನು ಮಾತ್ರ ನೀಡುತ್ತೇನೆ. ಕೃಷಿಕರ ಉದ್ಧಾರ, ರೈತರ ಉದ್ಧಾರ, ಸಾಮಾಜಿಕ ನ್ಯಾಯ, ಆರ್ಥಿಕ ಸ್ವಾತಂತ್ರ್ಯ, ಅಧಿಕಾರ ವಿಕೇಂದ್ರೀಕರಣ ಎಂದು ಹೇಳುತ್ತೇವೆ. ಆದರೆ ಅಗ್ರಿಕಲ್ಚರ್‌ಗೆ ನಮ್ಮ ಬಜೆಟ್‌ನಲ್ಲಿ ಮಾನ್ಯ ಆರ್ಥಿಕಮಂತ್ರಿಗಳು ಏನು ಹೇಳಿದ್ದಾರೆಂದರೆ ಕೃಷಿ ಮತ್ತು ಸಂಬಂಧಪಟ್ಟ ಸೇವೆಗಳಿಗೆ 243 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. 6.47 ಪರ್ಸೆಂಟ್ ಹಣವನ್ನು ಒದಗಿಸಲಾಗಿದೆ, 10,800 ಕೋಟಿ ರೂಪಾಯಿಗಳಲ್ಲಿ ನಾವು ಬಡವರ ಉದ್ಧಾರ, ಹಳ್ಳಿಗಳ ಉದ್ಧಾರವನ್ನು ಮಾಡುವುದಕ್ಕೆ ಹೊರಟಿದ್ದೇವೆ, ಆ ಕೃಷಿ ಇಲಾಖೆಗೆ 243.13 ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ ಎನ್ನುವಂಥ ಕಟು ಸತ್ಯ ತಮ್ಮ ಮುಂದಿದೆ ಎಂದು ಹೇಳಬಯಸುತ್ತೇನೆ.

ಇನ್ನು ಮೀನುಗಾರಿಕೆ ಮತ್ತು ಟೂರಿಸಂ ಬಗ್ಗೆ ಸರ್ಕಾರ ದಿವ್ಯ ನಿರ್ಲಕ್ಷ್ಯ ತಾಳಿದೆ. ಅದರ ಅಂಕಿಸಂಖ್ಯೆಗಳನ್ನು ಕೇವಲ ಕೆಲವನ್ನು ಮಾತ್ರ ಹೇಳಿದ್ದೇನೆ. ಮೀನುಗಾರಿಕೆ, ಬಂದರು ಮತ್ತು ಟೂರಿಸಂಗೆ ಸಂಬಂಧಪಟ್ಟಂತೆ ಬಜೆಟನ್ನು ತಯಾರಿಸುವ ಸಂದರ್ಭದಲ್ಲಿ ಯಾವುದೇ ಗಮನವನ್ನೂ ಕೊಟ್ಟಿಲ್ಲ. ಇದು ಒಂದುರೀತಿಯ ನೊಣದ ಪ್ರತಿ ಇದ್ದಂತೆ. ಕಳೆದವರ್ಷ ಏನು ಕೊಟ್ಟಿದ್ದಾರೆ ಅದರಲ್ಲಿ ಒಂದು ಅಂಕಿ ತೆಗೆದು ಇನ್ನೊಂದು ಅಂಕಿ ಹಾಕಿದ್ದಾರೆ. ಇವತ್ತು ಒಳ್ಳೆಯ ಪ್ರತಿಭಾವಂತ ಮೀನುಗಾರಿಕೆ ಮತ್ತು ಬಂದರು ಖಾತೆಯ ಮಂತ್ರಿ ಇದ್ದಾರೆ. ಅವರು ಚಿಂತನೆ ಮಾಡುವುದಕ್ಕೆ ದಯವಿಟ್ಟು ಬಿಡಿ. ಕರಾವಳಿಯ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಯ ಜನತೆ ಸುಮಾರು 315 ಕಿ.ಮೀ. ಉದ್ದದ ಕರಾವಳಿಯಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಸಂಪಾದನೆ ಮಾಡಿ ಈ ರಾಜ್ಯಕ್ಕೆ , ರಾಷ್ಟ್ರಕ್ಕೆ ಕೊಡುವವರಿದ್ದೇವೆ. ಆದ್ದರಿಂದ ಅವರಿಗೆ ಅನುಕೂಲ ಮಾಡುವ ಹಾಗೆ ಇವರ ಖಾತೆಗೆ ಹೆಚ್ಚು ಹಣವನ್ನೊದಗಿಸುವ ಕೆಲಸಮಾಡಬೇಕು. ವಿಶೇಷವಾಗಿ ನಮ್ಮ ಉತ್ತರ ಕನ್ನಡ ಜಿಲ್ಲೆ ಏನಿದೆ ಇದು ಇಡೀ ಕರ್ನಾಟಕ ರಾಜ್ಯದಲ್ಲೇ ಅತ್ಯಂತ ಸುಂದರವಾದ ಪ್ರದೇಶ. ಆದರೆ ನಮ್ಮಲ್ಲಿ ಬಡತನದ ಬಗ್ಗೆ, ಇಂಡಸ್ಟ್ರಿ ಬಗ್ಗೆ, ಎಜುಕೇಷನ್ ಬಗ್ಗೆ, ಆಸ್ಪತ್ರೆಗಳ ಸೌಲಭ್ಯದ ಬಗ್ಗೆ, ದಯವಿಟ್ಟು ಕೇಳಬೇಡಿ. ನಾನು ಪದೇ ಪದೇ ಹೇಳುತ್ತಲೇ ಇದ್ದೇನೆ. there is not a single referal hospital in the whole of Karnataka. ಎಲ್ಲಾ ವ್ಯವಸ್ಥೆಯನ್ನೂ ಹೊಂದಿರತಕ್ಕ ಒಂದು ದೊಡ್ಡ ಆಸ್ಪತ್ರೆ ನಮ್ಮಲ್ಲಿ ಒಂದೂ ಕೂಡ ಇಲ್ಲ. ಆದರೆ ಭಗವಂತ ನಮಗೆ ಒಳ್ಳೆಯ ಸೃಷ್ಟಿ ಸೌಂದರ್ಯವನ್ನು ಕೊಟ್ಟಿದ್ದಾನೆ. ನಮ್ಮಲ್ಲಿರತಕ್ಕ ಕರಾವಳಿ, ನಮ್ಮಲ್ಲಿರತಕ್ಕ ಬೆಟ್ಟಗಳು, ನಮ್ಮಲ್ಲಿರತಕ್ಕ ನದಿಗಳು, ಜಲಪಾತಗಳು, ಸಮುದ್ರ, ಕಿನಾರೆಗಳನ್ನು ನೋಡುವುದಕ್ಕಾದರೂ ನಮ್ಮ ಕರ್ನಾಟಕದ ಜನತೆಗೆ, ಭಾರತದ ಜನತೆಗೆ, ವಿದೇಶಿ ಜನತೆಗೆ ಒದಗಿಸುವಂಥ ಒಂದು ಉತ್ತಮ ಕೆಲಸವನ್ನಾದರೂ ನೀವು ಮಾಡಿ. ಟೂರಿಸಂಗೆ ಅದರ

ಅಭಿವೃದ್ಧಿಗೆ ಅವಶ್ಯಕವಾಗಿ ಬೇಕಾದಂಥ ಹಣವನ್ನು ಹೆಚ್ಚು ಒದಗಿಸಿಕೊಡಿ. ನೀವು ಈ ದಿಸೆಯಲ್ಲಿ ಏನೇನು ಮಾಡಿದ್ದೀರೆಂದು ನಾನು ಒಂದು ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಏನೋ ಒಂದು ಕಾಟಾಚಾರದ ಉತ್ತರವನ್ನು ಮಾನ್ಯ ಮಂತ್ರಿಗಳು ಕೊಟ್ಟಿದ್ದನ್ನು ನೋಡಿ ನನಗೆ ಬಹಳ ಬೇಸರವಾಯಿತು. ಮಾನ್ಯ ಅಧ್ಯಕ್ಷರೇ, ನನಗೆ ಬೇಸರವಾಗುತ್ತದೆ, ಕಾಟಚಾರದ ಉತ್ತರ ಎನ್ನುವ ಶಬ್ದವನ್ನು ಉಪಯೋಗ ಮಾಡುವುದಕ್ಕೆ, ಅನೇಕ ಉತ್ತರಗಳು ನಮ್ಮ ಪ್ರಶ್ನೆಗೆ ಏನು ಬರುತ್ತಿದೆ, ಜವಾಬ್ದಾರಿಯಿಂದ ಬರುತ್ತಿಲ್ಲವೆಂದು ಬಹಳ ದುಃಖದಿಂದ ಹೇಳಬೇಕಾಗುತ್ತದೆ. ಸರಿಯಾಗಿ ಪರಿಸ್ಥಿತಿಯನ್ನು ಅಳೆಯುವಂಥದ್ದನ್ನು ಅಭ್ಯಾಸ ಮಾಡದೇ ಕೇವಲ ಇಲ್ಲಿಯೇ ಕುಳಿತುಕೊಂಡು ಒಂದು ಟೆಲಿಫೋನ್ ಮೆಸೇಜ್ ಮುಖಾಂತರ ಯಾವುದೋ ಅಧಿಕಾರಿ ಹೇಳಿದ್ದನ್ನು ಇಲ್ಲಿ ಕೊಡುವುದು. ಅಧಿಕಾರಿಗಳ ಬಗ್ಗೆ ಅಗೌರವದಿಂದ ಮಾತನಾಡುತ್ತಿಲ್ಲ. ವಸ್ತು ಸ್ಥಿತಿ ಏನು ಎಂದು ಗೊತ್ತಿಲ್ಲದೇ ಇರತಕ್ಕಂತಹ ಅನೇಕ ಉತ್ತರಗಳು ನಮಗೆ ಬಂದಿವೆ. ಆದಾಗ್ಯೂ ಉತ್ತರ ಕನ್ನಡ ಜಿಲ್ಲೆಯ ಟೂರಿಸಂ ಡೆವಲಪ್ ಮಾಡಿ. ಈಗ ಏನು ಬಜೆಟ್‌ನಲ್ಲಿ ಹಣವನ್ನು ಒದಗಿಸಿದ್ದೀರಿ, ಅದರಿಂದ ಒಂದು ಜಿಲ್ಲೆಯ ಟೂರಿಸಂನ್ನೂ ಸಹ ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಿಲ್ಲ. ಇದಕ್ಕೂ ಕೂಡ ಸಾಕಷ್ಟು ಹೆಚ್ಚು ಹಣವನ್ನು ಒದಗಿಸಿಕೊಡಬೇಕೆಂದು ಹೇಳುತ್ತಾ, ಒಟ್ಟಾರೆ ಇವತ್ತು ಈ ಬೇಡಿಕೆಯ ಮೇಲೆ ಇರುವಂತಹ ರಿಚ್ಯುವಲ್ ಎಂದು ಹೇಳಿ ಆಗದೇ ನಾವು ದಯವಿಟ್ಟು ಇನ್ನು ಮೇಲಾದರೂ ಈ ಬೇಡಿಕೆಯ ಮೇಲೆ ಪ್ರಾಮಾಣಿಕವಾದಂತಹ ಚರ್ಚೆಯನ್ನು ಮಾಡುವಂತಹ ಅಭ್ಯಾಸವನ್ನು ಈ ಶಾಸನ ಸಭೆಯಲ್ಲಿ ರೂಢಿಸೋಣ, ಜನ ಯಾವುದಕ್ಕೆ ನಮ್ಮನ್ನು ಕಳುಹಿಸಿಕೊಟ್ಟಿದ್ದಾರೆ ಅದನ್ನು ಕಾರ್ಯಗತ ಮಾಡುವಂತಹ ಯೋಜನೆಗಳನ್ನು ಮಾಡುವಾಗ with a visison, with a definite direction, ಒಂದು ದೃಷ್ಟಿಕೋನ, ಒಂದು ಗುರಿ ಇದನ್ನು ಆಲೋಚನೆಯನ್ನು ಇಟ್ಟುಕೊಂಡು ಅದರ ಬದಲಿಗೆ ಕಳೆದ ವರ್ಷ ಇದ್ದಂತಹ ಅಂಕಿ ಸಂಖ್ಯೆಗಳನ್ನು ಹೆಚ್ಚು ಕಡಿಮೆ ಮಾಡಿ ಹಾಕುವುದು, ಮತ್ತೊಂದು ಅಂಕಿಯನ್ನು ಹೆಚ್ಚು ಕಡಿಮೆ ಮಾಡುವುದು, ನಾವು ಏನು ಜನರಿಗೆ ಆಶ್ವಾಸನೆಯನ್ನು ಕೊಟ್ಟಿದ್ದೇವೆ ಅನ್ನುವುದನ್ನು ಮರೆತೆ ಬಿಡುವುದು, ನೂರು ಕೋಟಿ ಆರೋಗ್ಯ ನಿಧಿ ಎಂದು ಮಾಡಬೇಕು ಅನ್ನುವ ಆಶ್ವಾಸನೆಯನ್ನು ಕೊಟ್ಟರೆ ಇವತ್ತು ಅದರ ಮೇಲೆ ಬೇಡಿಕೆ ಇಲ್ಲ. ಇವತ್ತು ಏನು ಆಗಿಲ್ಲ. ಈ ರೀತಿಯಾದಂಥ ಯೋಜನೆಗಳನ್ನು ಬಿಟ್ಟು ವಸ್ತು ಸ್ಥಿತಿಯಾಗಿ, ಜನಸಾಮಾನ್ಯನಿಗೆ ಹಿತವಾಗುವಂತಹ ಬೇಡಿಕೆಗಳನ್ನು ತಾವು ತಯಾರು ಮಾಡಿ, ಅದನ್ನು ಈ ಶಾಸನ ಸಭೆಯಲ್ಲಿ ಮಂಡಿಸಿ ಜನ ಹಿತ ಕೆಲಸವನ್ನು ನಾವೆಲ್ಲ ಸೇರಿ ಮಾಡೋಣ ಅನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಸನ್ಮಾನ್ಯ ಅಧ್ಯಕ್ಷರೇ, ನನಗೆ ಮಾತನಾಡಲು ಕೊಟ್ಟಂತಹ ಕಾಲಾವಕಾಶಕ್ಕೆ ತಮಗೆ ವಂದಿಸಿ ಮಾನ್ಯ ಮಂತ್ರಿಗಳೆಲ್ಲ ಇದನ್ನು ಇಷ್ಟಕ್ಕೇ ಬಿಡದೇ ಈ ವರ್ಷ ಮಾಡಲಿಕ್ಕೆ ಆಗದೇ ಇದ್ದರೂ ಕೂಡ ಬರುವ ವರ್ಷದಲ್ಲಿಯಾದರೂ ಈ ಜನ ಹಿತ ಕೆಲಸ ಮಾಡುವುದರ ಬಗ್ಗೆ ಲಕ್ಷ್ಯ ವಹಿಸಲಿ ಅನ್ನುವಂತಹ ಆಸೆಯೊಂದಿಗೆ ನನ್ನ ಮಾತನ್ನು ಮುಗಿಸುತ್ತೇನೆ. ಧನ್ಯವಾದಗಳು.

+ ಶ್ರೀ ಎಂ.ವೀರಪ್ಪಮೊಯಿಲಿ (ಕಾರ್ಕಳ):- ಮಾನ್ಯ ಉಪಾಧ್ಯಕ್ಷರೇ, ಈ ದಿವಸ ಅನೇಕ ಬೇಡಿಕೆಗಳು ಚರ್ಚೆಗೆ ಇವೆ, ಆದರೆ ಪ್ರಾಮುಖ್ಯವಾದ ಇಲಾಖೆಯ ಕೆಲವು ಸಚಿವರು ಇಲ್ಲಿ ಹಾಜರಿಲ್ಲ, ವಿದ್ಯುತ್ಶಕ್ತಿಯ ಮಂತ್ರಿಯವರಾದ ಶ್ರೀ ಜೆ.ಹೆಚ್.ಪಟೇಲ್‌ರು ಇಲ್ಲ, ಮಾನ್ಯ ಶ್ರೀ ಬೈರೇಗೌಡರು ನಾನು ಹೇಳುತ್ತಿದ್ದಂತೆಯೇ ಅವರು ಬಂದರು. ಈಗ ಎಲ್ಲಾ ಇಲಾಖೆಗಳು ಕೂಡ

ಬಹಳ ಪ್ರಾಮುಖ್ಯವಾದಂತಹ ಇಲಾಖೆಗಳೆ, ಎಲ್ಲಾ ಇಲಾಖೆಗಳ ಬಗ್ಗೆ ಮಾತನಾಡುವ ಹಾಗಿಲ್ಲ, ಅಥವಾ ಕುರಿತಾದಂತಹ ಕೆಲವು ಇಲಾಖೆಗಳ ವಿಚಾರ ಮಾತನಾಡುವಾಗಲೂ ಕೂಡ ವಿವರವಾಗಿ ಮಾತನಾಡುವುದಕ್ಕೆ ಸಾಕಷ್ಟು ಸಮಯಾವಕಾಶವಿಲ್ಲ. ಏಕೆಂದರೆ ಅನೇಕ ಹೊಸದಾಗಿ ಬಂದಿರುವಂತಹ ಸದಸ್ಯರು ಬಹಳ ಚನ್ನಾಗಿ ಮಾತನಾಡುತ್ತಾರೆ. ಡಾ.ಚಿತ್ತರಂಜನ್‌ರವರು ಕೂಡ ಬಹಳ ಚೆನ್ನಾಗಿ ಮಾತನಾಡಿದರು. ಇನ್ನೂ ಅನೇಕ ಹೊಸದಾಗಿ ಬಂದಿರುವ ಶಾಸಕರು ಮಾತನಾಡುವುದಕ್ಕೆ ಇರುವ ಕಾರಣ ನಾನು ಕೆಲವೇ ವಿಚಾರಗಳನ್ನು ಕುರಿತಾಗಿ ಕೆಲವು ಇಲಾಖೆಗಳಿಗೆ ಸಂಬಂಧಪಟ್ಟಂತೆ ನಾನು ಹೇಳಲಿಕ್ಕೆ ಇಚ್ಛಿಪಡುತ್ತಿದ್ದೇನೆ. ಮೊದಲನೆಯದಾಗಿ ಶಿಕ್ಷಣ ಇಲಾಖೆ. ಈ ಇಲಾಖೆ ನನ್ನ ಬಹಳ ಆತ್ಮೀಯವಾದಂತಹ ಒಂದು ಇಲಾಖೆ. ಒಂದು ಸಂತೋಷ ಏನೆಂದರೆ, ಬಹಳ ಅನುಭವಿಗಳು ಹಿಂದೆ ಕೂಡ ಈ ಶಾಖೆಗಳಲ್ಲಿ ಕೆಲಸ ಮಾಡಿದಂತಹ ಸಚಿವರೇ ಇದಕ್ಕೆ ಸಚಿವರಾಗಿರತಕ್ಕಂಥದ್ದು ಮನಸ್ಸಿಗೆ ಸಮಾಧಾನವನ್ನು ತರತಕ್ಕಂತಹ ವಿಚಾರವಾಗಿದೆ. ಹಿರಿಯರಾದಂತಹ ಶ್ರೀ ಮಂಜುನಾಥ್‌ರವರು ಅಥವಾ ಶ್ರೀ ಗೋವಿಂದೇಗೌಡರು ಇವರಿಬ್ಬರು ಹಿಂದೆ ಕೂಡ ನನಗೆ ನೆನಪಿರುವ ಪ್ರಕಾರ ಈ ಇಲಾಖೆಯನ್ನು ನಿರ್ವಹಿಸಿದ್ದಾರೆ. ಮಾನವ ಸಂಪನ್ಮೂಲ ಬಹಳ ಪ್ರಮುಖವಾಗಿ ದೇಶದಲ್ಲಿ ಬೆಳೆಯದಿದ್ದರೆ ಉಳಿದಿದ್ದೆಲ್ಲ ಅಮುಖ್ಯವಾಗಿರುತ್ತದೆ. ಆದ್ದರಿಂದ ಮಾನವ ಸಂಪನ್ಮೂಲವನ್ನು ಬೆಳೆಸತಕ್ಕಂತಹ ಒಂದು ದೊಡ್ಡ ಜವಾಬ್ದಾರಿ ಈ ಶಿಕ್ಷಣ ಇಲಾಖೆಯಲ್ಲಿದ್ದಂತಹ ಎಲ್ಲರಿಗೂ ಕೂಡ ಇದೆ. ಈಗಾಗಲೇ ಕರ್ನಾಟಕ ರಾಜ್ಯ, ಎಷ್ಟೇ ಲೋಪದೋಷಗಳು ಇರಬಹುದು, ಏಕೆಂದರೆ ಇದು ಒಂದು ಅಗಾಧವಾದಂತಹ, ವಿಸ್ತಾರವಾದಂತಹ ಕ್ಷೇತ್ರವಾದ್ದರಿಂದ ಮತ್ತು ಈಗ ಇದೊಂದು ವರ್ಗ ಶಿಕ್ಷಣವಲ್ಲ, ಇನ್ನೊಂದು ಈಗ ಸಮೂಹ ವಿದ್ಯೆಯಾದುದರಿಂದ ಇವತ್ತು ನಾವು ಕೆಲವು ವರ್ಗದವರು ಈ ಶಿಕ್ಷಣವನ್ನೇ ತೆಗೆದುಕೊಳ್ಳಬೇಕು, ಅಥವಾ ಅಮೇರಿಕಾದಲ್ಲಿ ಇದ್ದ ಹಾಗೆ ಎಸ್.ಎಸ್.ಎಲ್.ಸಿ. ಅಥವಾ ಆ ಮಟ್ಟಕ್ಕೆ ಕಲಿತರೆ ಸಾಕು ಆಮೇಲೆ ಉನ್ನತವಾದಂತಹ ಶಿಕ್ಷಣ ಕೆಲವರಿಗೆ ಅದು ಸೀಮಿತವಾಗಿರಬೇಕು. ಮೆರಿಟ್ ಸ್ಟೂಡೆಂಟ್ಸ್ ಮಾತ್ರ ಹೋಗಬೇಕು. ಮತ್ತೊಂದು ಬಹುಶಃ ಆ ವರ್ಗೀಕರಣವನ್ನು ಮಾಡುತ್ತಾ ಇದ್ದರೆ ನೀವು ನಾವು ಎಸ್.ಎಸ್.ಎಲ್.ಸಿ.ಗಿಂತ ಮೇಲೆ ಓದುತ್ತಲೇ ಇರಲಿಲ್ಲ. ಏಕೆ ಅಂತ ಹೇಳಿದರೆ, ನಮಗೆ ಗೊತ್ತಿದೆ, ಡಾ.ಚಿತ್ತರಂಜನ್‌ರವರಿಗೆ ಬಹುಶಃ ಗೊತ್ತಿರಬೇಕು ನಮ್ಮ ಪರಿಸರದ ಕಾರಣದಿಂದ, ಸಮಾಜದ ಕಾರಣದಿಂದ ಬಹುಶಃ ಆ ಕೆಳಗಿನ ವರ್ಗದಲ್ಲಿ ಯಾರು ಕಲಿಯುತ್ತಾ ಇದ್ದಾರೆ ಅವರಲ್ಲಿ ಬುದ್ಧಿವಂತಿಕೆ ಇರಬಹುದು ಅದು ಸ್ಫೋಟನೆ ಆಗುವುದಿಲ್ಲ. ಸ್ಫೋಟನೆ ಆಗುವುದಕ್ಕೆ ಬಹಳ ಸಮಯ ಬೇಕಾಗುತ್ತದೆ. ಬಹುಶಃ ಕೆಲವು ಸಾರಿ ಕಾಲೇಜಿಗೆ ಹೋದಾಗ ಹೆಚ್ಚು ಅವರಿಗೆ ತಿಳುವಳಿಕೆ ಬರುತ್ತದೆ, ಆಮೇಲೆ ಅದು ಬಿ.ಎ. ಆಗಬಹುದು, ಅಥವಾ ಇಂಜಿನಿಯರ್ ಆಗಬಹುದು ಅಥವಾ ಬೇರೆ ಕ್ಷೇತ್ರದಲ್ಲಿ ಅವರು ಹೋಗಲಿಕ್ಕೆ ಸಾಧ್ಯವಿದೆ. ಆದರೆ ಜ್ಞಾನ ಸ್ಫೋಟನೆ ಆಗುವ ಮೊದಲೇ ನಿಮ್ಮ ಒಂದು ಸೀಮಾ ರೇಖೆಯನ್ನು ಹಾಕಿ ಬಿಟ್ಟರೆ, ಬಹುಶಃ ಅನೇಕ ಗುಣ ನಿಧಿಗಳು ಇವತ್ತು ಆ ಶ್ರೇಷ್ಠತೆಯ ದಿಗಂತವನ್ನು ಸೇರುತ್ತಲೇ ಇರಲಿಲ್ಲ. ಆದ್ದರಿಂದ ಇದರ ಬಗ್ಗೆ ನಾವು ಬಹಳ ಜೂಸಿಯಾಗಲಿಕ್ಕೆ ಸಾಧ್ಯವಾಗುವುದಿಲ್ಲ. ನಾವು ಅದನ್ನು ಓಪನ್ ಅಪ್ ಆಗಬೇಕಾಗುತ್ತದೆ, ಆಪರ್ಚುನಿಟೀಸ್ ಬೇಕಾಗುತ್ತದೆ. ಏಕೆಂದರೆ ನೆಪೋಲಿಯನ್ ಬೊನ ಪಾರ್ಟಿ ಒಂದು ಕಡೆ ಹೇಳುತ್ತಾನೆ. ಏಕೆಂದರೆ ಪ್ರತಿಭೆ ಇದ್ದರೆ ಸಾಲದು, ಆಪರ್ಚುನಿಟೀಸ್ ಕೂಡ ಬೇಕು, ಅವಕಾಶದ ಬಾಗಿಲನ್ನು ಬೇರೆ ಬೇರೆ ಹಂತದಲ್ಲಿ

ಮುಚ್ಚಿಬಿಟ್ಟರೆ, ಅದು ಕಳೆದ ಕೆಲವು ಬಾರಿ ನಾವು ಅಗಾಧವಾದಂತಹ ಪ್ರತಿಭೆಯ ಅಥವಾ ಮಾನವ ಸಂಪನ್ಮೂಲದ ಗಣಿಯನ್ನೇ ಸಮಾಧಿ ಮಾಡಿ ಮೂಲೆಗೆ ತಳ್ಳಿದಂತಹ ಪರಿಸ್ಥಿತಿಯು ಬರುತ್ತದೆ. ಆದಕ್ಕಾಗಿಯೇ ನಾವು ಸಮೂಹ ಶಿಕ್ಷಣವನ್ನು ಎಲ್ಲಾ ದೃಷ್ಟಿಯಿಂದ ತೆಗೆದುಕೊಂಡು ಹೋಗುತ್ತಿದ್ದೇವೆ. ಹೋಗುವಾಗ ಎಲ್ಲಾ ಅನುಕೂಲತೆಗಳನ್ನು ಸರ್ಕಾರ ಕಲ್ಪಿಸುವುದಕ್ಕೆ ಆಗುವುದಿಲ್ಲ. ಕೆಲವು ಸಾರಿ ಖಾಸಗಿಯವರು ಕಲ್ಪಿಸಬೇಕಾಗುತ್ತದೆ. ಈ ದೃಷ್ಟಿಯಿಂದ ಹೇಳುವುದು ಇದ್ದರೆ ಇವತ್ತು ಕರ್ನಾಟಕ ರಾಜ್ಯ ಶಿಕ್ಷಣದಲ್ಲಿ ಎಲ್ಲಾ ದೃಷ್ಟಿಯಿಂದಲೂ ಪ್ರಥಮ ಸ್ಥಾನದಲ್ಲಿದೆ ಎಂದು ಹೇಳಿದರೆ ಅದು ನಾನು ಸಂಖ್ಯೆಯಲ್ಲಿ ಮಾತ್ರ ಹೇಳುತ್ತಿಲ್ಲ. ಗುಣಮಟ್ಟದಲ್ಲಿ ಕೂಡ the level of excellence ಅದನ್ನು ಬಹುಶಃ ಕರ್ನಾಟಕದಲ್ಲಿ ಕುಳಿತುಕೊಂಡು ನಮ್ಮನಮ್ಮ ಸೀಮಿತವಾದ ಪರಿಧಿಯಲ್ಲಿ ಕುಳಿತುಕೊಂಡು ವಿಚಾರ ಮಾಡತಕ್ಕದ್ದಲ್ಲ. ನಮ್ಮ ನಾಡಿನ ಗಡಿಯನ್ನು ದಾಟಿ ಹೋದಾಗ ಅಥವಾ ನಮ್ಮ ದೇಶದ ಗಡಿಯನ್ನು ದಾಟಿ ಹೋದಾಗ even advanced countries like Amercia, ನಾನು ನೋಡಿದ್ದೇನೆ, ನಮ್ಮ ಕಡೆಯಿಂದ ಬಹಳ ಶ್ರೀಮಂತ ಕುಟುಂಬದಲ್ಲಿ ಹುಟ್ಟಿದವರೆಲ್ಲ ಅಸಂಖ್ಯಾತ ವೈದ್ಯರುಗಳು, ಅಸಂಖ್ಯಾತ ಇಂಜಿನಿಯರ್‌ಗಳು ಇವತ್ತು they have created each of themselves in excellence, ಬಹಳ ಸೆನ್ಸಿಟೀವ್ ಸ್ಥಳಗಳಲ್ಲಿ, ಸೆನ್ಸಿಟೀವ್ ಹುದ್ದೆಗಳಲ್ಲಿ ಇವತ್ತು ಒಂದು ರೀತಿಯ highest level of credibility in terms of integrity, in terms of excellence, ಇದನ್ನು ಇವತ್ತು ನಮಗೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದು ಮುಂದೆ ಕೂಡ ಹೋಗಬೇಕು. ಒಂದು ಕಾಲದಲ್ಲಿ ನಮ್ಮ ಸರ್ಕಾರದ್ದು ವಿಶ್ವೇಶ್ವರಯ್ಯ ಇಂಜಿನಿಯರ್ ಕಾಲೇಜು ಏನಿದೆ ಇಂಜಿನಿಯರ್‌ಗಳು ಎಲ್ಲಾ ಸ್ಟೇಟ್‌ಗಳಲ್ಲೂ ಕೂಡ they were Head of the Engineering Department..ಅವರುಗಳು ಚೀಫ್ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದಂತಹ ಕಾಲ ಇದೆ. ರಾಂಚಿಯಲ್ಲಿರುವ ಟೆಕ್ನಾಲಜಿಯಲ್ಲಿ ಕೂಡ ನಮ್ಮ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜಿನಲ್ಲಿ ಓದಿದವರೇ ಮೊನ್ನೆಯವರೆಗೆ ಅವರು ವೈಸ್‌ಛಾನ್ಸಲರ್ ಆಗಿದ್ದರು. ಆದ್ದರಿಂದ ಇವತ್ತು ಇಂತಹ ಎಕ್ಸ್‌ಲೆನ್ಸ್ ಕೊಡತಕ್ಕಂತಹ ಸಮುದಾಯ ಶಿಕ್ಷಣವನ್ನು ಕೊಡತಕ್ಕಂತಹ ಒಂದು ಉಜ್ವಲವಾದಂತಹ ಪರಂಪರೆ ನಮ್ಮದು ಇದೆ. ಅದನ್ನು ಉಳಿಸಿಕೊಳ್ಳಬೇಕು, ಮುಂದುವರಿಸಿಕೊಂಡು ಹೋಗಬೇಕು ಈ ಬದಲಾಗತಕ್ಕ ಜಗತ್ತಿನಲ್ಲಿ, ಗ್ಲೋಬಲ್ ಎಕಾನಮಿ ಅಂದರೆ ಜಾಗತಿಕ ಒಂದು ಆರ್ಥಿಕ ಕ್ಷೇತ್ರ ಎಂದು ಏನು ಹೇಳುತ್ತೇವೆ ಅಥವಾ ಜಾಗತಿಕವಾದ ಒಂದು ಗ್ಲೋಬಲ್ ಎಂಪ್ಲಾಯೆಮೆಂಟ್ ಮಾರ್ಕೆಟ್ ಏನಿದೆ ಇವತ್ತು ನಮ್ಮ ವಿದ್ಯಾರ್ಥಿ ವಿದ್ಯಾರ್ಥಿನಿಯರು ಆ ಜಾಗತಿಕ ಮಾರುಕಟ್ಟೆಯಲ್ಲಿ ಸ್ಪರ್ಧೆ ಮಾಡತಕ್ಕ ಒಂದು ಶಕ್ತಿ ನಮ್ಮ ಶಿಕ್ಷಣ ಕ್ಷೇತ್ರದಲ್ಲಿ ಬರೀ ಉನ್ನತ ಶಿಕ್ಷಣದಲ್ಲಿ ಮಾತ್ರ ಕೊಟ್ಟರೆ ಸಾಲದು, ಪ್ರಾಥಮಿಕ ಹಂತದಲ್ಲಿಯೂ ಕೂಡ ಆರೀತಿ ಒಂದು ಗ್ಲೋಬಲ್ ಎಕ್ಸಲೆನ್ಸ್ ಸಿದ್ಧ ಮಾಡತಕ್ಕ ಒಂದು ಶಿಕ್ಷಣ ಕ್ಷೇತ್ರ ಆ ಒಂದು ಶಕ್ತಿಯನ್ನು ನಾವು ನಮ್ಮ ಶಿಕ್ಷಣ ಕ್ಷೇತ್ರಕ್ಕೆ ಕೊಡುವುದಕ್ಕೆ ಸಾಧ್ಯವಿದೆ. ಆ ಒಂದು ಪೊಟೆನ್‌ಶಿಯಲ್ ನಮ್ಮಲ್ಲಿದೆ. ಆ ಪೊಟೆನ್‌ಶಿಯಲ್ ನಮ್ಮ ವಿದ್ಯಾರ್ಥಿಗಳಲ್ಲಿದೆ, ಆ ಪೊಟೆನ್‌ಶಿಯಲ್ ನಮ್ಮ ಶಿಕ್ಷಣ ಸಂಸ್ಥೆಗಳಲ್ಲಿದೆ. ಅದು ಖಾಸಗಿ ಇರಬಹುದು ಅಥವಾ ಸರ್ಕಾರದ ಇಲಾಖೆಯಲ್ಲಿ ಕೂಡ ಇರಬಹುದು. ಮುಖ್ಯವಾಗಿ ಸಾಕ್ಷರತಾ ಒಂದು ಚಳುವಳಿಯೋಪಾದಿಯಲ್ಲಿ ಏನು ಪ್ರಾರಂಭ ಮಾಡಿದ್ದೆವು ಅದು ಸ್ವಲ್ಪ ನಾನು ತಿಳಿದುಕೊಂಡ

ಹಾಗೆ ಆ ಚಳುವಳಿಯೋಪಾದಿಯಲ್ಲಿ ಸಾಕ್ಷರತಾ ಆಂದೋಳನ ಈಗ ನಡೆಯುತ್ತಿಲ್ಲ. ಈಗ ಜಿಲ್ಲಾಧಿಕಾರಿಗಳನ್ನು ತಾವು ಬದಲಾವಣೆ ಮಾಡಿದ್ದೀರಿ. ಅವರು ಹೊಸದಾಗಿ ಹೋಗಿದ್ದಾರೆ. ಜಿಲ್ಲಾಧಿಕಾರಿಗಳು ಅಲ್ಲಿ ಲೀಡರ್ ಆಗಿ ಇರಬೇಕಾಗುತ್ತದೆ. ಈಗಿನಿಂದ ಪ್ರಯತ್ನ ಮಾಡಿ ಕೊನೇಪಕ್ಷ ಡಿಸೆಂಬರ್ 1995ರೊಳಗೆ ಈ ರಾಜ್ಯ ಸಂಪೂರ್ಣ ಸಾಕ್ಷರತಾ ರಾಜ್ಯವಾಗತಕ್ಕ ಒಂದು ವ್ಯವಸ್ಥೆಯಲ್ಲಿ ತಾವು ದಯವಿಟ್ಟು ಹಿಂದೆ ಹೋಗಬಾರದು. ಸಾಕ್ಷರತಾ ಆಂದೋಳನ ಅಂದರೆ ಸುಮ್ಮನೆ ಖರ್ಚು ಮಾಡುತ್ತಾರೆ. ಎಂದು ಒಮ್ಮೆಲೇ ಒಂದು ಕಾಮನ್ ಚಾರ್ಜಸ್ ಮಾಡಿಬಿಡುತ್ತಾರೆ. ಜಿಲ್ಲಾಧಿಕಾರಿಗಳು ಹಣ ತಿಂದಿದ್ದಾರೆಂದು ಹೇಳುತ್ತಾರೆ. ಹಣ ತಿನ್ನುವುದಕ್ಕೆ ಹೇಗಾಗುತ್ತದೆಂದು ನಾನು ಕೂಡ ಸ್ವಲ್ಪ ಪರಿಶೀಲನೆ ಮಾಡಿ ನೋಡಿದೆ. ಹೇಗೆ ಹಣ ತಿನ್ನುತ್ತಾರೆ ಜಿಲ್ಲಾಧಿಕಾರಿಗಳು ಎಂದು ಪರಿಶೀಲನೆ ಮಾಡಿ ನೋಡಿದಾಗ ಅದು ಅಷ್ಟು ಸುಲಭವಲ್ಲ. ಜಿಲ್ಲಾ ಮಟ್ಟದಲ್ಲಿ ಸಮಿತಿ ಇದೆ, ಸ್ಕ್ರೂಟಿನಿ ಇದೆ. ಇವತ್ತು 5 ಕೋಟಿ ರೂಪಾಯಿಗಳನ್ನು ಒಂದು ಜಿಲ್ಲೆಗೆ ಖರ್ಚು ಮಾಡುವುದಿದ್ದರೆ ಸಾಕ್ಷರತಾ ಆಂದೋಳನಕ್ಕೆ, ಬಹುಶಃ ತಮಗೆ ಗೊತ್ತಿದೆ ಅಧ್ಯಕ್ಷರೆ ಒಂದು ಶತಮಾನಕ್ಕೆ ಆ ಜಿಲ್ಲೆ ಸಾಧನೆ ಮಾಡದೆ ಇದ್ದ ಸಾಧನೆ 5 ಕೋಟಿ ರೂಪಾಯಿಗಳಿಂದ ಆಗುತ್ತದೆಂದು ಹೇಳುವಾಗ ಒಂದು ಪವಾಡ ಇವತ್ತು ಮಾಡುವುದಕ್ಕೆ ಸಾಧ್ಯವಿದೆ. 1947ರಲ್ಲಿ ನಮಗೆ ಸ್ವಾತಂತ್ರ್ಯ ಸಿಕ್ಕಿದಾಗ ದೇಶದಲ್ಲಿ ಸಾಕ್ಷರತಾ ದರ 17 ಪರ್ಸೆಂಟ್ ಮಾತ್ರ ಇತ್ತು. 1980ರವರೆಗೆ ಏನೂ ಬದಲಾವಣೆಯಾಗಲಿಲ್ಲ. 1980ರಲ್ಲಿ ಹೊಸ ಶಿಕ್ಷಣ ನೀತಿ ದೇಶದಲ್ಲಿ ಬಂದಮೇಲೆ ಹೊಸ ಸಾಕ್ಷರತಾ ಮಿಷನ್ ತನ್ನ ಜವಾಬ್ದಾರಿಯನ್ನು ವಹಿಸಿಕೊಂಡ ಮೇಲೆ ಇವತ್ತು ನಾವು ಬಹಳ ಮುಂದೆ ಹೋಗಿದ್ದೇವೆ. ಕರ್ನಾಟಕದ ಲೇಟೆಸ್ಟ್ ಸೆನ್ಸಸ್ ನೋಡಿದರೆ ಬಹುಶಃ ನಾವು 75 ಪರ್ಸೆಂಟ್ ದಾಟಿದ್ದೇವೆ. ಅದನ್ನು 90 ಪರ್ಸೆಂಟ್ ಕೂಡ ಈ 8ನೇ ಯೋಜನೆ ಮುಗಿಯುವ ಮೊದಲು ಅಥವಾ ಒಂದೆರಡು ವರ್ಷದೊಳಗೆ ಸಾಧನೆ ಮಾಡುವುದಕ್ಕೆ ಸಾಧ್ಯವಿದೆ. ಬಹುಶಃ ನನ್ನ ಒಂದು ಸೂಚನೆ ಮಾನ್ಯ ಉಪಾಧ್ಯಕ್ಷರ ಮೂಲಕ ಸರ್ಕಾರಕ್ಕೆ ಏನೆಂದರೆ, ಹೊಸದಾಗಿ ಮಾನ್ಯ ಸದಸ್ಯರೇನು ಬಂದಿದ್ದಾರೆ ಅವರನ್ನು ಆ ಕ್ಯಾಂಪುಗಳಿಗೆ ಕೊಂಡೊಯ್ಯಬೇಕು. ಅವರು ಸ್ವಲ್ಪ ಇದನ್ನು ಅಭ್ಯಾಸ ಮಾಡಬೇಕಾಗುತ್ತದೆ. ನಾನು ಮುಖ್ಯ ಮಂತ್ರಿಯಾಗಿದ್ದಾಗ ಕೂಡ ಅನೇಕ ಜನ ಶಾಸಕರಿಗೆ ಈ ಬಗ್ಗೆ ತಿಳಿವಳಿಕೆ ಕೊಡಲಾಯಿತು. ಇದರಿಂದ ಏನೋ ವೇಸ್ಟ್ ಆಗುತ್ತಿದೆ ಎಂದು ಸಾರಾಸಗಟಾಗಿ ಜಿಲ್ಲಾಧಿಕಾರಿಗಳ ಮೇಲೆ ಆಪಾದನೆಗಳನ್ನು ಮಾಡಿದ್ದರಿಂದ ಆ ಆಘಾತವನ್ನು ತಡೆಯಲಾರದೆ ಜಿಲ್ಲಾಧಿಕಾರಿಗಳು ಆ ಕೆಲಸವನ್ನೇ ಕೈಬಿಟ್ಟರು, ಅವರು ಅದನ್ನು ಅಲ್ಲೇ ಕೈಬಿಟ್ಟು ಕುಳಿತುಕೊಳ್ಳತಕ್ಕ ಪರಿಸ್ಥಿತಿ ಬಂತು. ನಮ್ಮ ದಕ್ಷಿಣ ಕನ್ನಡ ಜಿಲ್ಲೆ ಪ್ರಥಮ ಸಾಕ್ಷರತಾ ಜಿಲ್ಲೆ. ನಮ್ಮ ಜಿಲ್ಲೆಗೆ ಇದರಿಂದ ಬಹಳ ಲಾಭವಾಗಿದೆ. ಇದನ್ನು ಇಡೀ ಎಲ್ಲಾ ಜಿಲ್ಲೆಗಳಿಗೂ ಅನುಸರಿಸುವಂತೆ ಮಾಡಬೇಕಾಗುತ್ತದೆ. ಇದಕ್ಕೆ ತಾವು ಒಳ್ಳೆಯ ಅಧಿಕಾರಿಗಳನ್ನು ಹಾಕಬೇಕಾಗುತ್ತದೆ.

ಶ್ರೀ ಸಿ.ಹೆಚ್.ವಿಜಯಶಂಕರ್:- ಸಾಕ್ಷರತಾ ಆಂಧೋಳನವನ್ನು ಏನು ಜಾರಿಗೆ ತರಲಾಯಿತು ಅದರಿಂದ ಇವತ್ತು ಏನು ಮನೆಮನೆಗೆ ಹೋಗಿ, ಬನ್ನಿ ವಿದ್ಯೆ ಕಲಿಸುತ್ತೇವೆ ಎಂದು ಹೇಳತಕ್ಕ ವ್ಯವಸ್ಥೆ ಏನಿದೆ ಅದರ ಬದಲಾಗಿ ಹಕ್ಕು ಮತ್ತು ಕರ್ತವ್ಯ ಇವೆರಡೂ ಕೂಡ ಜೊತೆಜೊತೆಯಲ್ಲೇ ಹೋಗಬೇಕಾಗುತ್ತದೆ. ಆದುದರಿಂದ ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಸಲಹೆ ಕೊಡುವುದೇನೆಂದರೆ ಯಾರು ಇನ್ನೂ ಸಾಕ್ಷರರಾಗಿಲ್ಲ ಅವರನ್ನು ಸಾಕ್ಷರರನ್ನಾಗಿಸಬೇಕೆಂಬ ಚಿಂತನೆ ಸರ್ಕಾರದ್ದು ಏನಿದೆ ಇದು ಪ್ರಾಮಾಣಿಕವಾದ ಚಿಂತನೆ.

ಅದರ ಜೊತೆಯಲ್ಲಿ ಅವರ ಕರ್ತವ್ಯ ಪ್ರಜ್ಞೆಯನ್ನು ಜ್ಞಾಪಿಸಿಕೊಡಬೇಕಾಗುತ್ತದೆ. ದಯವಿಟ್ಟು ಒಂದು ಕೆಲಸವನ್ನು ಮಾಡಿ. 6 ತಿಂಗಳೊಳಗೆ ನೀನು ವಿದ್ಯಾಭ್ಯಾಸ ಮಾಡಿ ನಿನ್ನ ಹೆಸರನ್ನು ನಿನ್ನ ತಂದೆಯ ಹೆಸರನ್ನು ಮತ್ತು ನಿಮ್ಮ ಊರಿನ ಹೆಸರನ್ನು ಬರೆಯುವುದು ಕಲಿಯಲಿಲ್ಲವೆಂದರೆ ನಿನ್ನ ಹೆಸರಿನಲ್ಲಿ ಖಾತೆ ಇರುವುದಿಲ್ಲ, ನಿನ್ನ ಹೆಸರಿನಲ್ಲಿ ಪಹಣಿ ಬರೆಯುವುದಿಲ್ಲ, ಒಂದು ವರ್ಷದ ನಂತರ ಸ್ಪಷ್ಟವಾಗಿ ಒಂದು ಪತ್ರ ಬರೆಯುವಷ್ಟು ನೀನು ಕಲಿತುಕೊಳ್ಳದಿದ್ದರೆ ನಿನಗೆ ಯಾವುದೇ ಕಾರಣಕ್ಕೂ ಸರ್ಕಾರದಿಂದ ಸಿಗುವಂತ ಹಸಿರು ಕಾರ್ಡಾಗಲಿ ಕೇಸರಿ ಕಾರ್ಡಾಗಲಿ, ಐಆರ್‌ಡಿಪಿ. ಸ್ಕೀಮಾಗಲಿ ಎನ್‌ಆರ್‌ಇಪಿ ಸ್ಕೀಮಾಗಲಿ ಯಾವುದೇ ಸೌಲಭ್ಯ ಸಿಗುವುದಿಲ್ಲ ಎಂದು ಈ ರೀತಿ ಕರ್ತವ್ಯ ಪ್ರಜ್ಞೆಯನ್ನು, ಜವಾಬ್ದಾರಿ ಪ್ರಜ್ಞೆಯನ್ನು ಮೂಡಿಸಿದಾಗ ಅವರಾಗಿಯೇ ಮೇಷ್ಟರನ್ನು ಹುಡುಕಿಕೊಂಡು ಹೋಗಿ ವಿದ್ಯಾವಂತರನ್ನು ಹುಡುಕಿಕೊಂಡು ಹೋಗಿ ಪಾಠವನ್ನು ಕಲಿಯುವಂಥ ಸಂಪೂರ್ಣ ಜವಾಬ್ದಾರಿಯನ್ನು ಕೈಗೆ ತೆಗೆದುಕೊಳುತ್ತಾರೆ. ಈ ದಿಸೆಯಲ್ಲಿ ಸ್ವಲ್ಪ ಚಿಂತನೆ ಆಗಬೇಕೆಂದು ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತೇನೆ.

ಶ್ರೀ ಎಂ.ವೀರಪ್ಪ ಮೊಯಿಲಿ:- ಸಾಕ್ಷರತಾ ಆಂಧೋಳನದ ಮುಖ್ಯ ಕರ್ತವ್ಯವೇ ಅದು. ಸಾಕ್ಷರತಾ ಆಂದೋಳನದಲ್ಲಿ ಇದನ್ನೆಲ್ಲ ಅಳವಡಿಸಿದ್ದಾರೆ. ಮಾನ್ಯ ಸಚಿವರಾದ ಶ್ರೀ ಗೋವಿಂದೇಗೌಡರಿಗೆ ನಾನು ಹೇಳುವುದೇನೆಂದರೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ಸಾಕ್ಷರತಾ ಆಂಧೋಳನದಲ್ಲಿ ದುಡ್ಡು ತಿಂದು ಹಾಕಿದ್ದಾರೆಂದು ಸಾರಾಸಗಟಾಗಿ ಆಪಾದನೆ ಮಾಡುವುದು ಸರಿಯಲ್ಲ ಎಂಬುದನ್ನು ನಾನು ಕೂಡ ಒಪ್ಪುತ್ತೇನೆ. ಜಿಲ್ಲಾಧಿಕಾರಿಗಳು ಸುಮಾರು ಜನ ಪ್ರಾಮಾಣಿಕರು ಇದ್ದಾರೆ, ಅದರಲ್ಲಿ ಸಂಶಯವಿಲ್ಲ. ಆದರೆ ಜಿಲ್ಲಾಧಿಕಾರಿಗಳು ಹಣ ತಿಂದು ಹಾಕಿದ್ದಾರೆಂದು ಎಲ್ಲಿಯೂ ರಾಜ್ಯದಲ್ಲಿ ಆಪಾದನೆ ಬಂದಿಲ್ಲ. ಸಾಕ್ಷರತಾ ಆಂಧೋಳನದಲ್ಲಿ ಹಣ ದುರುಪಯೋಗವಾಗಿದೆ ಎಂದು ಹೇಳತಕ್ಕ ಆಪಾದನೆ ಬಂದಿದೆ. ನನ್ನ ಅನುಭವದಲ್ಲಿ ಬಂದಿರತಕ್ಕ ಒಂದು ವಿಷಯವನ್ನು ನಾನು ಸದನದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ..

ಶ್ರೀ ಎಂ.ವೀರಪ್ಪ ಮೊಯಿಲಿ:- ಆ ಬಗ್ಗೆ ತಾವು ಪ್ರತ್ಯೇಕವಾಗಿ ಮಾತನಾಡುವುದು ಒಳ್ಳೆಯದು. ಬೇಕಾದರೆ ನಾನು ಕೇಳಿಸಿಕೊಳ್ಳುತ್ತೇನೆ. ಆದುದರಿಂದ ಇವತ್ತು ನಾನು ಶಿಕ್ಷಣ ಸಚಿವರಿಗೆ ಹೇಳುವುದು ಏನೆಂದರೆ ಈ ಇಲಾಖೆ ಈ ಕರ್ತವ್ಯವನ್ನು ಒಂದು ಅತ್ಯಂತ ಆಧ್ಯತೆಯ ಕರ್ತವ್ಯವೆಂದು ತಿಳಿದುಕೊಂಡರೆ ಬಾಕಿಯದೆಲ್ಲ ಸರಿಯಾಗುತ್ತದೆ. ಅಷ್ಟೇ ನಾನು ಈ ವಿಚಾರದಲ್ಲಿ ಹೇಳುವುದಕ್ಕೆ ಅಪೇಕ್ಷೆಪಡುತ್ತಿದ್ದೇನೆ. ಇನ್ನೊಂದು ವಿಚಾರ, ಇವತ್ತು ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ. ಇದಕ್ಕೆ ನಾವು ಒಂದು ಮೆಥಡ್ ಅನ್ನು ಇಂಟ್ರಡ್ಯೂಸ್ ಮಾಡಿದ್ದೇವೆ. ಏಕೆಂದರೆ ಹಿಂದೆ ನೇಮಕಾತಿ ಸಮಿತಿ ಮಾಡಿದ್ದು ತಮಗೆ ಗೊತ್ತಿದೆ. ಆ ಸಮಿತಿ ಮೇಲೆ ಸಾಕಷ್ಟು ಆಪಾದನೆಗಳು ಬರುತ್ತದೆ, ಅದು ಸ್ಟೇ ಆಗುತ್ತದೆ, ಹೈಕೋರ್ಟಿಗೆ ಹೋಗುತ್ತಾರೆ. ಆದ್ದರಿಂದ ಎಷ್ಟೇ ಪ್ರಾಮಾಣಿಕವಾಗಿ ಮಾಡಿದರೂ ಕೂಡ 7-8 ವರ್ಷಗಳ ಕಾಲ ನೇಮಕಾತಿ ಮಾಡುವುದಕ್ಕೆ ಮುಂದೆ ಹೋಗುವದಕ್ಕೆ ಹೆಜ್ಜೆ ಇಡಲಿಕ್ಕೆ ಆಗಲಿಲ್ಲ. ಈಗ ನಾವು ಒಂದು ಸಿಸ್ಟಂ ಮಾಡಿದ್ದೇವೆ. ಅದರ ಪ್ರಕಾರ ಯಾರೂ ಯಾರನ್ನೂ ಬೇಡಬೇಕಾಗಿಲ್ಲ, ಕಾಡಬೇಕಾಗಿಲ್ಲ, ಯಾವ ಲಂಚರುಷುವತ್ತು ಮಾಡಬೇಕಾಗಿಲ್ಲ. ನೇರವಾಗಿ ಅಪಾಯಿಂಟ್ ಮಾಡತಕ್ಕ ಕ್ರಮವನ್ನು ತಾವು ಮುಂದವರಿಸಿದ್ದೀರೆಂದು ತಿಳಿದು ಕೊಂಡಿದ್ದೇನೆ. ಏಜ್ ಬೇಕಾದರೆ ತಾವು ಹೆಚ್ಚು ಕಡಿಮೆ

ಮಾಡತಕ್ಕದ್ದು, ವೆಯಿಟೇಜ್ ಕೊಡತಕ್ಕದ್ದು ಅದು ತಮಗೆ ಬಿಟ್ಟಿದ್ದು. ಆದರೆ ಈ ಪದ್ಧತಿಯನ್ನೇ ಮುಂದುವರಿಸಿದರೆ ಒಳ್ಳೆಯದೆಂದು ನನ್ನ ಭಾವನೆ. ಇದರಿಂದ ನೇಮಕಾತಿ ಆಗುತ್ತದೆ, ಸ್ಟೇ ಆಗುವುದಿಲ್ಲ.

ಶ್ರೀ ಸಿ.ಬೈರೇಗೌಡ:- ಗ್ರಾಮಾಂತರ ಪ್ರದೇಶದ ಅಭ್ಯರ್ಥಿಗಳಿಗೆ ವೆಯಿಟೇಜ್ ಕೊಟ್ಟಿದೆ.

ಶ್ರೀ ಎಂ.ವೀರಪ್ಪ ಮೊಯಿಲಿ:- ಅದಕ್ಕೆ ವೆಯಿಟೇಜ್ ಕೊಡಿ, ಅದು ತಮಗೆ ಬಿಟ್ಟಿದ್ದು. ನಾವು ಅದಕ್ಕೆ ಪ್ರಶ್ನೆ ಮಾಡುವುದಿಲ್ಲ. ನೇಮಕಾತಿ ಮಾಡುವಾಗ, ಶಿಕ್ಷಕರು ಮುಂದಿನ ಒಂದು ಪೀಳಿಗೆಯನ್ನು ಸಿದ್ಧಮಾಡತಕ್ಕ ಅತ್ಯಂತ ಪ್ರಾಮಾಣಿಕ ವ್ಯಕ್ತಿಗಳಾಗಿರಬೇಕಾಗುತ್ತದೆ. ಅಂಥ ವ್ಯಕ್ತಿಗಳೇ ನಾಳೆ ಹಣಕೊಟ್ಟು ಲಂಚ ಕೊಟ್ಟು ಭ್ರಷ್ಟಾಚಾರದಲ್ಲಿ ನೇಮಕಾತಿ ಪಡೆದು ಶಾಲೆಗೆ ಹೋದರೆ ಆ ಶಾಲೆಯ ಮಕ್ಕಳ ಗತಿ ಏನಾಗಬೇಕೆಂಬ ಪ್ರಶ್ನೆ ನಮ್ಮ ಮುಂದೆ ಯಾವಾಗಲೂ ಇರಬೇಕಾಗುತ್ತದೆ. ತಾವು ಅದನ್ನು ಮಾಡಿದ್ದೀರಿ, ಬಹಳ ಸಂತೋಷ. ಈ ಪದ್ಧತಿಯಲ್ಲಿ 1989-90ರಿಂದ 1993-94ರವರೆಗೆ 31233 ಮಂದಿ ಉಪಾಧ್ಯಾಯರನ್ನು ನಾವು ನೇಮಕ ಮಾಡಲಿಕ್ಕೆ ಸಾಧ್ಯವಾಯಿತು. ತಮಗೆ ಗೊತ್ತಿದ್ದ ಪ್ರಕಾರ 1993-94ರಲ್ಲಿ ಸುಮಾರು ಹತ್ತು ಸಾವಿರ ಶಿಕ್ಷಕರ ನೇಮಕಾತಿ ಆಗಿದೆ. 1994-95ರಲ್ಲಿ ಸುಮಾರು 18934 ಮಂದಿ ಶಿಕ್ಷಕರ ನೇಮಕಾತಿ ಮಾಡಬೇಕೆಂದು ನಾವು ಅದರ ಪ್ರಕ್ರಿಯೆಯನ್ನು ಕೈಗೊಂಡಿದ್ದೆವು. ಅದು ಸ್ವಲ್ಪ ನಿಧಾನವಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ತಾವು ಅದನ್ನು ಬೇಗ ಮಾಡಬೇಕು. ಎಲ್ಲಾ ಖಾಲಿ ಹುದ್ದೆಗಳು ಭರ್ತಿಯಾಗಬೇಕು ಮತ್ತು ಪ್ರತಿ ವರ್ಷ ಕೂಡ ಐದೈದು ಸಾವಿರ ಅಪಾಯಿಂಟ್‌ಮೆಂಟ್ ಆದರೆ ಬಹಳಷ್ಟು ಬ್ಯಾಕಲಾಗ್ ಫಿಲ್‌ಅಪ್ ಆಗುತ್ತದೆ. ಮುಂದಿನ ವರ್ಷದ ನಂತರ ಹೊಸ ವೇಕೆನ್ಸಿಗಳು ಏನಾಗುತ್ತವೆ ಅವನ್ನು ಫಿಲ್‌ಅಪ್ ಮಾಡತಕ್ಕ ಕ್ರಮ ತೆಗೆದುಕೊಂಡ ಹಾಗೆ ಆಗುತ್ತದೆ. ಈ ಮೂಲಕ 50167 ಪ್ರಾಥಮಿಕ ಶಾಲಾ ತರಗತಿಗಳಿಗೆ ಶಿಕ್ಷಕರನ್ನು ನೇಮಕ ಮಾಡತಕ್ಕ ಪ್ರಕ್ರಿಯೆ ಈ ವರ್ಷ ಮುಗಿದ ಹಾಗೆ ಆಗುತ್ತದೆ. ಅದನ್ನು ತಾವು ದಯವಿಟ್ಟು ಮುಂದುವರಿಸಿಕೊಂಡು ಹೋಗಬೇಕೆಂದು ಹೇಳುತ್ತೇನೆ. ಅದೇ ಪ್ರಕಾರ ಹೈಸ್ಕೂಲ್ ಟೀಚರ್ಸ್ ವೇಕೆಂಟ್ ಪೊಸಿಷನ್ಸ್ ಎಲ್ಲ ಮಾಡಿದ್ದೇವೆ. ಅಂದರೆ ಕ್ರಿಯೇಟ್ ಆದ ಹೊಸ ಹುದ್ದೆಗಳಿಗೆ ನೇಮಿಸಿದ್ದೇವೆ. ಹೊಸ ಹುದ್ದೆಗಳನ್ನು ದಾಮಾಷಾ ಪ್ರಕಾರ ನೇಮಕ ಮಾಡಲಿಕ್ಕೆ ಹೊಸ ಹುದ್ದೆಗಳನ್ನು ಕೂಡ ಆಯಾಯ ವರ್ಷ, ಈ ವರ್ಷ ಅಥವಾ ಬರುವ ವರ್ಷದಿಂದ ಪ್ರಾರಂಭ ಮಾಡಿದರೆ ಯಾವ ಬ್ಯಾಕ್‌ಲಾಗ್ ಕೂಡ ಇರುವುದಿಲ್ಲ. ಅದೇ ರೀತಿ ಏಡೆಡ್ ಸಂಸ್ಥೆಗಳಿಗೆ ನಾವು ಇರುವಾಗ ಎಲ್ಲಾ ಪರ್ಮಿಷನ್ ಕೊಟ್ಟಿದ್ದೇವೆ. ನೇಮಕಾತಿ ಮಾಡಿದ್ದಾರೆ. ಅದೇ ಪ್ರಕಾರ ಕಾಲೇಜ್ ಟೀಚರ್ಸ್, ಜೂನಿಯರ್ ಕಾಲೇಜ್‌ಗಳಲ್ಲಿ ಎಲ್ಲ ರೀತಿಯ ವ್ಯವಸ್ಥೆ ಇವತ್ತು ಆದಾಗ ಖಂಡಿತವಾಗಿ ಸರಿಯಾದ ಒಂದು ಶೈಕ್ಷಣಿಕ ಪದ್ಧತಿಯನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಸಾಧ್ಯವಾಗುತ್ತದೆ.

4.30 ಪಿ.ಎಂ.

ಶಾಲಾ ಕೊಠಡಿಗಳ ಬಗ್ಗೆ ಹೇಳುವುದಾದರೆ, 1989-90ರಲ್ಲಿ ಸುಮಾರು 3438, 1991-92ರಲ್ಲಿ ಸುಮಾರು 6761 ಮತ್ತು 1993-94ರಲ್ಲಿ ಸುಮಾರು 10 ಸಾವಿರ ಕೊಠಡಿಗಳು, 1994-95ರಲ್ಲಿ ಸುಮಾರು 15185 ಕೊಠಡಿಗಳು. ಈ ರೀತಿ ಸಾಕಷ್ಟು ಕಾರ್ಯಕ್ರಮಗಳಿವೆ. ಕಪ್ಪು ಹಲಗೆ ಯೋಜನೆ ಇದೆ. ಬೇರೆ ಬೇರೆ ರೀತಿಯಲ್ಲಿ ನಾವು ಇವತ್ತು ಶಿಕ್ಷಕರ

ನೇಮಕಾತಿಗಳನ್ನು ಮತ್ತು ಕೊಠಡಿಗಳನ್ನು ಕೂಡ ನಿರ್ಮಾಣ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಇನ್ನೊಂದು ವಿಚಾರ ನಾನು ತಮಗೆ ಹೇಳಲಿಕ್ಕೆ ಅಪೇಕ್ಷೆಪಡುತ್ತಿದ್ದೇನೆ. ಬೆಳಗ್ಗೆ ನಮ್ಮ ಮಿತ್ರರಾದಂಥ ಡಾಕ್ಟರ್ ಜೀವರಾಜ್ ಆಳ್ವ ಅವರು ಕೂಡ ಪ್ರಸ್ತಾಪ ಮಾಡಿದ್ದಾರೆ. ಅದು ಡಾಕ್ಟರ್ ಶಿವರಾಮ ಕಾರಂತರಿಗೆ ಸಂಬಂಧಪಟ್ಟ ಓದುವ ಆಟದ ಬಗ್ಗೆ. ಏಕೆಂದರೆ ಇವತ್ತು ಒಂದು ರೀತಿ ಹೊಸ ವಾತಾವರಣ ಬರುತ್ತಿದೆ. ಒಂದೊಂದು ಜಾತಿಯವರಿಗೆ ನೋವಾಗಿದೆ ಎಂದು ಹೇಳತಕ್ಕದ್ದು, ಒಂದೊಂದು ಮತದವರಿಗೆ ನೋವಾಗಿದೆ ಎಂದು ಹೇಳತಕ್ಕದ್ದು. ಮಹಾಚೈತ್ರ ಕೂಡ ರದ್ದಾಯಿತು. ಈಗ ಓದುವ ಆಟ ಮತ್ತೊಂದು ಹಗರಣ. ಅದು ಕೂಡ ನೇರವಾಗಿ ನನ್ನ ಸೂಚನೆ ಏನೆಂದರೆ, ಇದನ್ನೆಲ್ಲಾ ಅಕಡೆಮಿಷಿಯನ್‌ಗೆ ನಾವು ಬಿಟ್ಟು ಕೊಡಬೇಕಾಗುತ್ತದೆ. ಒಂದು ವೇಳೆ ಇದು ಸರಿ ಇದ್ದರೆ ಸರಿ ಇದೆ ಎಂದು ಅವರೇ ಹೇಳಲಿ. ಸರಿ ಇಲ್ಲ ಎಂದು ಹೇಳಿದರೂ ಕೂಡ ಅವರೇ ಹೇಳಲಿ, ಮಹಾಚೈತ್ರ ಕೂಡ ಏನಾಗಿದೆಯೆಂದರೆ ಅದರ ಬಗ್ಗೆ ಯೂನಿವರ್ಸಿಟಿಗೆ ಬಿಟ್ಟುಬಿಡಬೇಕಾಗಿತ್ತು. ಅದು ಆಗಲಿಲ್ಲ. ಸರ್ಕಾರವೇ ನೇರವಾಗಿ ಇವತ್ತು ರಾಜ್ಯಪಾಲರಿಗೆ ಹೇಳಿ ರಾಜ್ಯಪಾಲರು ಈ ವಿಷಯವನ್ನು ಯೂನಿವರ್ಸಿಟಿಗೆ ಹೇಳಿ ಇವತ್ತು ಆ ಪಠ್ಯ ಪುಸ್ತಕವನ್ನು ವಿತ್‌ಡ್ರಾ ಮಾಡತಕ್ಕ ಪರಿಸ್ಥಿತಿ it will be a real threat to the secular fabric of the society. ಈ ಹಂತದಲ್ಲಿ ನಾವು ಮಾಡಿದರೆ ಮಕ್ಕಳಲ್ಲೂ ಕೂಡ ಒಂದು ರೀತಿ ಭಾವನೆ ಬರುತ್ತದೆ. ಓಹೋ ಇದು ವೀರಶೈವರಿಗೆ ನೋವಾಗುತ್ತದೆ, ಮತ್ತೊಂದು ಜಾತಿಗೆ ನೋವಾಗುತ್ತದೆ, ಮತ್ತೊಂದು ಮತಕ್ಕೆ ನೋವಾಗುತ್ತದೆ ಎಂದು ಇವತ್ತು ಮುಗ್ಧ ಬಾಲಕರಿಗೆ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಜಾತಿ ಬಗ್ಗೆ ಮತದ ಬಗ್ಗೆ ತಮ್ಮ ಜಾತಿ ಮತದ ವಿಷಯದಲ್ಲಿ ಸ್ವಾಭಿಮಾನ, ಹೋರಾಟ, ಸಂಘರ್ಷ ಮಾಡುವುದಕ್ಕೆ ನಾವೇ ಸರ್ಕಾರವೇ ಅಣಿ ಮಾಡಿಕೊಟ್ಟ ಹಾಗೆ ಆಗುತ್ತದೆ. ಇದನ್ನು ಖಂಡಿತವಾಗಿ ಕೂಡ ತಡೆಹಿಡಿಯಬೇಕಾಗುತ್ತದೆ. ಓದುವ ಆಟ ಇವತ್ತು ನಿನ್ನೆಯದಲ್ಲ, 30 ವರ್ಷಗಳಿಂದ ಕೂಡ ಇತ್ತು . ಬಹುಶಃ ಈ ವರ್ಷ 6 ಮತ್ತು 7ನೇ ಕ್ಲಾಸ್‌ಗೆ ಇಂಟ್ರೊಡ್ಯೂಸ್ ಆಗಿರಬೇಕು ''ಓದುವ ಆಟ'' ಈ ಬಗ್ಗೆ ಟೀಚರ್ಸ್‌ನಲ್ಲಿ ವರ್ಕ್‌ಷಾಪ್ ಆಗಿದೆ. ಈ ಪುಸ್ತಕದ ಬಗ್ಗೆ ವರ್ಕ್‌ಷಾಪ್ ಆಗಿದೆ. ಡಾಕ್ಟರ್ ಶಿವರಾಮ ಕಾರಂತರೇ ಸ್ವತಃ ಈ ಪಾಠವನ್ನು ಯಾವರೀತಿ ಕಲಿಸುವುದಕ್ಕೆ ಸಾಧ್ಯ ಇದೆ ಎಂಬುದನ್ನು ಟೀಚರ್ಸ್ ಮಧ್ಯೆ ವರ್ಕ್‌ಷಾಪ್ ಮಾಡಿ ಅದನ್ನು ಮಾಡತಕ್ಕ ವ್ಯವಸ್ಥೆಯನ್ನು ಅಕಡೆಮಿಕ್ ಅಟ್ಮಾಸ್‌ಫಿಯರನ್ನು ಇವತ್ತು ಮಾಡಿದ್ದಾರೆ. ಡಾಕ್ಟರ್ ಶಿವರಾಮ ಕಾರಂತರು ತಮ್ಮ ಪುಸ್ತಕವನ್ನು ಟೆಕ್ಸ್ಟ್‌ಬುಕ್ ಮಾಡಿ ಎಂದು ಯಾವತ್ತೂ ಕೇಳುವವರಲ್ಲ. ಏಕೆಂದರೆ ಈಗ ಕುವೆಂಪು ಅವರು ಹೇಗಿದ್ದಾರೆ, ಡಾಕ್ಟರ್ ಶಿವರಾಂ ಕಾರಂತರು, ಬೇಂದ್ರೆ ಅವರು, ಗೋಕಾಕ್ ಇಂಥವರು ಯುಗಪುರುಷರು. ಅಂಥವರು ಒಂದೊಂದು ಯುಗದಲ್ಲಿ ಒಬ್ಬಬ್ಬರು ಬರಬಹುದು. ಅಂಥವರಿಗೆ ನೋವು ಮಾಡುವಂಥ ಒಂದು ಪ್ರಸಂಗ ಇವತ್ತು ಉದ್ಭವವಾಗಿದೆ. ಯಾವುದೇ ಪಾಠ ಸರಿ ಇಲ್ಲದಿದ್ದರೆ ಬಹುಶಃ ಅವರ ಹತ್ತಿರ ಸಮಾಲೋಚನೆ ಮಾಡಬಹುದಾಗಿತ್ತು. ಇನ್ನೂ ಒಂದು ವರ್ಕಷಾಪೋ ಮತ್ತೊಂದೋ ಮಾಡಬಹುದಾಗಿತ್ತು. ಆದರೆ ಇವತ್ತು ಯಾವ ವಿಷಯ ಇದ್ದರೂ ಸಾರ್ವಜನಿಕರಲ್ಲಿ ಒಂದು ವರ್ಗ ಅವರಿಗೆ ಅವಕಾಶ ಕೊಟ್ಟರೆ ಎಜಿಟೇಷನ್ ಮಾಡೇ ಮಾಡುತ್ತಾರೆ. ಇಲ್ಲಿಯವರೆಗೆ ಅಂದರೆ 4 ವರ್ಷಗಳಿಂದ ಆಗದೇ ಇದ್ದಂಥ ಅಜಿಟೇಷನ್ ಈ ವರ್ಷ ಆಗಿದೆ. ಏನು ಇಲ್ಲಿಯವರೆಗೆ ಅದನ್ನು ಓದಲಿಲ್ಲವೆ? ಎಲ್ಲರೂ ಓದಿದ್ದಾರೆ. ಆದರೆ ಇವತ್ತು ಯಾವುದೋ ಶಕ್ತಿಗಳು ಬೇರೆಬೇರೆ

ಹಂತದಲ್ಲಿ ಇದನ್ನು ಬೆಳೆಸುವುದಕ್ಕೆ ನೋಡುತ್ತಾರೆ. ಜಾತೀಯ ಮತೀಯ ವಿಷಬೀಜಗಳನ್ನು ಇವತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಬಿತ್ತುವುದಕ್ಕೆ ಬೇರೆ ಬೇರೆ ಪ್ರಯತ್ನವನ್ನು ಅವರು ಮಾಡೇ ಮಾಡುತ್ತಾರೆ. ಆದ್ದರಿಂದ ಇದರ ಬಗ್ಗೆ ತಾವು ನಿರ್ಣಯ ಕೊಟ್ಟಿದ್ದೀರಿ. ಇದರ ಬಗ್ಗೆ ದಯಮಾಡಿ ಚರ್ಚೆ ಮಾಡಬೇಕು. ಆ ಶಿಕ್ಷಣ ಸಮುದಾಯದಲ್ಲಿ ಈ ಬಗ್ಗೆ ಚರ್ಚೆ ಮಾಡಬೇಕು. ಏಕೆಂದರೆ ತಮಗೆ ಗೊತ್ತಿದೆ ವಿಜ್ಞಾನ ಪ್ರಪಂಚ, ಬಾಲ ಪ್ರಪಂಚ ಏನು ಡಾಕ್ಟರ್ ಶಿವರಾಮ ಕಾರಂತರು ನಮ್ಮ ನಾಡಿಗೆ ಕೊಟ್ಟಿದ್ದಾರೆ ಅದಕ್ಕಿಂತ ಒಳ್ಳೆಯ ಉದ್‌ಗ್ರಂಥ ಆ ಕ್ಷೇತ್ರದಲ್ಲಿ ಮತ್ತೊಂದಿಲ್ಲ. ಆದರೆ ಓದುವ ಆಟ ಕೂಡ ಶೈಕ್ಷಣಿಕ ಸಿದ್ಧಾಂತದ ಒಂದು ಹಿನ್ನೆಲೆಯಲ್ಲಿ ತಯಾರು ಮಾಡಿದಂಥ ಪುಸ್ತಕ ಇದು. ಏನಾದರೂ ಅದರಲ್ಲಿ ಆಕ್ಷೇಪಾರ್ಹ ವಿಚಾರಗಳು ಒಂದೆರಡು ಕಡೆ ಇದ್ದರೆ ಅಥವಾ 6ನೇ ಮತ್ತು 7ನೇ ತರಗತಿಯಲ್ಲಿದ್ದರೆ ಆ ಅಂಶಗಳನ್ನು ತಾವು ತೆಗೆಯಬಹುದಾಗಿತ್ತು. ಆದರೆ ಇವತ್ತು ಸಾರಾಸಗಟಾಗಿ ಅದನ್ನು ಪೂರ್ತಿ ರದ್ದು ಮಾಡತಕ್ಕ ವಿಚಾರ ಏನು ನಡೆದಿದೆ ಇದು ಬಹಳ ಅಪಚಾರ. ಇವತ್ತು ಈ ವಿದ್ವಾಂಸರ ಮೇಲೆ ಮಾತ್ರವಲ್ಲ ಒಂದು ರೀತಿಯಲ್ಲಿ again another blow to the secular fabric of our education system. You will have to avoid this. ಅವಾಯಿಡ್ ಮಾಡದಿದ್ದರೆ ಮುಂದೆ ಯಾರೂ ಪುಸ್ತಕ ಬರೆಯುವುದಿಲ್ಲ. ಯಾರೂ ಕೂಡ ಸ್ವಂತ ಥಿಂಕಿಂಗ್ ಮೇಲೆ ಬರೆಯುವುದಿಲ್ಲ. ಓದುವವರು ಏನು ಆಲೋಚನೆ ಮಾಡುತ್ತಾರೆ ಎಂದು ಯಾರೂ ಪುಸ್ತಕ ಬರೆಯುವುದಿಲ್ಲ.

ಶ್ರೀಕಾಗೋಡು ತಿಮ್ಮಪ್ಪ:- ಪುಸ್ತಕ ಬರೆಯುವವರು ಪಠ್ಯಪುಸ್ತಕ ಆಗುತ್ತದೆ ಎಂಬ ದೃಷ್ಟಿಯಿಂದ ಬರೆಯುವುದಿಲ್ಲ. ಪಠ್ಯಪುಸ್ತಕಕ್ಕೋಸ್ಕರ ಬರೆಯುವುದಿಲ್ಲ. ಅವರ ವಿಚಾರ, ಅವರ ಆಲೋಚನೆ....

ಶ್ರೀ ಎಂ.ವೀರಪ್ಪ ಮೊಯಿಲಿ:-''ಓದುವ ಆಟ'' ಪಠ್ಯಪುಸ್ತಕಕ್ಕೇ ಬರೆದದ್ದು. ಶೈಕ್ಷಣಿಕ ನೀತಿ 1986 ಏನಿದೆ ಅದಕ್ಕೆ ಮಾಡಿಫೈ ಮಾಡಿ ಅವರು ಬರೆದಿದ್ದಾರೆ. ಮಹಾಚೈತ್ರ ಅಲ್ಲ. ಮಹಾಚೈತ್ರ ಪಠ್ಯಪುಸ್ತಕ ಆಗಬೇಕು ಎಂದು ಬರೆದಿದ್ದಲ್ಲ. ಆದರೆ ಒಟ್ಟಿನಲ್ಲಿ ಹೇಳುವುದಾದರೆ ಸಾಹಿತ್ಯ ಅಥವಾ ಸಾಹಿತಿಗಳು we must have tailor made ಸಾಹಿತಿಗಳಾಗಬೇಕು. ಅದು ಆಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ:- ಪಠ್ಯಪುಸ್ತಕಕ್ಕೋಸ್ಕರ ಬರೆದಿದ್ದರೆ ಅಲ್ಲಿ ಆಚಾರಿ ವಿಚಾರ ಏತಕ್ಕೆ ಪ್ರಸ್ತಾಪ ಮಾಡಬೇಕು?

ಶ್ರೀ ಎಂ.ವೀರಪ್ಪ ಮೊಯಿಲಿ:- ನಾವು ಸಣ್ಣ ಕ್ಲಾಸ್‌ನಲ್ಲಿರುವಾಗ ಒಂದು ಪಾಠ ಇತ್ತು. ಈಗಲೂ ನೆನಪಿದೆ ''ತಟಪಟ ತನಿಯಪ್ಪ'' ಎಂದು. ಅಂದರೆ ಮಳೆ ಪಟಪಟ ಎಂದು ಬೀಳುತ್ತದೆ. ನಮ್ಮ ಊರಿನಲ್ಲಿತ್ತು. ಒಂದನೇ ಕ್ಲಾಸಿನಲ್ಲಿರುವಾಗ ತಟಪಟ ತನಿಯಪ್ಪ ಎಂದು ಇತ್ತು. ಮಳೆ ಬರುತ್ತದೆ ಎಂಬುದಕ್ಕೆ ಮಳೆಯನ್ನು ಯಾವರೀತಿ ಹೇಳಬೇಕು ಮಕ್ಕಳಿಗೆ?

ಶ್ರೀ ಕುಂಬ್ಳೆ ಸುಂದರರಾವ್:- ಹನಿಯಪ್ಪ.

ಶ್ರೀ ಎಂ.ವೀರಪ್ಪಮೊಯಿಲಿ:- ಹನಿಯಪ್ಪನೋ ತನಿಯಪ್ಪನೋ ಏನೋ ಇತ್ತು. ಮಳೆ ತಟಪಟ ಬೀಳುತ್ತದೆಯಲ್ಲ ಅದಕ್ಕೆ ತಟಪಟ ತನಿಯಪ್ಪ ಎಂದು ಇತ್ತು. ಹನಿಯಪ್ಪ ಎಂದರೆ ಮತ್ತೊಬ್ಬರು ಕೋಪ ಮಾಡಿಕೊಳ್ಳುತ್ತಾರೆ. ತನಿಯಪ್ಪ ಅವರು ಕೋಪ ಮಾಡಿಕೊಳ್ಳುತ್ತಾರೆ.

ಅದೇ ಪ್ರಕಾರ ಲಟಪಟ ಆಚಾರಿ ಎಂದರೆ ಅಪಹಾಸ್ಯ ಮಾಡಲಿಕ್ಕೆ ಅಲ್ಲ. ಲಟಪಟ ಮಾಡುವವರು ಆಚಾರಿ ಎಂದರೆ ಪ್ರೊಫೆಷನ್ ಅದು. ಹೊಡೆಯುವಂಥ ಸೌಂಡ್.

ಶ್ರೀ ಕಾಗೋಡು ತಿಮ್ಮಪ್ಪ:- ಲಟಪಟ ಅಂದರೆ ದೇಹದಲ್ಲಿ ಹೆಚ್ಚು ಕೆಲಸ ಇರುವುದಿಲ್ಲ ಅಂತ ಅವ ಅಲ್ಲಿ ಹೋಗುತ್ತಾನೆ. ಇಲ್ಲಿ ಬರುತ್ತಾನೆ ಎಂದು.

ಶ್ರೀ ಡಿ.ವಿ.ಸದಾನಂದ ಗೌಡ:- ಆಚಾರಿಯಲ್ಲಿ ಸಲಕರಣೆಗಳಿರುತ್ತವೆ. ಸಲಕರಣೆಯನ್ನು ಉಪಯೋಗ ಮಾಡುವಾಗ ಶಬ್ದ ಬರುತ್ತೆದೆ. ಯಾವುದೇ ಆಚಾರಿಗಳು ಬಡಿಯುವಾಗ ಶಬ್ದ ಬರುತ್ತದೆ. ಅದಕ್ಕೆ ಲಟಪಟ ಎಂದು ಹೇಳುವುದು.

ಶ್ರೀ ಎಂ.ವೀರಪ್ಪ ಮೊಯಿಲಿ:- ಡಾಕ್ಟರ್ ಶಿವರಾಮ ಕಾರಂತರಷ್ಟು ಅಪ್ಪಟ ಜಾತ್ಯಾತೀತವಾದಿ ಸೆಕ್ಯೂಲರ್ ಸಾಹಿತಿ ಮತ್ತೊಬ್ಬರು ಸಿಗಲಾರರು. ತಾವೂ ಒಪ್ಪುತ್ತೀರಿ. ಅವರ ಇತಿಹಾಸ ಹಾಗೆ ಇದೆ. ಅವರು ಬ್ರಾಹ್ಮಣರಾದರೂ ನಾನು ಬ್ರಾಹ್ಮಣ ಎಂದು ಯಾವಾಗಲೂ ಹೇಳಿಕೊಂಡಿಲ್ಲ. ಅವರ ಧ್ಯೇಯಗಳಿಗಾಗಿ ಹೋರಾಟ ಮಾಡುವವರಲ್ಲ. ಅಂಥ ಸೆಕ್ಯೂಲರ್ ಪರ್ಸನ್ ಅವರು. ಆದ್ದರಿಂದ ಒಂದು ಜಾತಿಯನ್ನು ಅವಮಾನ ಮಾಡುವವರಲ್ಲ ಅವರು. ಲಟಪಟ ಆಚಾರಿ ಎಂದರೆ ಲಟಪಟ ಸೌಂಡ್ ಆಗುತ್ತದೆ ಎಂದು. ಮಕ್ಕಳಿಗೆ ಗೊತ್ತಾಗಬೇಕಲ್ಲ. ಮಕ್ಕಳಿಗೆ ಒಂದು ರೀತಿ ಕಮ್ಯುನಿಕೇಷನ್. ಸೈನ್ಸ್ ಆಫ್ ಟೀಚಿಂಗ್. ಇದು ಅದರಲ್ಲಿ ಬರುತ್ತದೆ. ಮಕ್ಕಳಿಗೆ ತಕ್ಷಣ ಯಾವ ರೀತಿಯಲ್ಲಿ ಹೊಳೆಯಬೇಕು, ಅಕ್ಷರಾಭ್ಯಾಸ ಯಾವರೀತಿಯಲ್ಲಿ ಆಗಬೇಕು ಎಂಬುದಕ್ಕೆ ಒಂದು ಸಿಸ್ಟಂ ಇದೆ. ಏಕೆಂದರೆ ಇವತ್ತು ಯಾವುದೇ ಒಂದು ಪಠ್ಯಪುಸ್ತಕ ನೀವು ಮಾಡಬೇಕಾದರೂ ಕೂಡ that has to fall in line with the ICSC and CBSE standard in introducing to the child vocabulary syllabi of system of teaching ಇದಕ್ಕೆ ಹೊಂದಿಕೊಂಡು ಇದೆ ಅದು. rather than the orthodox and non-conventional system of teaching the word syllabi system I followed at present by the Kannada Bharathi text which is now being taught only in Karnataka State.

ಕನ್ನಡ ಭಾರತಿ ಬಗ್ಗೆ ಅದನ್ನು ಅಧ್ಯಯನ ಮಾಡಿಸಿ. ಏಕೆಂದರೆ ಇವತ್ತು ಯಾವ ಸ್ಟೇಜ್‌ನಲ್ಲೂ ಕೂಡ that means we are running away from the mainstreem of the teaching syllabi. ಮೈನ್ ಸ್ಟ್ರೀಮ್ ಏನಿದೆ ದೇಶದ್ದು ಅದರಿಂದ ಹೊರಗೆ ಬರುವ ಪರಿಸ್ಥಿತಿ ಬರಬಾರದು. ಇದು ಬರೀ ಒಬ್ಬರ ಟೆಕ್ಸ್ಟ್‌ಬುಕ್ ಪ್ರಶ್ನೆ ಅಲ್ಲ ಶಿವರಾಮ ಕಾರಂತರದು. ಆದರೆ ಇವತ್ತು ಏನು ವ್ಯವಸ್ಥೆ, ಯಾವ ಸಿದ್ಧಾಂತವನ್ನು ನಾವು ಹೊಸ ಶಿಕ್ಷಣ ನೀತಿಯಲ್ಲಿ ನಮೂದಿಸಿದ್ದಾರೆ ಇಡೀ ದೇಶಕ್ಕೆ ಕರ್ನಾಟಕ ರಾಜ್ಯ ಅದರಿಂದ ಕವಲುದಾರಿಯನ್ನು ಪಡೆಯಬಾರದು. ಇದರ ಬಗ್ಗೆ ತಾವು ತಕ್ಷಣ ನಿರ್ಣಯ ತೆಗೆದುಕೊಳ್ಳಬೇಕೆಂದು ಹೇಳುತ್ತಿಲ್ಲ. Please conduct a proper study.. ಇದರ ಬಗ್ಗೆ ಸಂಶೋಧನೆ ಮಾಡಿ, ಇಂತಹ ವರ್ಕ್‌ಶಾಪ್‌ಗಳನ್ನು ಮಾಡಿ. ಎಲ್ಲ ಅಭ್ಯಾಸ ಮಾಡಿದ ಮೇಲೆ ''ಓದುವ ಆಟವನ್ನು'' ನಾವು ಎಕ್ಸ್‌ಪೆರಿಮೆಂಟಲ್ ಬೇಸಿಸ್‌ನಲ್ಲಿ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡದಲ್ಲಿ ಇಂಟ್ರಡ್ಯೂಸ್ ಮಾಡಿದೆವು. ಈ ದೃಷ್ಟಿಕೋನದಿಂದ ಇದನ್ನು ಮಾಡಿದ ಕಾರಣದಿಂದ ಇದರ ಬಗ್ಗೆ ತಾವು

ವಿಚಾರ ಮಾಡಬೇಕು. ತಾವು ಬಹುಶಃ ಇದರ ಬಗ್ಗೆ ವಿಚಾರ ಮಾಡಲಿಲ್ಲವೋ ಏನೋ ಗೊತ್ತಾಗುತ್ತಿಲ್ಲ. ಶಾಲಾ ಮಕ್ಕಳಿಗೆ ಮಧ್ಯಾಹ್ನದ ಊಟದ ಬಗ್ಗೆ ಕೇಂದ್ರ ಸರ್ಕಾರ ಯೋಜನೆ ಮಾಡಿದ್ದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಏನು ಕ್ರಮ ಕೈಗೊಂಡಿದ್ದೀರಿ ಎಂಬ ವಿಚಾರವನ್ನು ತಾವು ದಯಮಾಡಿ ನಮಗೆ ಹೇಳಬೇಕೆಂದು ನಾನು ತಮ್ಮ ಹತ್ತಿರ ವಿಶೇಷವಾಗಿ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಉನ್ನತ ಶಿಕ್ಷಣಕ್ಕೆ ಸಂಬಂಧ ಪಟ್ಟ ವಿಚಾರ. ನವನೀತರಾವ್ ಕಮೀಷನ್ ಎಂದು ಹೇಳಿ ನಮ್ಮ ರಾಜ್ಯಪಾಲರು ಕಮಿಷನ್‌ನ್ನು ಅಪಾಯಿಂಟ್ ಮಾಡಿದ್ದಾರೆ. ಆ ಸಮಿತಿಯವರು ವರದಿಯನ್ನು ಸಹ ಕೊಟ್ಟಿದ್ದಾರೆ. ಅದು ಕ್ಯಾಬಿನೆಟ್‌ಗೆ ಬಂದ ನಂತರ ಅದಕ್ಕೆ ನಾವು ಸಂಪುಟದಲ್ಲಿ ನಿರ್ಣಯ ತೆಗೆದುಕೊಂಡಿದ್ದೆವು. ಸಬ್ಜೆಕ್ಟ್ ಕಮಿಟಿಯವರೂ ಸಹ ಅದರ ಪರಿಶೀಲನೆ ಮಾಡಿದ್ದಾರೆ. ಈ ಕಮಿಷನ್‌ರವರು ಮುಖ್ಯವಾಗಿ ಅನೇಕ ಅಂಶಗಳನ್ನು ಅಭ್ಯಾಸ ಮಾಡಿ, ಏಕೆಂದರೆ Novaneethan he is one of the best academicians available in the country. ಅನೇಕ ಸಂಶೋಧಕರು, ಅನೇಕ ಶಿಕ್ಷಣ ತಜ್ಞರು ಈ ಸಮಿತಿಯಲ್ಲಿ ಸೇರಿದ್ದಾರೆ. ಬಹಳ ಪ್ರಾಮುಖ್ಯವಾದಂಥ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಇಲ್ಲಿ ಸುಮಾರು 20 ಅಂಶಗಳನ್ನು ತಮ್ಮ ವಿಷಯ ಸಮಿತಿಯಲ್ಲಿ ಕೂಡ ಅವರು ಕಾಣಿಸಿದ್ದಾರೆ 1995-96ನೇ ಅಕಾಡೆಮಿಕ್ ವರ್ಷದಿಂದ ತಾವು ಅದನ್ನು ಅನುಷ್ಠಾನಕ್ಕೆ ತರುತ್ತೀರಿ ಎಂಬ ಆಸೆ ನನಗಿತ್ತು. ಅನುಷ್ಠಾನ ಮಾಡಬೇಕು ಎಂಬ ಉದ್ದೇಶ ನನಗೂ ಇತ್ತು. ಆದರೆ ಇಂದು ಈ ಬಗ್ಗೆ ತಾವು ಏನೂ ಕೆಲಸ ಮಾಡಲಿಲ್ಲ. ಅಧಿಕಾರಿಗಳದ್ದು ಪರಿಶೀಲನಾ ಸಮಿತಿ ಏನು ಮಾಡಿದ್ದೀರಿ, ಅವರೂ ಕೂಡ ಈ ಬಗ್ಗೆ ವಿಶೇಷವಾದಂಥ, ಒಂದು ಗಂಭೀರವಾದ ಒಂದು ಯೋಚನೆ ಕೂಡ ಮಾಡಿದಂಥ ಪ್ರಸಂಗ ಇವತ್ತು ನಮಗೆ ಕಾಣುತ್ತಿಲ್ಲ.

(ಈ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ನವನೀತರಾವ್ ಅವರ ಅಧ್ಯಕ್ಷತೆಯಲ್ಲಿ ಏನು ಒಂದು ಕಮಿಟಿ ಆಗಿದೆ, ಮುಖ್ಯವಾಗಿ ಬೆಂಗಳೂರು ವಿಶ್ವವಿದ್ಯಾಲಯವನ್ನು ಯೂನಿಟರಿ ವಿಶ್ವವಿದ್ಯಾಲಯವನ್ನಾಗಿ ಮಾಡಬೇಕೆಂದು ಇದೆ. ನನಗೆ ಗೊತ್ತಿದ್ದ ಮಟ್ಟಿಗೆ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸುಮಾರು 320 ಕಾಲೇಜುಗಳು ಸೇರಿವೆ. ಸುಮಾರು ಮೂರರಿಂದ ಮೂರುವರೆ ಲಕ್ಷ ವಿದ್ಯಾರ್ಥಿ ವಿದ್ಯಾರ್ಥಿನಿಯರು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಬಹುಶಃ ಈ ಬೆಂಗಳೂರು ವಿಶ್ವವಿದ್ಯಾನಿಲಯ ಪ್ರಪಂಚದ ಅತಿ ದೊಡ್ಡ (ವಿಸ್ತಾರವಾದ) ವಿಶ್ವವಿದ್ಯಾನಿಲಯ. ಇದು ಈ ರೀತಿ ಮುಂದುವರೆಯುತ್ತಾ ಹೋದರೆ ಒಂದು ಸ್ಫೋಟನೆಯ ಪರಿಸ್ಥಿತಿ ಉದ್ಭವ ಆಗಬಹುದು. ಯಾವ ಶಿಕ್ಷಣವನ್ನು ಕೂಡ ಸರಿಯಾಗಿ ಕೊಡಲಿಕ್ಕೆ ಸಾಧ್ಯವಿಲ್ಲ. ಇದು ಇಷ್ಟು ಅನ್‌ವೀಲ್ಡಿ ಯೂನಿವರ್ಸಿಟಿ ಇದೆ. ಮೂರುವರೆ ಲಕ್ಷ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಮ್ಯಾನೇಜ್ ಮಾಡಿಕೊಂಡು ಸರಿಯಾದ ಶಿಕ್ಷಣ ಕೊಡಲಿಕ್ಕೆ ಖಂಡಿತವಾಗಿಯೂ ಸಾಧ್ಯವಾಗುವುದಿಲ್ಲ. ಈ ವಿಶ್ವವಿದ್ಯಾಲಯವನ್ನು ರೂರಲ್ ಯೂನಿಟರಿ ಮತ್ತು ರೂರಲ್ ಯೂನಿವರ್ಸಿಟಿ ಎಂದು ಬೈಫರ್‌ಕೇಟ್ ಮಾಡಬೇಕೆಂದು ಸಮಿತಿಯವರು ಸಲಹೆ ಕೊಟ್ಟಿದ್ದಾರೆ. ಮುಖ್ಯವಾಗಿ ಹೊಸ ವಿಶ್ವವಿದ್ಯಾಲಯವನ್ನು ಮಾಡಬೇಕೆಂದು ಸಹ ಅವರು ಸೂಚನೆ ಕೊಟ್ಟಿದ್ದಾರೆ. ಒಂದು ಕರ್ನಾಟಕ ಮುಕ್ತ ವಿಶ್ವವಿದ್ಯಾಲಯ ಅಂತ ಹೇಳಿ. ಇದಕ್ಕೆ ಜಾಯಿಂಟ್ ಸೆಲೆಕ್ಟ್ ಕಮಿಟಿ ಎಂದು ರಚನೆ ಆಗಿತ್ತು. ಈ ಕಮಿಟಿ ಇಡೀ ದೇಶ ಸಂಚಾರ ಮಾಡಿ ತನ್ನ ವರದಿ ಕೊಟ್ಟಿತ್ತು. ಅನೇಕ ರಾಜ್ಯಗಳಲ್ಲಿ ಮುಕ್ತ ವಿಶ್ವವಿದ್ಯಾಲಯವನ್ನು ಪ್ರಾರಂಭ

ಮಾಡಿದ್ದಾರೆ. ಇಲ್ಲಿ ಮುಕ್ತ ವಿಶ್ವವಿದ್ಯಾಲಯ ಪ್ರಾರಂಭ ಮಾಡುವುದಕ್ಕೆ, ನನಗೆ ಗೊತ್ತಿದ್ದ ಪ್ರಕಾರ ನಾವು ಇಲ್ಲಿ ಕಾನೂನು ಕೂಡ ತಯಾರು ಮಾಡಿದ್ದೆವು. ಈ ಸದನದಲ್ಲಿ ಆ ಕಾನೂನನ್ನು ಮಂಜೂರು ಮಾಡಿದ್ದೆವು. ಬಹುಶಃ ಆ ಸದನದಲ್ಲೂ ಕೂಡ ಆಗಿರಬೇಕೆಂದು ನನ್ನ ಆಲೋಚನೆ. ಇದು ಡಾ॥ ಅಂಬೇಡ್ಕರ್ ಮುಕ್ತವಿಶ್ವವಿದ್ಯಾಲಯ ಎಂದು ಹೇಳಿ ಕಾನೂನಿನಲ್ಲಿ ನಾವು ಅಳವಡಿಸಿದ್ದೆವು. ಅದೂ ಕೂಡ ತಾವು ಪ್ರಾರಂಭ ಮಾಡಲಿಕ್ಕೆ ಏನೂ ಹೆಜ್ಜೆ ತೆಗೆದುಕೊಂಡ ಹಾಗೆ ಕಾಣುತ್ತಿಲ್ಲ. ತಾವು ಪ್ರಾರಂಭ ಮಾಡಲಿಕ್ಕೆ ಕ್ರಮ ತೆಗೆದುಕೊಂಡಿದ್ದರೆ ದಯಮಾಡಿ ಉತ್ತರ ಕೊಡುವಾಗ ಹೇಳಬೇಕು. ಇನ್ನೊಂದು ಬಹಳ ಪ್ರಾಮುಖ್ಯವಾದುದು ಎಂದರೆ ಆರೋಗ್ಯ ಮತ್ತು ವೈದ್ಯಕೀಯ ವಿಜ್ಞಾನ ವಿಶ್ವವಿದ್ಯಾಲಯ. ಅದಕ್ಕೆ ರಾಜೀವ್ ಗಾಂಧಿ ಆರೋಗ್ಯ ಮತ್ತು ವೈದ್ಯಕೀಯ ವಿಜ್ಞಾನ ವಿಶ್ವವಿದ್ಯಾಲಯ ಎಂದು ಹೇಳಿ ನಾವು ಹೆಸರು ಕೂಡ ಕೊಟ್ಟಿದ್ದೆವು. ಈ ವಿಶ್ವವಿದ್ಯಾಲಯವನ್ನು ಮಾಡಬೇಕೆಂದು ಈ ಸದನದಲ್ಲಿ ಮತ್ತು ಆ ಸದನದಲ್ಲಿ ಇದಕ್ಕೆ ಸಂಬಂಧಪಟ್ಟ ಕಾನೂನು ಆಗಿದೆ. ಇದಕ್ಕೆ ಒಬ್ಬರು ವಿಶೇಷ ಅಧಿಕಾರಿಯನ್ನು ನಾವು ನೇಮಕ ಮಾಡಿದ್ದೆವು. ವಿಶೇಷ ಅಧಿಕಾರಿಯನ್ನು ನೇಮಕ ಮಾಡಿದ್ದರಿಂದ ಇವತ್ತು ಈ ಸರ್ಕಾರಕ್ಕೆ ಒಂದು ನಯಾ ಪೈಸೆ ಕೂಡ ಖರ್ಚು ಇಲ್ಲ, it will be a self financing university ಎಂದು ಹೇಳಿ ಅವರು ಸಂಪೂರ್ಣವಾಗಿ ಅಧ್ಯಯನ ಮಾಡಿ ವರದಿ ಕೊಟ್ಟಿದ್ದಾರೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟಿದ್ದರಿಂದ. ಇದು ಹೆಲ್ತ್‌ಗೂ ಕೂಡ ಬರಬಹುದು. ಇದನ್ನು ಕೂಡ ನವನೀತರಾವ್ ಕಮಿಷನ್‌ರವರು ರೆಕಮಂಡ್ ಮಾಡಿದ ಕಾರಣ ಈ ಪ್ರಶ್ನೆ ಇಲ್ಲಿ ಎತ್ತಬಹುದು ಎನ್ನುವ ಉದ್ದೇಶದಿಂದ ನಾನು ಇವತ್ತು ಎತ್ತಿದ್ದೇನೆ. ಇದರ ಬಗ್ಗೆ ಮೆಡಿಕಲ್ ಎಜ್ಯುಕೇಶನ್ ಸಚಿವರು ಕೂಡ ಅಧ್ಯಯನ ಮಾಡಿ ಅವರು Deputy chairman of the planning commissionಗೂ ಕೂಡ ಬರೆದಿದ್ದಾರೆ. ಇದರ ಬಗ್ಗೆ ತಮ್ಮ ಅಭಿಪ್ರಾಯ ಏನು ಎಂದು ಹೇಳಿ. ಅವರೂ ಕೂಡ ಇದು ಬಹಳ ಉತ್ತಮವಾದಂಥ ಆಲೋಚನೆ, ಇದನ್ನು ಮಾಡಬೇಕೆಂದು ಹೇಳಿ ಅದಕ್ಕೆ ಶಿಫಾರಸ್ಸು ಕೂಡ ನಿಮ್ಮ ಸರ್ಕಾರಕ್ಕೆ ಮಾಡಿದ್ದಾರೆ. ಇಂಥ ಒಂದು ವಿಶ್ವವಿದ್ಯಾನಿಲಯವನ್ನು ಮಾಡಬೇಕೆಂದು ನಮ್ಮ ಹಿರಿಯರಾದಂಥ ದಿವಂಗತ ಸಿದ್ದವೀರಪ್ಪನವರು, ಅವರು ಆರೋಗ್ಯ ಮಂತ್ರಿಗಳಾಗಿದ್ದಾಗ ಪ್ರಸ್ತಾಪಿಸಿದ್ದರು, ಅವರಿಗೆ ಬಹಳ ಆಶೆ ಇತ್ತು. ಈ ಹಿಂದೆ ಮಾನ್ಯ ಹೆಗ್ಗಡೆಯವರು ಮುಖ್ಯಮಂತ್ರಿ ಆಗಿದ್ದಾಗ ಈ ಸದನದಲ್ಲಿ ಇಂತಹ ಒಂದು ವಿಶ್ವವಿದ್ಯಾನಿಲಯವನ್ನು ಮಾಡಬೇಕೆಂದು ಒಂದು ಬಿಲ್ ಬಂದಿತ್ತು. ಅದು ಇಲ್ಲಿ ಪಾಸ್ ಆಯಿತು. ಮೇಲ್ಮನೆಗೆ ಆ ಬಿಲ್ ಹೋಯಿತು. ಆ ಸಂದರ್ಭದಲ್ಲಿ ಯಾರೋ ಒಬ್ಬರು ಮೆಡಿಕಲ್ ಕಾಲೇಜಿನವರಿಗೆ ಮುಂದೆ ನಮಗೇನಾದರೂ ತೊಂದರೆಯಾಗಬಹುದೆಂದು ಆ ಬಿಲ್‌ನ್ನು ಪಾಸ್ ಆಗುವುದಕ್ಕೆ ಬಿಡಲಿಲ್ಲ. ವಿಧಾನಪರಿಷತ್ತಿನಲ್ಲಿ ಹಾಗೆಯೇ ಸ್ಟಾಪ್ ಆಯಿತು. ಆ ಮೇಲೆ ಸೆಪರೇಟಾಗಿ ಎಲ್ಲಾ ವಿಷಯವನ್ನು ಅಳವಡಿಸಿ ಪುನಃ ಇದನ್ನು ಇಂಟ್ರಡ್ಯೂಸ್ ಮಾಡಿದೆವು. ಆನಂತರ ಆ ಬಿಲ್ ವಿಧಾನಸಭೆ ಮತ್ತು ವಿಧಾನಪರಿಷತ್ತು ಎರಡು ಕಡೆಯಲ್ಲೂ ಪಾಸ್ ಆಯಿತು. ಅದಕ್ಕೆ ಮಾನ್ಯ ರಾಜ್ಯಪಾಲರ ಅಂಕಿತ ಕೂಡ ದೊರಕಿತು, It has become an Act.. ಇದು ಮೆಡಿಕಲ್ ಯೂನಿವರ್ಸಿಟಿಯದು. ಆದ್ದರಿಂದ ಈ ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡುವುದಕ್ಕೆ ಏಕೆ ತಡಮಾಡುತ್ತೀರಿ? ಇಷ್ಟೆಲ್ಲ ಗೊಂದಲಗಳು ಇವತ್ತು ಎಜ್ಯುಕೇಶನ್‌ನಲ್ಲಿ ಇರುವಾಗ, ಮತ್ತು ಕ್ವಾಲಿಟಿ ಆಫ್ ಎಜ್ಯುಕೇಶನ್ ಇವತ್ತು ಸಿಗಬೇಕೆಂದು ಇರುವಾಗ ಅದೂ ಕೂಡ The Karnataka should be a

modal one ಇದಕ್ಕೆ ಯು ಜಿ ಸಿ ಯವರು ಒಪ್ಪಿದ್ದಾರೆ. ಫಂಡಿಂಗ್ ಏಜೆನ್ಸಿ, ಆಲ್ ಇಂಡಿಯಾ ಮೆಡಿಕಲ್ ಅಸೋಸಿಯೇಸನ್ ರವರು ಒಪ್ಪಿದ್ದಾರೆ. ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನವರು ಒಪ್ಪಿದ್ದಾರೆ. ಈ ವಿಶ್ವವಿದ್ಯಾನಿಲಯ ಕರ್ನಾಟಕದಲ್ಲಿ ಆಗಲೇಬೇಕು ಎಲ್ಲಾ ಬಾಡೀಸನ್‌ವರು ಒಪ್ಪಿದ್ದಾರೆ. It should be an ideal university ಆಗಬೇಕೆಂದು ಹೇಳಿದಾಗ.....

ಶ್ರೀ ಕಾಗೋಡು ತಿಮ್ಮಪ್ಪ:- ಕೆಲವು ತಜ್ಞರ ಅಭಿಪ್ರಾಯದಲ್ಲಿ ಒಂದು ವಿಶ್ವವಿದ್ಯಾನಿಲಯ ಎಂದು ಹೇಳಿದರೆ ಅದರಲ್ಲಿ ಎಲ್ಲಾ ಫ್ಯಾಕಲ್ಟೀಸ್ ಇರಬೇಕು. ಇಂಜಿನಿಯರಿಂಗ್, ವೈದ್ಯಕೀಯ ಇನ್ನಿತರ ಎಲ್ಲಾ ಫ್ಯಾಕಲ್ಟೀಸ್ ಇರಬೇಕು. ಹಾಗಿದ್ದರೇನೇ ಅದು ಒಂದು ವಿಶ್ವವಿದ್ಯಾನಿಲಯ ಎಂದು ಅನಿಸಿಕೊಳ್ಳುತ್ತದೆ. ಇಲ್ಲದೇ ಹೋದರೆ ಮೆಡಿಕಲ್ ಎಜ್ಯುಕೇಶನ್, ಟೆಕ್ನಿಕಲ್ ಎಜ್ಯುಕೇಶನ್ ಅನಂತರ ಹಿಸ್ಟರಿ, ಬಯಾಲಜಿ ಹೀಗೆ ಪ್ರತಿಯೊಂದಕ್ಕೂ ಬೇರೆ ಬೇರೆ ವಿಶ್ವವಿದ್ಯಾನಿಲಯ ಆಗಬೇಕೆಂದು ಹೇಳಿದರೆ ನಾಳೆ ಈ ವಿಶ್ವವಿದ್ಯಾನಿಲಯಕ್ಕೆ ಏನು ಬೆಲೆ ಉಳಿಯುತ್ತದೆ ಎನ್ನುವ ಪ್ರಶ್ನೆ ಉದ್ಭವವಾಗುತ್ತದೆ. ಏಕೆಂದರೆ ನಾನು ಕೆಲವರಲ್ಲಿ ಇದರ ಬಗ್ಗೆ ವಿಚಾರ ಮಾಡಿದಾಗ ಈ ಅಭಿಪ್ರಾಯವನ್ನು ಕೊಟ್ಟರು. ಅದೇನೆಂದರೆ ಒಂದು ವಿಶ್ವವಿದ್ಯಾಲಯ ಎಂದು ಹೇಳಿದರೆ ಅದರಲ್ಲಿ ಎಲ್ಲಾ ಫ್ಯಾಕಲ್ಟೀಸ್ ಇದ್ದರೆ ಅದು ಸುಂದರವಾಗಿ ಮತ್ತು ಅತ್ಯಂತ ಸಂಪದ್ಭರಿತವಾಗಿ ಬೆಳೆಯುತ್ತದೆ.

ಅಧ್ಯಕ್ಷರು:- ಪೊರ್ಟ್‌ಫೋಲಿಯೊ ಹಂಚಿಕೆ ಮಾಡುವಾಗ ಎಜ್ಯುಕೇಶನ್‌ಗೆ ಮಾಡುತ್ತಾರೆ ನೋಡಿ ಅಡಲ್ಟ್ ಎಜ್ಯುಕೇಶನ್, ಟೆಕ್ನಿಕಲ್ ಎಜ್ಯುಕೇಶನ್, ಮೆಡಿಕಲ್ ಎಜ್ಯುಕೇಶನ್, ಹೈಯರ್ ಎಜ್ಯುಕೇಶನ್, ಲೋಯರ್ ಎಜ್ಯುಕೇಶನ್, ಪ್ರೈಮರಿ ಎಜ್ಯುಕೇಶನ್, ಕಂಪಲ್ಸರಿ ಎಜ್ಯುಕೇಶನ್ ಹಾಗೆ......

ಶ್ರೀ ಎಂ.ವೀರಪ್ಪ ಮೊಯಿಲಿ: ತಾವು ಹೇಳತಕ್ಕಂಥಾದ್ದು it is an old thinking. The present thinking even in the U.G.C. ದಿವಸ ಹೋದಂತೆ Globle system of educationಗೆ ಇವತ್ತು ಕೆಲವು ಸ್ಪೆಸಿಲೈಶೇಷನ್ ಮಾಡಬೇಕಾಗುತ್ತದೆ. ಇವತ್ತು ಬಹಳ ಮುಂದೆ ಹೋಗಿ ಇನ್‌ಸ್ಟಿಟ್ಯೂಟ್ ಕನ್‌ಸೆಪ್ಟ್ ಬರಬೇಕೆಂದು ಹೇಳತಕ್ಕಂಥ ಮಾತು ಕೂಡ ಈಗ ಬರುತ್ತದೆ. ವಿಶ್ವವಿದ್ಯಾನಿಲಯಗಳು ಬೇಡ. ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾದಲ್ಲಿ ಅನೇಕ affiliated ಕಾಲೇಜುಗಳು ಇರುವುದಿಲ್ಲ. ಒಂದೇ. that itself is an university. ಈಗ ಡೀಮ್ಡ್ ಯೂನಿವರ್ಸಿಟಿ ಕಾನ್‌ಸೆಪ್ಟ್ ಕೂಡ ಬಂದಿದೆ. ಆದ್ದರಿಂದ ಕನ್‌ಸೆಪ್ಟ್ ಬದಲಾವಣೆ ಆಗುತ್ತಾ ಹೋಗುತ್ತದೆ. ಇವತ್ತು ನಾವು ಡಾ: ನರಸಿಂಹಯ್ಯನವರ ಕಮಿಟಿ ಮಾಡಿದ್ದೇವೆ. ಅವರೂ ಕೂಡ ಶಿಫಾರಸ್ಸು ಮಾಡಿದ್ದಾರೆ. ಎಲ್ಲಾ ಸಮಿತಿಯವರು ಶಿಫಾರಸ್ಸು ಮಾಡಿ, ನಾವು ಇವತ್ತು ಮಸೂದೆ ಮಾಡಿರುವಾಗ ಏಕೆ ತಾವು ತಡಮಾಡುತ್ತೀರಿ ಎನ್ನುವುದನ್ನು ತಾವು ದಯಮಾಡಿ ಹೇಳಬೇಕಾಗುತ್ತದೆ. ಏಕೆಂದರೆ ಇದು ಯುನಿವರ್ಸಿಟಿ ಬೈಫರ್‌ಕೇಶನ್‌ಗೆ ಸಂಭಂಧಪಟ್ಟದ್ದು. ಮತ್ತು ಇಂಪ್ಲಿಮೆಂಟೇಷನ್ ನವನೀತರಾವ್ ಕಮಿಷನ್‌ಗೆ ಸಂಬಂಧಪಟ್ಟಂಥ ವಿಚಾರವಾಗಿದೆ. ಇನ್ನೊಂದು ತಾಂತ್ರಿಕ ವಿಶ್ವವಿದ್ಯಾನಿಲಯ. ಡಾ|| ವಿಶ್ವೇಶ್ವರಯ್ಯ ಟೆಕ್ನಿಕಲ್ ಯೂನಿವರ್ಸಿಟಿಯನ್ನು ಬೆಳಗಾಂನಲ್ಲಿ ಮಾಡಬೇಕೆಂದೂ, ಮತ್ತೆ ಮೆಡಿಕಲ್ ಯೂನಿವರ್ಸಿಟಿಯನ್ನು ಮೈಸೂರಿನಲ್ಲಿ ಮಾಡಬೇಕು ಎಂದು ನಾವು ಒಂದು

ನಿರ್ಣಯವನ್ನು ಕ್ಯಾಬಿನೆಟ್‌ನಲ್ಲಿ ಮಾಡಿದ್ದೇವೆ. ತಾಂತ್ರಿಕ ವಿಶ್ವವಿದ್ಯಾನಿಲಯವನ್ನು ಡಾ: ವಿಶ್ವೇಶ್ವರಯ್ಯನವರ ಹೆಸರಿನಲ್ಲಿ ಮಾಡುವುದು ಏನಿದೆ ಇದೂ ಕೂಡ ಅಷ್ಟೆ. we are the pioneers in the medical and engineering education ಆದ್ದರಿಂದ ಇಂತಹ ಕೆಲವು ಸಲಹೆಗಳು ಮಾತ್ರವಲ್ಲದೆ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ it is an important sugestion suggested by the University Grants Commission from time to time ಇದನ್ನು ಮಾಡಲೇಬೇಕೆಂದು ಅನೇಕ ಭಾರಿ ನಮಗೆ ಮ್ಯಾಂಡೇಟರಿ ಡೈರೆಕ್ಷನ್ ಕೂಡ ಯು.ಜಿ.ಸಿ.ಯವರು ಕಳುಹಿಸಿದ್ದು ಇದೆ. ಆದ್ದರಿಂದ ತಾವು ದಯಮಾಡಿ ಇದರ ಬಗ್ಗೆ ಇನ್ನು ಹೆಚ್ಚು ತಡಮಾಡದೆ, ಯಾವ ನವನೀತರಾವ್ ಕಮಿಷನ್ ವರದಿಯನ್ನು ಏನು ಕೊಟ್ಟಿದೆ, ಅದನ್ನು ದಯಮಾಡಿ ಅನುಷ್ಠಾನ ಮಾಡತಕ್ಕ ದೃಷ್ಟಿಯಲ್ಲಿ ಕ್ರಮ ಕೈಗೊಳ್ಳಬೇಕೆಂದು ನಾನು ಹೇಳಲಿಕ್ಕೆ ಅಪೇಕ್ಷೆ ಪಡುತ್ತಿದ್ದೇನೆ. ಇನ್ನೊಂದು ವಿಚಾರ ಪ್ರೊಫೆಸನಲ್ ಕಾಲೇಜ್ ಅಡ್ಮಿಷನ್ ಬಗ್ಗೆ, ಸಾಕಷ್ಟು ವಿವಾದಗಳು ಇವತ್ತು ಬರುತ್ತಾ ಇದೆ. ಸುಪ್ರೀಂ ಕೋರ್ಟ್ ಇದನ್ನು ಸಂಪೂರ್ಣವಾಗಿ ತನ್ನ ಒಂದು ತಹಬಂದಿಗೆ ತೆಗೆದುಕೊಂಡುಬಿಟ್ಟಿದೆ. ಈ ಒಂದು ವಿವಾದಕ್ಕೆ ಅಂತಿಮ ತೆರೆ ಎಳೆಯಬೇಕೆಂಬ ಉದ್ದೇಶದಿಂದಲೇ ಮಾನ್ಯ ಕೆ.ಈಶ್ವರ್ ಭಟ್, ಫಾರ್ಮರ್ ಲಾ-ಸೆಕ್ರೆಟರಿ, ಅವರ ಅಧ್ಯಕ್ಷತೆಯಲ್ಲಿ, ಒಂದು ಸಮಿತಿಯನ್ನು ಮಾಡಿದ್ದೇವೆ. ಆ ಸಮಿತಿಯ ಸದಸ್ಯರು ಯಾರ್‍ಯಾರೆಂದರೆ, ಡಾ: ಎನ್.ಆರ್.ಶೆಟ್ಟಿ, ವೈಸ್ ಚಾನ್ಸಲರ್, ಬೆಂಗಳೂರು ವಿಶ್ವವಿದ್ಯಾನಿಲಯ, ಡಾ.ಆರ್.ಎಂ.ವರ್ಮ, ಫಾರ್ಮರ್ ಡೈರೆಕ್ಟರ್, ನ್ಯಾಷನಲ್ ಇನ್ಸಿಟಿಟ್ಯೂಟ್ ಆಫ್ ಮೆಂಟಲ್ ಹೆಲ್ತ್ ಅಂಡ್ ನ್ಯೂರೋ ಸೈನ್ಸಸ್, ಬೆಂಗಳೂರು, ಈ 3 ಜನ ಸದಸ್ಯರ ಒಂದು ಸಮಿತಿಯನ್ನು ಮಾಡಿ ಅವರು ಇದರ ಬಗ್ಗೆ ಅಧ್ಯಯನ ಮಾಡಿದ್ದಾರೆ. ಅವರು ಅಧ್ಯಯನ ಮಾಡಿಕೊಂಡು ಒಂದು ಇಂಟೀರಿಯಮ್ ರಿಪೋರ್ಟ್‌ನ್ನು ನನಗನ್ನಿಸುತ್ತದೆ. ಮಾರ್ಚ್‌ಯಲ್ಲಿ ಕೊಟ್ಟಿರಬೇಕು. ಮಾರ್ಚ್ ಅಥವಾ ಏಪ್ರಿಲ್ ತಿಂಗಳ ಮೊದಲ ವಾರದಲ್ಲಿ ಇರಬೇಕು, ತಮಗೆ ಆ ಒಂದು ಇಂಟೀರಿಯಮ್ ರಿಪೋರ್ಟ್‌ನ್ನು ಕೊಟ್ಟಿದ್ದಾರೆ. ಅವರು ಇಂಟೀರಿಯಂ ರಿಪೋರ್ಟನ್ನು ಕೊಡತಕ್ಕ ಉದ್ದೇಶವೇನೆಂದರೆ, ತಾವು ಅಥವಾ ನಾವೂ ಕೂಡ ಈ ಬಗ್ಗೆ ತಕ್ಷಣ 1995-96 ಅಡ್ಮಿಷನ್ ಮೊದಲೇ ಈ ಬಗ್ಗೆ ಒಂದು ಶಾಸನ ತರಬೇಕು ಈ ಸದನದಲ್ಲಿ, ಶಾಸನ ತಂದು ಈ ರೀತಿಯ ದ್ವಂದ್ವಗಳಿಗೆ, ವಿವಾದಗಳಿಗೆ ಸಂಪೂರ್ಣ ತೆರೆಯನ್ನು ಹಾಕಬೇಕು ಎಂಬ ಉದ್ದೇಶದಿಂದ ಇಂಟೀರಿಯಂ ವರದಿಯನ್ನು ತಮಗೆ ಕೊಟ್ಟಿದ್ದಾರೆ. ಇಂಟೀರಿಯಂ ವರದಿ ಮಾತ್ರ ಅಲ್ಲ, ಯಾವ ರೀತಿಯ ಶಾಸನವನ್ನು ತರಬೇಕು ಎಂದು ಹೇಳಿ ಅವರು ಒಂದು ಡ್ರಾಫ್ಟ್ ಲೆಜಿಸ್ಲೆಷನ್ ಕೂಡ ಆ ಇಂಟೀರಿಯಂ ವರದಿಯ ಜೊತೆಯಲ್ಲಿ ಲಗತ್ತಿಸಿ ತಮಗೆ ಕಳುಹಿಸಿದ್ದಾರೆ. ತಾವು ಕೂಡ ಏನು ಅಭಿಪ್ರಾಯ ಒಟ್ಟಿನಲ್ಲಿ ಕೊಟ್ಟಿರಿ ಅಂದರೆ ತಕ್ಷಣ ಒಂದು ಸ್ಪೆಷಲ್ ಅಧಿವೇಶನವನ್ನು ಕರೆದು ನಾವು ಇದಕ್ಕೊಂದು ಕಾನೂನು ಮಾಡುತ್ತೇವೆ. ಕಾನೂನು ಮಾಡಿ ನಾವು ಇದಕ್ಕೊಂದು ತೀರ್ಮಾನ ಮಾಡುತ್ತೇವೆ ಎಂದು ಕೂಡ ನನಗನ್ನಿಸುತ್ತದೆ, ತಾವು ಹೇಳಿದ್ದೀರಿ. ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಬಹುಶಃ ಈ ಒಂದು ಶಾಸನವನ್ನು ನೀವು ತಂದಿದ್ದರೆ, ನಾವು ಇವತ್ತು ಇಲ್ಲಿ ಪಾಸ್ ಮಾಡಬಹುದಿತ್ತು. ಪಾಸ್ ಮಾಡಿದ್ದಿದ್ದರೆ, ಬಹುಶಃ ಈ ಗೊಂದಲವನ್ನು ನಾವು ಕಾಣುತ್ತಿರಲಿಲ್ಲ. ಇದನ್ನು ತಡಮಾಡಿದ್ದೀರಿ. ಇದರ ಎಲ್ಲಾ ರೀತಿಗೆ classification of private professional colleges for regulating admissions, admission to

professional colleges to be based on merits and entrance test, eligibility and qualification for the entrance test, competent authority, staff and servants of the competent authority, powers and functions of the competent authority, power to allocate students, admission to professional colleges permitted to hold separate entrance test, reservation of seats ಈ ಎಲ್ಲಾ gamut of situation ಇದಕ್ಕೆ ಒಂದು ಪರಿಹಾರವನ್ನು ಸೂಚಿಸತಕ್ಕ ಒಂದು ಸಮಗ್ರ ಶಾಸನ, ಆ ಒಂದು ಕರಡನ್ನು ಅವರು ಇಂಟೀರಿಯಂ ವರದಿಯ ಜೊತೆಯಲ್ಲಿ ತಮಗೆ ಕೊಟ್ಟಿದ್ದಾರೆ. it is a finely worded draft ಇದನ್ನು ಕೊಟ್ಟಿದ್ದನ್ನು ಇಲ್ಲಿಯವರೆಗೂ ಏನೂ ಮಾಡಿಲ್ಲ, ಇಲ್ಲಿಯವರೆಗೂ ಅದು ಕ್ಯಾಬಿನೆಟ್ಟಿಗೂ ತಂದ ಹಾಗೆ ಕಾಣಲಿಲ್ಲ. ಇಲ್ಲವೇ ಕ್ಯಾಬಿನೆಟ್‌ಗೆ ತಾವು ತರಬೇಕಾಗಿತ್ತು. ಇದರ ಬಗ್ಗೆ ಆಕ್ಷನ್ ತೆಗೆದುಕೊಳ್ಳಬೇಕಾಗಿತ್ತು. ಮತ್ತು ಒಂದು ಇಂಟೀರಿಯಂ ರಿಪೋರ್ಟ್ ಕೊಟ್ಟ ಮೇಲೆ ಆ ಸಮಿತಿ ಬರಕಾಸ್ತು ಆಗುವುದಿಲ್ಲ. ತಾವು ಏನು ಮಾಡಿದ್ದೀರಿ, ಇಂಟೀರಿಯಂ ರಿಪೋರ್ಟ್ ಕೊಟ್ಟದ್ದೇ ಸಾಕು ಆ ಸಮಿತಿಯನ್ನೇ ಬರ್‌ಕಾಸ್ತು ಮಾಡಿಬಿಟ್ಟಿದ್ದೀರಿ. ಒಂದು ವೇಳೆ ಆ ಸಮಿತಿಯಲ್ಲಿ ಇರುವ ಸದಸ್ಯರು ಆಗುವುದಿಲ್ಲ ಎಂದು ಹೇಳಿದರೂ ಕೂಡ ತಾವು ಮತ್ತೆ ಯಾರನ್ನಾದರೂ ತಮಗೆ ಬೇಕಾದವರನ್ನು ಆ ಸಮಿತಿಯ ಅಧ್ಯಕ್ಷರನ್ನಾಗಿ, ಸದಸ್ಯರನ್ನಾಗಿ ನೇಮಕ ಮಾಡಿ ಈ ಸಮಿತಿಗೆ ಒಂದು ಜೀವ ಕೊಡಬಹುದಿತ್ತು. ಅದನ್ನೂ ಬರ್‌ಕಾಸ್ತು ಮಾಡಿದ್ದೀರಿ. ಆದ್ದರಿಂದ ಈ ಕ್ಯಾಪಿಟೇಷನ್ ಫೀ ಹಾವಳಿಯನ್ನು ತಪ್ಪಿಸಲಿಕ್ಕೆ ವೃತ್ತಿ ಶಿಕ್ಷಣದಲ್ಲಿ ಒಂದು ರೀತಿಯ ಸ್ಟಾಂಡರ್ಡ್ ಅಥವಾ ಕ್ರಮ ಬದ್ಧತೆಯನ್ನು ತರತಕ್ಕ ಒಂದು ದಿಸೆಯಲ್ಲಿ ತಮಗೆ ನಿಜವಾದ ಪ್ರಾಮಾಣಿಕತೆ ಇದ್ದರೆ ದಯಮಾಡಿ ಇಂತಹ ಒಂದು ಲೆಜಿಸ್ಲೇಷನ್ ಅನ್ನು ತರಬೇಕಾಗುತ್ತದೆ. ಇದನ್ನು ಪಾಸು ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಪ್ರಾಮಾಣಿಕತೆ ಇದೆಯೋ ಇಲ್ಲವೋ ಎಂದು ಜನ ಅನುಮಾನ ಮಾಡಿಕೊಳ್ಳತಕ್ಕಂತಹ ರೀತಿಯಲ್ಲಿ ತಾವು ಖಂಡಿತವಾಗಿಯೂ ವರ್ತನೆ ಮಾಡಬಾರದು, ಅಂತ ಹೇಳಿ ನಾನು ಪ್ರತ್ಯೇಕವಾಗಿ ತಮ್ಮಲ್ಲಿ ವಿಚಾರಿಸುತ್ತಿದ್ದೇನೆ. ಏಕೆಂದರೆ, ಎಲ್ಲಿಯವರೆಗೆ ಈ ಅಡ್‌ಹಾಕಿಸಂ ಮುಂದುವರಿಸಿಕೊಂಡು ಹೋಗಲಿಕ್ಕೆ ಸಾಧ್ಯ ಇದೆ? ಮೊನ್ನೆ ತಾನೆ ಸುಪ್ರಿಂ ಕೋರ್ಟಿನಿಂದ ಆಜ್ಞೆ ಬಂತು. ಏಕೆಂದರೆ ರಾಜ್ಯದ ಹೊರಗಿನವರಿಗೂ ಕೂಡ ಅವಕಾಶ ಕೊಡಬೇಕು, ನ್ಯೂಸ್ ಪೇಪರ್‌ಗಳ ಮೂಲಕ ಅಡ್ವರ್‌ಟೈಸ್ ಮಾಡಬೇಕು ಎಂದು ತಾವು ಕೊಟ್ಟಿದ್ದೀರಿ. ಅದು ಬಂತು. ಈ ಅಡ್ಮಿಷನ್‌ಗಳ ಬಗ್ಗೆ ಆಗಾಗ ಸುಪ್ರಿಂ ಕೋರ್ಟ್ ಬೇರೆ ಬೇರೆ ತೀರ್ಪುಗಳನ್ನು ಕೊಡುತ್ತಾ ಬರುತ್ತದೆ. ಸುಪ್ರಿಂ ಕೋರ್ಟಿನವರು ಸಾಧಾರಣವಾಗಿ ಫೆಬ್ರವರಿ 95ರಂದು ಒಂದು ತೀರ್ಪನ್ನು ಕೊಟ್ಟಿದ್ದಾರೆ. ಆದೇನೆಂದರೆ, ಹೊರರಾಜ್ಯದವರಿಗೆ ಯಾವ ರೀತಿಯಲ್ಲಿ ಹಂಚಿಕೆಯನ್ನು ಮಾಡಲಿಕ್ಕೆ ಸಾಧ್ಯ ಇದೆ. ಎಂಬ ತೀರ್ಪನ್ನು ಕೊಡುವಾಗ ಅವರು ಸ್ಪಷ್ಟವಾಗಿ ಹೇಳಿದ್ದಾರೆ. principles of reciprosity ಅದನ್ನೇ ಅಡಾಪ್ಟ್ ಮಾಡಬೇಕು ಎಂದು ಹೇಳಿದ್ದಾರೆ.principles of reciprosity ಅಂದರೆ ಬೇರೆ ಯಾವ ರಾಜ್ಯದವರು it is a decision reported in JT 1995 (1) SC 61 ಜಡ್ಜ್‌ಮೆಂಟ್ ಟುಡೆ ಅಂತ ಹೇಳಿ ಅದರಲ್ಲಿ ರಿಪೋರ್ಟ್ ಆಗಿದೆ. 25-1-95 ರಲ್ಲಿ ಜಡ್ಜ್‌ಮೆಂಟ್ ಆಗಿದೆ. ನಾವು ಈಗ ಒಂದು ದೊಡ್ಡ ಸಂದಿಗ್ಧತೆಯಲ್ಲಿ ಎಂಬರಾಸ್‌ಮೆಂಟ್‌ನಲ್ಲಿ

ಸಿಕ್ಕಿಬಿದ್ದಿದ್ದೇವೆ. ಬಹುಶಃ ಸುಪ್ರಿಂ ಕೋರ್ಟಿನ ತೀರ್ಪನ್ನು ತಾವು ಮೊನ್ನೆ ಡಿವಿಜನ್ ಬೆಂಚ್ ಗಮನಕ್ಕೆ ತಂದಿದ್ದರೆ, you could have saved the State from this embarassment ಈಗ ರಾಷ್ಟ್ರದ ಎಲ್ಲರಿಗೂ ಸೀಟು ಕೊಡಬೇಕಾದಂತಹ ಪರಿಸ್ಥಿತಿ ಬಂತು. ಯಾರು ಸೀಟುಗಳನ್ನು ಕರ್ನಾಟಕ ರಾಜ್ಯದ ಮಕ್ಕಳಿಗೆ ಕೊಡುತ್ತಾರೆ, ಅಂತಹ ರಾಜ್ಯಗಳ ಮಕ್ಕಳಿಗೆ ಮಾತ್ರ ನೀವು ಸೀಟುಗಳನ್ನು ಕೊಡತಕ್ಕಂತಹದ್ದು ಒಂದು ಬಾಧ್ಯತೆ ಇದೆ ಎಂಬ ಒಂದು ತೀರ್ಪು ಕೊಡುವಾಗ principles of reciprosity ಅನ್ನು ತಾವು ಕೂಡ ಅಡಾಪ್ಟ್ ಮಾಡಿಕೊಂಡು ತಮ್ಮ ಜಿ.ಒ.ಎಗ್ಸಿಕ್ಯೂಟಿವ್ ಆರ್ಡರನ್ನು ಇಸ್ಯೂ ಮಾಡಿದ್ದರೆ ಈ ಎಂಬರಾಸ್‌ಮೆಂಟ್‌ಗೆ ಅವಕಾಶವಾಗುತ್ತಿರಲಿಲ್ಲ. ಇದು ಲೇಟೆಸ್ಟ್ ರೂಲಿಂಗ್. ಅದರ ಪ್ರತಿಯನ್ನು ಜೆರಾಕ್ಸ್ ಮಾಡಿ ತಮಗೆ ಕೊಡುತ್ತೇನೆ. Even now, I don't know whether you can do it now. Your office can examine. It is a Supreme Court ruling.

ಶ್ರೀ ಡಿ.ಮಂಜುನಾಥ್:- ಈಗ ನಾವು ಮಾಡಿದ್ದುದು ಏನೆಂದರೆ ಕರ್ನಾಟಕದ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ನಾವು ಒಂದು ನಿರ್ಣಯವನ್ನು ಮಾಡಿದ್ದೇವೆ. ಏಕೆಂದರೆ ನಮ್ಮ ಪಕ್ಕದ ರಾಜ್ಯಗಳಲ್ಲೂ ಸಹ ಇವತ್ತಿನ ತಮಿಳುನಾಡಿನಲ್ಲಿ ಬರೀ ತಮಿಳುನಾಡಿನ ವಿದ್ಯಾರ್ಥಿಗಳಿಗೆ ಮಾತ್ರ ಕೊಡುತ್ತಿದ್ದಾರೆ. ಆಂಧ್ರದಲ್ಲಿ ಬರೀ ಆಂಧ್ರದ ವಿದ್ಯಾರ್ಥಿಗಳಿಗೆ ಮಾತ್ರ ಕೊಡುತ್ತಿದ್ದಾರೆ, ಈ ಕಾಮನ್ ಎಂಟ್ರೆನ್ಸ್ ಟೆಸ್ಟ್. ಮಹರಾಷ್ಟ್ರದಲ್ಲಿ ಅವರು ಟೆಸ್ಟೇ ಮಾಡುವುದಿಲ್ಲ. ಪಿ.ಯು.ಸಿ.ಮಾರ್ಕ್ಸ್‌ನ ಆಧಾರದ ಮೇಲೆ ಸೀಟುಗಳನ್ನು ಕೊಡುತ್ತಿದ್ದಾರೆ. ನಾವೂ ಕೂಡ ಇದರ ಬಗ್ಗೆ ಯೋಚನೆ ಮಾಡುತ್ತಿದ್ದೇವೆ. ಕರ್ನಾಟಕ ರಾಜ್ಯದ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ನಾವು ಇವತ್ತು ಬರೀ ಕರ್ನಾಟಕದವರಿಗೆ ಅಂತ ಮಾಡಿದ್ದು ಕಾಮನ್ ಎಂಟ್ರೆನ್ಸ್ ಟೆಸ್ಟ್. ಅದರ ಮೇಲೆ ಸುಪ್ರೀಂಕೋರ್ಟಿನವರು ಈಗ 15 ಪರ್ಸೆಂಟ್ ಹೊರಗಡೆಯವರಿಗೆ ಕೊಡಬೇಕು ಎಂದು ಮಾಡಿದ್ದಾರೆ. 15 ಪರ್ಸೆಂಟ್ ಅಪ್ಲಿಕೇಶನ್ಸ್ ಕಾಲ್ ಫಾರ್ ಮಾಡಿದ್ದೇವೆ. ಆದರೂ ಅವರಿಗೆ ಈಗ ಟೆಸ್ಟ್ ಇಲ್ಲ only on the qualifying examination ಮಾತ್ರ ಲೆಕ್ಕಕ್ಕೆ ತೆಗೆದುಕೊಂಡು ಕೊಡಬೇಕು ಎಂದು ಮಾಡಿದ್ದೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಈ 15 ಪರ್ಸೆಂಟ್‌ನ್ನೂ ಪುಕ್ಕಟೆಯಾಗಿ ಕೊಡಲೇಬೇಕಲ್ಲ. ಏಕೆಂದರೆ, ನಮ್ಮ ಪಕ್ಕದ ರಾಜ್ಯಗಳಿಗೆ ಕೊಡುವುದಿಲ್ಲ. ಈ ಜಡ್ಜ್‌ಮೆಂಟ್ ಪ್ರಕಾರ ರೆಸಿಪ್ರೋಕಲ್ ಅಂದರೆ ನಾವು 10 ಪರ್ಸೆಂಟ್ ಕೊಟ್ಟರೆ ಅವರೂ 10 ಪರ್ಸೆಂಟ್ ಕೊಡಬೇಕು. ಅದು ಲಾಭ ಆಗುತ್ತದೆ. ಆದರೆ ಈಗ ಏನಾಗಿದೆ ಅಂದರೆ ನಾವು ದಾನ ಕೊಟ್ಟಹಾಗೆ. ಅವರು ಏನೂ ಕೊಡಲಿ ಕೊಡದೆ ಇರಲಿ ನಾವು ಮಾತ್ರ ಅವರಿಗೆ ಕೊಡಬೇಕು. ಅದಕ್ಕೆ ಈ ಜಡ್ಜ್‌ಮೆಂಟ್ ಪ್ರಕಾರ ತಾವು ನೋಡಿ.

ಶ್ರೀ ಡಿ.ಮಂಜುನಾಥ್:- ಅದಕ್ಕೆ ನಾವು ರಿವ್ಯೂ ಪಿಟೀಷನ್ ಹಾಕಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ:- ನಮ್ಮ ರಾಜ್ಯದ ವಿದ್ಯಾರ್ಥಿಗಳಿಗೆ ಸೀಮಿತಗೊಳಿಸಿ ಎಂಟ್ರೆನ್ಸ್ ಟೆಸ್ಟ್ ಮಾಡಿದ್ದರಿಂದ ಸುಪ್ರಿಂ ಕೋರ್ಟ್‌ನವರು ಆ ರೀತಿಯ ತೀರ್ಮಾನವನ್ನು ಕೊಟ್ಟಿದ್ದಾರೆ. ಈಗ ತಾವು ಹೇಳಿದಿರಿ, ತಮಿಳುನಾಡಿನಲ್ಲಿ ತಮಿಳುನಾಡಿನ ವಿದ್ಯಾರ್ಥಿಗಳಿಗೆ ಕೊಡುತ್ತಾರೆ,

ಆಂಧ್ರದಲ್ಲಿ ಆಂಧ್ರದ ವಿದ್ಯಾರ್ಥಿಗಳಿಗೆ ಕೊಡುತ್ತಾರೆ. ಎಂದು ಆ ರಾಜ್ಯಗಳ ತೀರ್ಮಾನವನ್ನು ಪ್ರಶ್ನೆ ಮಾಡಲಿಲ್ಲ. ಸುಪ್ರೀಂ ಕೋರ್ಟಿನವರು; ತೀರ್ಮಾನ ಕೊಡಲಿಲ್ಲ. ನಮ್ಮ ಮೇಲೆ ಏಕೆ ಕಣ್ಣು? ಏಕೆಂದರೆ ನಮ್ಮ ಕೇಸನ್ನು ಅಲ್ಲಿ ವಾದ ಮಾಡತಕ್ಕಂತಹ ಸಂದರ್ಭದಲ್ಲಿ ಏನು ನಡೆದಿದೆಯೋ? ಅಥವಾ ನಮ್ಮ ಕೇಸುಗಳನ್ನು ಸರಿಯಾಗಿ ಪ್ರತಿಪಾದನೆ ಮಾಡಿಲ್ಲವೋ? ಕರ್ನಾಟಕಕ್ಕೆ ಈ ರೀತಿ ಬೆನ್ನು ಹತ್ತಿರಬೇಕಾದರೆ ಇದಕ್ಕೆ ಏನು ಕಾರಣ ಅನುವುದನ್ನಾದರೂ ಕಂಡು ಹಿಡಿದಿದ್ದೀರಾ?

ಶ್ರೀ ಎಂ.ವೀರಪ್ಪ ಮೊಯಿಲಿ:- ತಾವು ಇನ್ನೂ ಕೂಡ ಆಲೋಚನೆ ಮಾಡಿ. ತಮಗೆ ಥೆದರಿಕೆ ಆಗಬಹುದು. ಕಂಟೆಮ್ಟ್ ಆಗುತ್ತದೆ. ಆದ್ದರಿಂದ ಏಕಪ್ಪ ಈ ಹುಸಾಬರಿ ಅಂತ. ಆದರೆ ಇನ್ನೂ ಕೂಡ after all this is a Supreme Court decision ಈ ಸುಪ್ರೀಂ ಕೋರ್ಟ್‌ನ ತೀರ್ಪಿನ ಪ್ರಕಾರ ತಾವು ಒಂದು ಜಿ.ಓ.ಇಷ್ಯೂ ಮಾಡಿ, ತಾವು ಲೀಗಲ್ಲಾಗಿ ಎಗ್ಸಾಮಿನ್ ಮಾಡಿ. (Anantmadan- Vs-State of Haryana and others) ಆದ್ದರಿಂದ ಇವತ್ತು ರೆಸಿಪ್ರಾಸಿಟಿ ಇಲ್ಲದಿದ್ದರೆ ಎಲ್ಲಾ ಸೀಟುಗಳನ್ನು ಕರ್ನಾಟಕದವರಿಗೆ ಕೊಡಬಹುದು. I am telling you this. You can save the situation. ತಾವು ಇನ್ನೂ ಕೂಡ ಆ ಕೇಸನ್ನು ರಿವ್ಯೂ ಮಾಡುವಾಗ ಇದರ ಬಗ್ಗೆ ತಾವು ವಾದ ಮಾಡಿ our lawyers should always vigilant. They must be posted with up to date rulings. ಇಲ್ಲದಿದ್ದರೆ ಈ ಪರಿಸ್ಥಿತಿ ಉದ್ಭವವಾಗುತ್ತದೆ.

5.00 ಪಿ.ಎಂ.

ಶ್ರೀ ಕಾಗೋಡು ತಿಮ್ಮಪ್ಪ: ಇನ್ನೊಂದು ಏನಾಗಿದೆ ಅಂದರೆ ಸುಪ್ರಿಂಕೋರ್ಟಿನ ತೀರ್ಮಾನಗಳು ನಮ್ಮ ವಿರುದ್ಧ ಏನು ಬಂದಿವೆ. ಅವುಗಳಿಗೆಲ್ಲ ರಿಟ್‌ಪಿಟಿಷನ್ ಫೈಲ್ ಮಾಡಿದವರು ಹೊರರಾಜ್ಯಗಳಿಂದ ಬಂದಂತಹ ವಿದ್ಯಾರ್ಥಿಗಳು. ನಮ್ಮ ರಾಜ್ಯದ ವಿದ್ಯಾರ್ಥಿಗಳನ್ನು ಮಹಾರಾಷ್ಟ್ರ ಆಂಧ್ರ ಮತ್ತು ತಮಿಳುನಾಡಿಗೆ ಕಳುಹಿಸಿ ಅಲ್ಲಿ ಅರ್ಜಿ ಹಾಕಿಸಿ ನಮಗೂ ಸೀಟು ಕೊಡಿಸಬೇಕೆಂದು ನೀವು ಅರ್ಜಿ ಹಾಕಿಸುವ ಕೆಲಸವನ್ನು ಮಾಡಿಸಬೇಕು.

ಅಧ್ಯಕ್ಷರು:- ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ಬಹಳ ಐಡಿಯಾಸ್‌ಗಳು ಹೊಳೆಯುತ್ತವೆ, ಆದರೆ ಬಹಳ ಲೇಟಾಯಿತು.

ಶ್ರೀ ಎಂ.ವೀರಪ್ಪ ಮೊಯಿಲಿ:- ಪ್ರಶ್ನೆ ಏನೆಂದರೆ, ಈಗಿನ ಪೊಸಿಷನ್ ಏನಾಗಿದೆ ಅಂದರೆ ಸುಪ್ರೀಂಕೋರ್ಟ್ ಉನ್ನಿಕೃಷ್ಣ ಜಡ್ಜ್‌ಮೆಂಟ್ ಪ್ರಕಾರ ನಾವು ಮಾಡಿದ್ದೇವೆ. ಜನವರಿ 1995 ರಲ್ಲಿ ರೂಲಿಂಗ್ ಬಂತಲ್ಲ That judgment is an eye-opener. That Ruling came in January 1995. ನಾವು ತೆಗೆದುಕೊಳ್ಳುವಂತಹ ಪ್ರಶ್ನೆಯೇ ಇಲ್ಲ. ನೀವು ಇವತ್ತು ಅದರ ಪ್ರಯೋಜನ ತೆಗೆದುಕೊಂಡು you can work on that. ಅದನ್ನು ವಿಚಾರ ಮಾಡಿ you have to examine. ನಿಮ್ಮ ಎಲ್ಲಾ ಸೀಟುಗಳು ಕೂಡ ಕರ್ನಾಟಕದ ಮಕ್ಕಳಿಗೆ ಪುನಃ ದೊರಕಿಸತಕ್ಕಂತಹ ಪುಣ್ಯದ ಕೆಲಸವನ್ನು ನೀವು ಮಾಡಿದಾಗ ಆಗಬಹುದು. ತಾವು ಹೇಳಿದಿರಿ ಪೇಪರ್‌ನಲ್ಲಿ ಅಡ್ವರ್‌ಟೈಸ್‌ಮೆಂಟ್ ಏನು ಡಿಸ್ಪಾರ್‌ಷನ್, ಒಂದೊಂದು ಸ್ಟೇಟ್‌ನಲ್ಲಿ ಒಂದೊಂದು ರೀತಿಯ ಎಕ್ಸಾಮಿನೇಷನ್ಸ್ ಅಂತಹ ವಿದ್ಯಾರ್ಥಿಗಳನ್ನು ನಾವು ನಮ್ಮ ಕಾಲೇಜಿಗೆ ತರಿಸಿ ಇವತ್ತು ಅವರಿಗೆ ಅಡ್ಮಿಷನ್ ಕೊಟ್ಟರೆ ಆ ಸ್ಟ್ಯಾಂಡರ್ಡ್ ಏನಿದೆ ಮೆಂಟೇನ್

ಮಾಡಬೇಕಾದದ್ದು ಅದನ್ನು ಮೆಂಟೇನ್ ಮಾಡಲಿಕ್ಕೆ ಆಗುವುದಿಲ್ಲ That is why the C.E.T. system has been introduced. ಈಶ್ವರಭಟ್ಟರ ಅಧ್ಯಕ್ಷತೆಯಲ್ಲಿ ನಾವು ಅಪಾಯಿಂಟ್ ಮಾಡಿದ ಕಮಿಟಿ ಏನಿದೆ ಅವರು ಆ ಸಿ.ಇ.ಟಿ. ಎಕ್ಸಾಮಿನೇಷನ್ ಅನ್ನು ಇನ್ನೂ ಸ್ಟ್ರೆಂಗ್ತನ್ ಮಾಡಬೇಕೆಂದು ಹೇಳಿದ್ದಾರೆ. ಅದನ್ನು ಕೈಬಿಡಬೇಕೆಂದು ಹೇಳಿಲ್ಲ. ಇಷ್ಟು ವಿಚಾರ ತಾವು ಮಾಡಬೇಕಾಗುತ್ತದೆ. ಇನ್ನೊಂದು ವಿಚಾರ, 1993-94 ರಲ್ಲಿ ನಾವು ಅಡ್ಮಿಶನ್ ಪಾಲಿಸಿಯನ್ನು ಬದಲಾವಣೆ ಮಾಡಿದಾಗ ಅದು ಏನಾಯಿತು ಅಂದರೆ, ಅಡ್ಮಿಶನ್‌ನಲ್ಲಿ ಪ್ರೊಫೆಷನ್‌ಲ್ ಕಾಲೇಜಿಗೆ ಫ್ರೀ ಸೀಟ್ಸ್ ಏನಿತ್ತು ಅದು 1992-93 ರಲ್ಲಿ 6461 ಇದ್ದದ್ದು 1993-94ರಲ್ಲಿ 10,823 ಆಯಿತು. ಅದು ಇಂಜಿನಿಯರಿಂಗ್ ಕಾಲೇಜಿನಲ್ಲಿ. ಮೆಡಿಕಲ್ ಕಾಲೇಜಿನಲ್ಲಿ 1992-93 ರಲ್ಲಿ 997 ಇದ್ದದ್ದು, 1993-94 ಕ್ಕೆ 1705 ಸೀಟುಗಳು ಮೆಡಿಕಲ್‌ನಲ್ಲಿ ಬಂತು. ತಾವು ಆಲೋಚನೆ ಮಾಡಿ, ಎಷ್ಟು ಗಾತ್ರದಲ್ಲಿ ಬಡ ಮಕ್ಕಳಿಗೆ ಇವತ್ತು ಮೆರಿಟ್ ಮೇಲೆ ಸೀಟನ್ನು ಕೊಡುವುದರಿಂದ ಏನಾಯಿತು ಅಂದರೆ ಎಲ್ಲಾ ಗ್ರೂಪ್ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟವರ್ಗ ಎಲ್ಲಾ ಸೇರಿಸಿ ಈ ನೀತಿಯನ್ನು ನಾವು ಮಾಡಿದ್ದರಿಂದ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಇಂಜಿನಿಯರಿಂಗ್ ಒಂದರಲ್ಲೆ, ಸುಮಾರು 654 ಸೀಟು ಜಾಸ್ತಿಯಾಯಿತು ಬರೀ ಪರಿಶಿಷ್ಟಜಾತಿಯವರಿಗೆ ಮಾತ್ರ. ಪರಿಶಿಷ್ಟ ವರ್ಗದವರಿಗೆ 130 ಸೀಟು ಜಾಸ್ತಿಯಾಯಿತು. 1994-95 ರಲ್ಲಿ ಅದಕ್ಕಿಂತ ಜಾಸ್ತಿಯಾಯಿತು. ಈಗ ಪ್ರಶ್ನೆ ಏನಾಗುತ್ತದೆಂದರೆ, 20 ಪರ್ಸೆಂಟ್ ನೀವು ಕೊಡಬೇಕು. 20 ಪರ್ಸೆಂಟ್ ಕೊಟ್ಟಿದ್ದರಿಂದ ಈಗ ಸೀಟು ಕಡಿಮೆಯಾಗುತ್ತದೆ. ಹೆಚ್ಚಾಗಲಿಕ್ಕೆ ಸಾಧ್ಯವಾಗುವುದಿಲ್ಲ. ತಾವು ಇದೆಲ್ಲ ಸಂದಿಗ್ಧ ಪರಿಸ್ಥಿತಿಯಿಂದ ಪಾರಾಗತಕ್ಕ ದಾರಿ ಇದು. ಆ ದಾರಿಯಲ್ಲಿ ಎಲ್ಲಾ ರಿಸರ್ವ್ ಸೀಟು ಕೂಡ ಹೆಚ್ಚು ಸಿಗುತ್ತದೆ. ಉದಾಹರಣೆಗೆ ಗ್ರೂಪ್-ಎಗೆ 218 ಸೀಟು ಜಾಸ್ತಿಯಾಯಿತು. ಇದು ಇನ್ನು 20 ಪರ್ಸೆಂಟ್ ಜಾಸ್ತಿ. ಏಕೆಂದರೆ ಈಗ ಕರ್ನಾಟಕದ ಮಕ್ಕಳಿಗೆ ಪೇಮೆಂಟ್ ಸೀಟು ಇರಲಿ, ಫ್ರೀ ಸೀಟು ಇರಲಿ 1994-95 ರವರೆಗೆ ಸುಮಾರು 75 ರಿಂದ 80 ಪರ್ಸೆಂಟ್ ಸೀಟುಗಳು ಬಂತು to that extent it has been reduced. It may even come down to 60% ಏಕೆಂದರೆ ಯಾವುದು ಸೀಟು ಫಿಲಪ್ ಆಗಲಿಲ್ಲ ಅದು ಮ್ಯಾನೇಜ್‌ಮೆಂಟಿಗೆ ಹೋಗುತ್ತದೆಂದು ಹೇಳಿ ಹೊಸದಾಗಿ ಒಂದು ರೈಡರ್ ಸುಪ್ರೀಂಕೋರ್ಟಿನವರು ಕೊಟ್ಟಕಾರಣ I think you may ultimetely land upto 60% for Karnataka students ಫ್ರೀ ಸೀಟಿನಲ್ಲಿ ಮೀಸಲಾತಿಗೆ ಯಾವರೀತಿಯಲ್ಲಿ ಸೀಟು ವಿಭಜನೆಯಾಗುತ್ತದೆ ಅದರಲ್ಲಿ ಎಲ್ಲಾ ಆ ದಾಮಾಷದಲ್ಲಿ ಅದು ಕಡಿಮೆಯಾಗುತ್ತದೆ. ಇನ್ನೊಂದು ವಿಚಾರವನ್ನು ನಾನು ಈ ಸದನದ ಗಮನಕ್ಕೆ ಮತ್ತು ಮಾನ್ಯಸಚಿವರ ಗಮನಕ್ಕೆ ತರುವುದಕ್ಕೆ ನಾನು ಅಪೇಕ್ಷೆಪಡುತ್ತಿದ್ದೇನೆ. ಏನೆಂದರೆ ಇದೊಂದು ರೀತಿ ಏನಾಗುತ್ತದೆಂದು ಹೇಳಿದರೆ Re-interpretation of the gracing Regulations-December 1992 Bangalore University ನಾನು ಏಕೆ ಇಲ್ಲಿ ಪ್ರತ್ಯೇಕವಾಗಿ ಗಮನಕ್ಕೆ ತರುತ್ತಿದ್ದೇನೆಂದರೆ. ಯಾವರೀತಿಯಲ್ಲಿ ಒಂದು ಸತ್ಯವನ್ನು ಡಿಸ್ಟಾರ್ಟ್ ಮಾಡಲಿಕ್ಕೆ ಸಾಧ್ಯವಿದೆಯೆಂದು. ಏಕೆಂದರೆ ಗ್ರೇಸ್‌ಮಾರ್ಕ್ಸ್ ಬಗ್ಗೆ ಪೇಪರ್‌ಗಳಲ್ಲೆಲ್ಲ ಬಂತು. ಏನು ನನ್ನ ಮಗಳು ರಶ್ಮಿ ಕೂಡ ಗ್ರೇಸ್‌ಮಾರ್ಕ್ ಮೂಲಕ ಪಾಸಾಗಿದ್ದಾಳೆ. ನನ್ನ ಮಗಳಿಗಾಗಿಯೇ ಈ ಗ್ರೇಸ್‌ಮಾರ್ಕ್ ರೂಲ್ಸ್ ರೆಗ್ಯುಲೇಷನ್ಸ್ ಮಾಡಲಾಗಿದೆ ಅಂತ ಪಬ್ಲಿಕ್‌ಗೆ ಇಂಪ್ರೆಷನ್ ಬರುವ ರೀತಿಯಲ್ಲಿ ಒಂದು ರೀತಿಯಲ್ಲಿ ಎಲ್ಲ ವರದಿ ಬಂತು. ನಾನು ಪತ್ರಿಕೆಯ

ಸ್ನೇಹಿತರಿಗೆ ಕಾಗದವನ್ನು ಸಹ ಬರೆದೆ. ಹೇಳಿ ಹೇಳಿದೆ She is not one of the beneficiaries of the grace marks. She has passed in a very normal way.ಎಂದು ಹೇಳಿ ನಾನು ಹೇಳಿದ್ದೇ ಹೇಳಿದ್ದು. ಆದರೆ ದುರದೃಷ್ಟವಶಾತ್ ಏನಾಗಿದೆ ನಾಣಯ್ಯನವರೆ, ನಾವು ಪಬ್ಲಿಕ್ ಸರ್ವೀಸ್‌ನಲ್ಲಿ ಇರುವುದೇ ತಪ್ಪು. ಇದ್ದರೆ ನಿಮಗೆ ಮಕ್ಕಳು ಇರಲೇಬಾರದು. ಇದು ಏನಾಗಿದೆ ಅಂದರೆ ನಾನು ಸ್ವಲ್ಪ ರೀಸರ್ಚ್ ಮಾಡಿದೆ. ಇದು ಏಕೆ ನಮ್ಮ ಮಗಳು ರಶ್ಮಿ ಹೆಸರು ಬಂತು ಎಂದು, ಕ್ಷಮಿಸಿ ಅಧ್ಯಕ್ಷರೆ.

ಅಧ್ಯಕ್ಷರು:- ಮಕ್ಕಳೂ ಇರಬಾರದು ಅಳಿಯಂದಿರು ಇರಬಾರದು.

ಶ್ರೀ ಎಂ.ವೀರಪ್ಪಮೊಯಿಲಿ :- ಅದು ಆಗಿದೆ.

Mr. SPEAKER:- Because you have a daughter.....

ಶ್ರೀ ಎಂ.ವೀರಪ್ಪಮೊಯಿಲಿ:- ಮಾನ್ಯ ವಿರೋಧಪಕ್ಷದ ನಾಯಕರು ಮಾನ್ಯ ನಂಜೇಗೌಡರು ಕೂಡ ಈ ಪ್ರಶ್ನೆ ಎತ್ತಿದರು. ತಮಗೆ ಗೊತ್ತಿದೆ motive behind is to bring my name into the picture ನಾನು ಏನೋ ಮಾಡಿಬಿಟ್ಟಿದ್ದೇನೆ ಎಂದು ಮಾನ್ಯ ಮುಖ್ಯಮಂತ್ರಿಗಳು he was ready ಈ ಪ್ರಶ್ನೆ ಎತ್ತಿದಕೂಡಲೇ ನಾನು ಪೋಲೀಸ್ ಕಮೀಷನರ್ ಮೂಲಕ ಇದರ ಎನ್‌ಕ್ವಾಯರಿ ಮಾಡಿಸುತ್ತೇನೆಂದು ಹೇಳುತ್ತೇನೆಂದು ನಿರೀಕ್ಷಿಸಿದ್ದರು. I don't think people have some mind to fix me in this thing ನಾನು ಸುಮ್ಮನಿದ್ದೆ, ಹೇಗೂ ಎನ್‌ಕ್ವಾಯರಿ ಮಾಡಿದ್ದಾರೆ. ಅದು ಹೊರಗೆ ಬರಲಿಯೆಂದು ಹೇಳಿ, I know very well that, with some sense of responsibility I am making this statement. I am not charging anybody. I also know that some of the Deputy Registrar was also approached to remove those records pertaining to my daughter offering five lakhs to ten lakhs of Rupees. I have also come to know. It is a credible information.

ಕ್ರೆಡಿಬಲ್ ಇನ್‌ಫರ್‌ಮೇಶನ್, ಏಕೆಂದರೆ ಪೇಪರ್ ತಪ್ಪಿಸಿಬಿಟ್ಟರೆ, ನಾಗರಾಜ್‌ರವರೇ ಮೊಯಿಲಿಯವರು ಆ ಪೇಪರನ್ನು ತಪ್ಪಿಸಿಬಿಟ್ಟಿದ್ದಾರೆಂದು ಹೇಳುತ್ತಾರೆ. Fortunately for me, all those papers have been preserved in tact. ಅದು ಆಯಿತು, ಆಮೇಲೆ ಇದು ಏಕೆ ಆಗಾಗ ಬರುತ್ತಿದೆ ನಮ್ಮ ಮಗಳು ಹೆಸರು ಎಂದು ನಾನು ವಿಚಾರ ಮಾಡಿದೆ. ನಾನು ವಿಚಾರ ಮಾಡುತ್ತಲೇ ಇದ್ದೆ, ಈ ಪೇಪರ್‌ನಲ್ಲಿ ಕೂಡ ಇದೇ ಇಂಡಿಯನ್ ಎಕ್ಸ್‌ಪ್ರೆಸ್ dated 10th July, they were also getting some sadistic information. I am sorry to comment. Usually I don't comment.

ಇದರ ಪ್ರಕಾರ ಈ ರಿಪೋರ್ಟ್ ನಾನು ನೋಡಿದಾಗ, ಎಂ.ಎಸ್.ರಾಮಯ್ಯ ಕಾಲೇಜಿನಲ್ಲಿ ಗ್ರೇಸ್ ಮಾರ್ಕ್‌ಗೆ ಸಿಕ್ಕಿದೆ. ಅವರ ಹೆಸರು ರಶ್ಮಿಯಲ್ಲ ರೇಶ್ಮಾ ಅಂತ. ಏನಾಗಿದೆ ಅಂದರೆ ಎಷ್ಟು ನಾವು ಸತ್ಯವನ್ನು ಅಡಗಿಸಲಿಕ್ಕೆ ಯಾವ್ಯಾವ ಮಾರ್ಗವನ್ನು ನಾವು ಹುಡುಕಲಿಕ್ಕೆ ಸಾಧ್ಯವಿದೆ what kind of fraud we can commit ಎನ್ನುವುದಕ್ಕೆ ಬಹುಶಃ ಇದೊಂದು ಜ್ವಲಂತ

ನಿದರ್ಶನ. ಇದರಲ್ಲಿ ಏನಾಗಿದೆ ಅಂತ ಹೇಳಿದರೆ, ರೇಶ್ಮಾ ಅಂತ ಹೇಳಿ ಒಂದು ಹೆಸರು ಇದೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಮುಂದೆ ಈ ರೀತಿ ಅಪಚಾರ ಆಗಬಾರದು ಎನ್ನುವ ರೀತಿಯಿಂದ ಹೇಳುವುದೇ ಹೊರತು ಮತ್ತೆ ಯಾವ ಉದ್ದೇಶದಿಂದಲೂ ಕೂಡ ಹೇಳುತ್ತಿಲ್ಲ. ಇದೊಂದು ಎಂ.ಎಸ್. ರಾಮಯ್ಯ ಮೆಡಿಕಲ್ ಕಾಲೇಜು ಬೆಂಗಳೂರು ANNEXURE-A ಇದನ್ನು ತಮಗೆ ತೋರಿಸುತ್ತೇನೆ it is very interesting ಅದರಲ್ಲಿ ಏನಿದೆ ಅಂದರೆ ಸೀರಿಯಲ್ ನಂ.5 ರೇಶ್ಮಾ Anjum ಇದು ನೋಡಿದರೆ ರೇಶ್ಮಾ ಎಂದು ಮಗಳು ಇದ್ದಾಳೆಂದು ಗೊತ್ತಾಯಿತು. ರೇಶ್ಮಾಅಂಜಮ್ ಎಂದು ಹೇಳಿ ಅನಾಟಮಿ ವಿದ್ಯಾರ್ಥಿ ಗ್ರೇಸ್ ಮಾರ್ಕ್‌ನಲ್ಲಿ she is one of the beneficiaries. that Reshma Anjum. Of course, I don't blame you also. My own Party people have done it when I was the Chief Minister. I am not blaming anyone.

ಶ್ರೀ ಎಂ.ಸಿ.ನಾಣಯ್ಯ:- ಮಾನ್ಯ ಮೊಯಿಲಿಯವರೆ, ನೀವು ಹೇಳುತ್ತಿರತಕ್ಕ ವಿಚಾರ ಇದೆಯಲ್ಲ ಈ ತರಹ ಕೆಲಸವಂತೂ ನಾವು ಖಂಡಿತಾ ಮಾಡುವುದಿಲ್ಲ. ಏಕೆಂದರೆ ಆ ಕೆಲಸ ಮಾಡುತ್ತಿರತಕ್ಕದ್ದು ಮತ್ತು ಆ ಸಂಸ್ಕೃತಿಯನ್ನು ಬೆಳೆಸಿರತಕ್ಕವರು ಯಾರೆಂದು ನೀವೇ ಹೇಳಿಬಿಟ್ಟಿದ್ದೀರಿ.

SRI M.VEERAPPA MOILY:- No, No. ಇದು ಒಬ್ಬರನ್ನು ಮಲಾಯಿನ್ ಮಾಡಲಿಕ್ಕೆ that concept was the party. ಅದು ಪಾರ್ಟಿ ಏನೂ ಇರುವುದಿಲ್ಲ. ಇದನ್ನು ನಾನು ಇಲ್ಲಿಯವರೆಗೆ ಏಕೆ ಪಬ್ಲಿಕ್ ಆಗಿ ಹೇಳಲಿಲ್ಲವೆಂದರೆ,

MR. SPEAKER:- it has been going on Saint Kidsದು ಆಗಲಿಲ್ಲವೇ? whatever could be the ideological differences for that person or for anybody, nobody has questioned the integrity of Mr.V.P.singh. Even he was implicated into that mater like this. ಏನಾಗುತ್ತದೆ ಈ ದೇಶದಲ್ಲಿ.

SRI M.VEERAPPA MOILY:- SL.NO.5 RESHMA ANJUM ಅಂತ ಸಿಕ್ಕಿತು. ರೇಷ್ಮ ಅಂತ ಹೇಳಿ ಇದೆಯಲ್ಲ, ರಶ್ಮಿ ಎಂದು ಹೇಳಿ. ಆಯಿತು ಅಂತ ಹೇಳಿ ವಿ ವಿ ಐ ಪಿ ಸನ್, ರೇಷ್ಮಾ ಎಂದು ಸ್ಪೆಷಲ್ ಆಗಿ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಕೂಡ ನ್ಯೂಸ್ ಐಟಂ ಕೊಟ್ಟಿದ್ದಾರೆ. ಏನು ಅಂತ ಹೇಳಿದರೆ ಈ ರೇಷ್ಮ ಅಂತ ಹೇಳುವವರಿಗೆ ಮಾರ್ಕ್ಸ್‌ನ್ನು ಕೊಡಲಾಗಿದೆ ಎಂದು ಸ್ಪೆಷಲಾಗಿ ಅದರ ರಿಪೋರ್ಟ್ ಕೂಡ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಕಾಣಿಸಿದ್ದಾರೆ. ಈಗ ರಿಪೋರ್ಟನ್ನು ದಯಮಾಡಿ ಸದನಕ್ಕೆ ಒಪ್ಪಿಸಬೇಕು. ಏಕೆಂದರೆ ಮಾನ್ಯ ಮುಖ್ಯ ಮಂತ್ರಿಯವರು ಇಲ್ಲಿ ಪ್ರಾಮಿಸ್ ಮಾಡಿದಂಥ ರಿಪೋರ್ಟ್. ಅವರು ಹೇಳಿದ್ದು ಏನೆಂದರೆ ರಾಜ್ಯಪಾಲರಿಗೆ ಹೇಳಿ ಪೋಲೀಸ್ ಕಮೀಷನರ್ ಮೂಲಕ ನಾವು ಮಾಡುತ್ತೇವೆ ಎಂದು ಹೇಳಿದ್ದಾರೆ, ಆ ಪ್ರಕಾರ ಇವತ್ತು ಅವರು ಮಾಡಿದ್ದಾರೆ, ರಿಪೋರ್ಟ್ ಕೂಡ ರಾಜ್ಯಪಾಲರಿಗೆ ಸಬ್‌ಮಿಟ್ ಮಾಡಿದ್ದಾರೆ ಎಂದು ಹೇಳಿ ಕೂಡ ಈಗ ತಿಳಿದು ಬಂದಿದೆ. ಆದ್ದರಿಂದ ತಾವು ದಯಮಾಡಿ ಉತ್ತರ ಕೊಡುವಾಗ ಆ ರಿಪೋರ್ಟನ್ನು ಈ ಸದನದ ಮುಂದೆ

ಇಡಬೇಕು. ಮಾನ್ಯ ಅಧ್ಯಕ್ಷರೇ, ಇದು ಮಾನ್ಯ ಮುಖ್ಯ ಮಂತ್ರಿಯವರು, ಸಭಾನಾಯಕರು ಇಲ್ಲಿ ಹೇಳಿದ್ದಾರೆ. ಇಲ್ಲಿ ಹೇಳಿ ಅಪಾಯಿಂಟ್‌ಮೆಂಟ್ ಮಾಡಿದಂಥ ಒಂದು ಸಮಿತಿಯ ವರದಿಯಾದ್ದರಿಂದ ಈ ಸದನಕ್ಕೆ ತಾವು ದಯಮಾಡಿ ಆ ವರದಿಯನ್ನು ಕೊಡಬೇಕು ಮತ್ತು ಈ ರೀತಿಯಲ್ಲಿ ಸತ್ಯಕ್ಕೆ ಒಂದು ಅಪಚಾರ ಮಾಡತಕ್ಕದ್ದು......

ಶ್ರೀ ಡಿ.ಮಂಜುನಾಥ್:- ಆ ವರದಿ ರಾಜ್ಯಪಾಲರಿಗೆ ಹೋಗಿದೆ. ಸರ್ಕಾರಕ್ಕೆ ಬಂದಿಲ್ಲ ನಾನು ಒಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದು ಏನೆಂದರೆ, ಈ ಮಾರ್ಕ್ಸ್ ಕಾರ್ಡ್ ಸ್ಕ್ಯಾಂಡಲ್ ಬಗ್ಗೆ, ಅದು ಮುಗಿದು ಹೋದ ಕಥೆ. ನೀವು ಮತ್ತೆ ಅದನ್ನು ಏನು ಪ್ರಸ್ತಾಪ ಮಾಡುತ್ತೀದ್ದೀರಿ ಆ ವಿಚಾರ, ಏನು ಅಂದರೆ ವರದಿಯನ್ನು ನಾನು ಪೇಪರ್‌ನಲ್ಲಿ ಓದಿದ್ದೇನೆ, ಆ ವರದಿಯನ್ನು ಖಂಡಿತವಾಗಿಯೂ ನಾನು ನೋಡಲಿಲ್ಲ. ಪ್ರೆಸ್‌ನಲ್ಲಿ ಬಂದದ್ದನ್ನು ನಾನು ನೋಡಿದ್ದೇನೆ. ಅದು ಸ್ಕ್ಯಾಂಡಲ್ ಆಗಿದೆ, ಕೆಲವು ಕೇಸ್‌ನಲ್ಲಿ ಆಗಿದೆ. ಅದನ್ನು ಮತ್ತೆ ಈಗ ಪ್ರಸ್ತಾಪ ಮಾಡುವುದು ಅನಾವಶ್ಯಕ ಎಂದು ಅನ್ನಿಸುತ್ತದೆ. ಮುಗಿದು ಹೋದ ಕಥೆ ಅದು.

ಶ್ರೀ ವಾಟಾಳ್ ನಾಗರಾಜ್:- ಹಗರಣವಾಗಿದೆ ಎಂದು ಹೇಳುತ್ತಾರೆ, ವಿಚಾರ ಗೊತ್ತಿಲ್ಲ ಎಂದು ಹೇಳುತ್ತಾರೆ, ವರದಿ ಬಂದಿಲ್ಲ ಎಂದು ಹೇಳುತ್ತಾರೆ, ಬಿಟ್ಟುಬಿಡೋಣ ಅಂತಲೂ ಹೇಳುತ್ತಾರೆ, ಏನು ಎಂದು ತಿಳಿಯೋಣ ನಾವು?

ಅಧ್ಯಕ್ಷರು:- ನೀವು ಕನ್ನಡದಲ್ಲಿ ಸರಿಯಾಗಿ ಹೇಳಿ.

ಶ್ರೀ ಡಿ.ಮಂಜುನಾಥ್:- ಕನ್ನಡದಲ್ಲಿ ಹೇಳುತ್ತೇನೆ. ಇದನ್ನು ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಸರ್ಕಾರಕ್ಕಂತೂ ಬಂದಿಲ್ಲ. ಈ ವರದಿ ಕಳುಹಿಸಿರುವುದು ಪೋಲೀಸ್ ಕಮೀಷನರ್. ಅದನ್ನು ಓದಿಕೊಂಡು ನಾವು ಹೇಳಿದ್ದೇವೆ ಎಂದರೆ ಹಗರಣವಾಗಿದೆ ಅಂತ ಅಷ್ಟೇ.

ಶ್ರೀ ಎಂ.ವೀರಪ್ಪ ಮೊಯಿಲಿ:- ಹಗರಣವಾಗಿದೆ ಎಂದು ಹೇಳಿ ಅವರು ವರದಿ ಕೊಟ್ಟಿದ್ದಾರೆ ಎಂದು ಪತ್ರಿಕೆಯಲ್ಲಿ ಬಂದಿದೆ. ಆದ್ದರಿಂದ, ಆ ವರದಿ ಜನಕ್ಕೆ ಗೊತ್ತಾಗಲಿ ಯಾವ ತರಹ ವರದಿ ಇದೆ ಎಂದು ಹೇಳಿ. ಏಕೆಂದರೆ ಈಗ ನಾನು ಹೇಳಿದ್ದೇನೆ, ಯಾವ ರೀತಿಯಲ್ಲಿ ಆಗಿದೆ ಎಂದು. ಆದರೆ ಈ ಸದನದಲ್ಲಿ ಅದು ಹಗರಣವಾಗಿದೆ ಎಂದು ಹೇಳಿದರೆ ಇಲ್ಲಿ ಉತ್ತರ ಕೊಡಬೇಕು. ಏಕೆಂದರೆ ಆ ಬಗ್ಗೆ ಮಾನ್ಯ ನಂಜೇಗೌಡರು ಮತ್ತು ಮಾನ್ಯ ಯಡಿಯೂರಪ್ಪನವರು ಪ್ರಶ್ನೆ ಎತ್ತಿದ ಮೇಲೆ ಮಾನ್ಯ ಮುಖ್ಯಮಂತ್ರಿಯವರು ಆಶ್ವಾಸನೆ ಕೊಟ್ಟದ್ದನ್ನು, ಆಶ್ವಾಸನೆ ಕೊಟ್ಟಮೇಲೆ ರಾಜ್ಯಪಾಲರಿಗೆ ತಾವು ರಿಕ್ವೆಸ್ಟ್ ಮಾಡಿದ್ದೀರಿ,

ಶ್ರೀ ಡಿ.ಮಂಜುನಾಥ್:- ರಾಜ್ಯಪಾಲರು ಏನು ಕ್ರಮ ತೆಗೆದುಕೊಳ್ಳುತ್ತಾರೆ ಎಂದು ನೋಡೋಣ.

ಶ್ರೀ ಎಂ.ವೀರಪ್ಪಮೊಯಿಲಿ:- ಈ ಪ್ರಸ್ತಾಪ ಇಲ್ಲಿ ಆದ್ದರಿಂದ ಇಲ್ಲಿ ಹೇಳಿದೆನೇ ಹೊರತು ಮತ್ತೇನೂ ಇಲ್ಲ. ಮಾನ್ಯ ಅಧ್ಯಕ್ಷರೇ, ತಾವು ಕ್ಯಾಬಿನೆಟ್‌ನಲ್ಲಿ ನಿರ್ಣಯ ತೆಗೆದುಕೊಂಡಿದ್ದೀರಿ ಎಂದು ಹೇಳಿ ನಮಗೆ ಬಂದಿದೆ. ಈ ಹೊಸ ಇಂಜಿನಿಯರಿಂಗ್ ಕಾಲೇಜುಗಳನ್ನು ನಾವು ಪುನಃ ಪ್ರಾರಂಭ ಮಾಡುತ್ತೇವೆ. ಈಗಾಗಲೇ ಸಾಕಷ್ಟು ಇಂಜಿನಿಯರಿಂಗ್ ಕಾಲೇಜುಗಳೆಲ್ಲಾ ಆಗಿವೆ. ಎ.ಐ.ಸಿ.ಟಿ.ಯವರು ಹೇಳಿರಬಹುದು, ಈ ದೇಶದಲ್ಲಿ ಸಾಕಷ್ಟು ಇಂಜಿನಿಯರಿಂಗ್ ಕಾಲೇಜುಗಳನ್ನು ಇನ್ನೂ ಕೂಡ ಹೊಸದಾಗಿ ಮಾಡಲಿಕ್ಕೆ ಅವಕಾಶ ಇದೆ ಎಂದು ಹೇಳಿದ್ದಾರೆ.

ಶ್ರೀ ಡಿ.ಮಂಜುನಾಥ್:- ನಾವು ಹೊಸದಾಗಿ ಇಂಜಿನಿಯರಿಂಗ್ ಕಾಲೇಜುಗಳನ್ನು ಪ್ರಾರಂಭ ಮಾಡುತ್ತೇವೆ ಎಂದು ಹೇಳಿಲ್ಲ. ಈಗ ಎ.ಐ.ಸಿ.ಟಿ.ಯವರಿಂದ ಇನ್ನೂ ರಾಷ್ಟ್ರದಲ್ಲಿ 33 ಕಾಲೇಜು ಮಾಡಬಹುದು ಎಂದು ಹೇಳಿ ಒಂದು ವರದಿ ಬಂದಿದೆ. ಈಗ ಬ್ಯಾನ್ ಲಿಫ್ಟ್ ಮಾಡಿದ್ದೇವೆ. ಈಗ ಏನು ಮಾಡಬಾರದು ಅಂತ ಇದ್ದಿರಲ್ಲ, ಆ ಬ್ಯಾನ್ ಲಿಫ್ಟ್ ಆಗಿದೆ.

ಅಧ್ಯಕ್ಷರು:- ನಿಮ್ಮ ಲಾ ಮಿನಿಸ್ಟರ್ ಹೇಳಿ ಕೊಡುವುದಕ್ಕೆ, ನೀವು ಹೇಳುವುದಕ್ಕೆ ಚೆನ್ನಾಗಿ ಇದೆ.

ಶ್ರೀ ಎಂ.ಸಿ.ನಾಣಯ್ಯ:- ಮಾನ್ಯ ಅಧ್ಯಕ್ಷರೇ, ಎ.ಐ.ಸಿ.ಟಿ.ಯಿಂದ ನಮ್ಮ ಸರ್ಕಾರಕ್ಕೆ ಒಂದು ಪತ್ರವನ್ನು ಬರೆದು, ಇದರ ಬಗ್ಗೆ, ಹೊಸ ಇಂಜಿನಿಯರಿಂಗ್ ಕಾಲೇಜುಗಳನ್ನು. ತೆಗೆಯುತ್ತಿರತಕ್ಕಂಥಾದ್ದರ ಬಗ್ಗೆ ನಿಮ್ಮ ರಾಜ್ಯ ಸರ್ಕಾರದ ನಿಲುವು ಏನು ಎಂದು ಹೇಳುತ್ತಾ ಇರತಕ್ಕಂಥಾದ್ದನ್ನು ಕೇಳಿದೆ. ಅದರಲ್ಲಿ ಎ.ಐ.ಸಿ.ಟಿ.ಯವರು ಒಂದು ಸರ್ವೆ ಮಾಡಿದ್ದಾರೆ, ಒಂದು ಸರ್ವೆ ಮಾಡಿ ಕರ್ನಾಟಕದಲ್ಲಿ ಕೆಲವು ಡಿಸಿಪ್ಲಿನ್‌ಗೆ ಸಂಬಂಧಪಟ್ಟ ಹಾಗೆ, ನಾಟ್ ಆಲ್ ದಿ ಡಿಸಿಪ್ಲಿನ್ಸ್, ಕೆಲವು ಡಿಸಿಪ್ಲಿನ್‌ಗೆ ಸಂಬಂಧಪಟ್ಟ ಹಾಗೆ, ಇಲ್ಲಿ ಸ್ಕೋಪ್ ಇದೆ ಎನ್ನತಕ್ಕಂಥಾದ್ದು ಹೇಳಿ ಇದರ ಬಗ್ಗೆ ನೀವು ಏನು ಕ್ರಮ ಕೈಗೊಳ್ಳುತ್ತೀರಿ ಎನ್ನತಕ್ಕಂಥಾದ್ದನ್ನು ಕೇಳಿದರು ಆ ಸಂದರ್ಭದಲ್ಲಿ ನಾವು 1995-96 ಈ ವರ್ಷಕ್ಕಂತೂ ಇಲ್ಲ. ಮುಂದಿನ ವರ್ಷಕ್ಕೆ ಎಲ್ಲಿಯಾದರೂ ಅಂಥ ಅವಶ್ಯಕತೆ ಬಿದ್ದಾಗ ಎ.ಐ.ಸಿ.ಟಿ.ಅವರ ನಾರ್ಮ್ಸ್‌ಅನ್ನು ಇಟ್ಟುಕೊಂಡು depending upon the merit of each case ಬಹುಶಃ ಆ ಸಂದರ್ಭ ಬಂದಾಗ ಬ್ಯಾನನ್ನು ಲಿಫ್ಟ್ ಮಾಡಲಿಕ್ಕೆ ಇರತಕ್ಕಂಥಾದ್ದು ತೀರ್ಮಾನ ಆಯಿತು, ಬಾಕಿ ಯಾವುದಕ್ಕೂ ಅಲ್ಲ. ಆ ಸಂದರ್ಭ ಬಂದಾಗ depending upon the merit of the case ಅಷ್ಟೇ. ನಾವು ಅದರ ಫ್ಲಡ್ ಗೇಟನ್ನು ಓಪನ್ ಮಾಡಬೇಕು ಅಂತ ಏನೂ ತೀರ್ಮಾನ ಮಾಡಿಲ್ಲ. ಮೊಯಿಲಿಯವರ ಕಾಲದಲ್ಲಿ ಎರಡು ವರ್ಷಕ್ಕೆ ಅಂತ ಎಂದು ಬ್ಯಾನನ್ನು ಮಾಡಿದ್ದರು. that was banned for two years, whether to be continued or not, ಅಂತ ಹೇಳುತ್ತಾ ಇರತಕ್ಕಂಥ ಇಷ್ಯೂ ಬಂದಾಗ, we decided not for this year 1995-96, ಆದರೆ ಎ.ಐ.ಸಿ.ಟಿ.ಯವರ ಒಪಿನಿಯನ್ ಬಂದಾಗ, ಅವರೆ ತಾವೇ ಹಿಂದಿನಿಂದಲೂ ಕೊಡಬೇಕಾಗಿರತಕ್ಕಂಥಾದ್ದು ಆ ಸಂದರ್ಭದಲ್ಲಿ Let us consider on merits. ಎಂದು ಹೇಳುತ್ತಾ ಇರತಕ್ಕಂಥ ಮಾತು.

ಶ್ರೀ ಎಂ.ವೀರಪ್ಪ ಮೊಯಿಲಿ:- ಅದು ಯಾವ ಸರ್ಕಾರವಾದರೂ ಮೆರಿಟ್‌ನಲ್ಲೇ ಕೊಡುವುದು. ಇಲ್ಲಿ ಪ್ರಶ್ನೆ ಏನು ಎಂದು ಹೇಳಿದರೆ We have to strengthen and consolidate the Engineering education here in Karnataka. That is the need of the hour ಹೊಸ ಕಾಲೇಜುಗಳ ಕ್ವಾಂಟಿಟಿ ಇನ್‌ಕ್ರೀಸ್ ಮಾಡತಕ್ಕಂಥಾದ್ದು ಅಲ್ಲ, ಕ್ವಾಲಿಟಿ. ಏಕೆಂದರೆ, ನಾನೇ ಶಿಕ್ಷಣ ಸಚಿವನಾಗಿ ಒಂದು ಕಮಿಟಿ ಮಾಡಿದ್ದೆ. ಶ್ರೀನಿವಾಸನ್ ಅವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡಿ ಯಾವಯಾವ ಕಾಲೇಜಿನಲ್ಲಿ ಯಾವಯಾವ ಫೆಸಿಲಿಟಿ ಇದೆ, ಯಾವ ಯಾವ ಹೊಸಕೋರ್ಸುಗಳನ್ನು ಮಾಡಲಿಕ್ಕೆ ಸಾಧ್ಯ ಇದೆ ಎಂಬುದಾಗಿ. ದಯಮಾಡಿ ಅದನ್ನು ತಾವು ಪರಿಶೀಲನೆ ಮಾಡಿ ಮತ್ತೆ ಅವಶ್ಯಕತೆ ಇದೆ ಅಂತ ಹೇಳಿದರೆ ಆ ಪ್ರಶ್ನೆ ಬೇರೆ. ಆದರೆ ನಮ್ಮ ಬೇರೆಬೇರೆ ಅಧ್ಯಯನದ ಪ್ರಕಾರ, ಇವತ್ತು

ತಜ್ಞರ ಅಭಿಪ್ರಾಯದ ಪ್ರಕಾರ ಆಡಳಿತಾತ್ಮಕವಾಗಿಯೂ ಕೂಡ need for Karnataka is to strengthen. ತಮಗೆ ಗೊತ್ತಿದೆ; ಕೆಲವು ಪತ್ರಿಕೆಯಲ್ಲಿ ನಾವು ಓದುತ್ತಿದ್ದೆವು ಮಹಾರಾಷ್ಟ್ರದಲ್ಲಿ ಏನಾದರೂ ಅಡ್ವರ್‌ಟೈಸ್‌ಮೆಂಟ್ ಕಳುಹಿಸಿದ್ದರೆ, Engineering students from Bangelore University need not apply ಎಂದು ಹೇಳುತ್ತಿದ್ದರು. ಅದು ಇನ್ನು ಮುಂದೆ ಬೇರೆ ಕಾಲೇಜಿಗೂ ಕೂಡ ಬರಬಹುದು.

ಅಧ್ಯಕ್ಷರು:- ಅದು ಎಜುಕೇಶನ್ ಸ್ಟಾಂಡರ್ಡ್‌ಗೆ ಅಲ್ಲ, ಪೊಲ್ಯೂಷನ್ ಜಾಸ್ತಿ ಇರುತ್ತದೆ ಎಂದು. ಬೆಂಗಳೂರಿನಲ್ಲಿ ಟ್ರಾಫಿಕ್ ಜಾಸ್ತಿ ಇರುತ್ತದೆ.

ಶ್ರೀ ಎಂ.ವೀರಪ್ಪಮೊಯಿಲಿ:- ಆದ್ದರಿಂದ it will pollute the mind of the student ಎಂದು ಅರ್ಥವೇ. ಕರ್ನಾಟಕದ ಮಟ್ಟಿಗೆ ತಾವು ಇವತ್ತು ಇದ್ದ ಇನ್‌ಫ್ರಾಸ್ಟ್ರಕ್ಚರನ್ನು ಬಲಗೊಳಿಸಬೇಕಾದಂಥ ಒಂದು ಅವಶ್ಯಕತೆ ಇರುವಾಗ ಹೊಸ ಕಾಲೇಜುಗಳನ್ನು ತಾವು ಮಾಡಿದರೆ ಇವತ್ತು ನಮ್ಮ ಸ್ಟಾಂಡರ್ಡ್ ಇನ್ನೂ ಕಡಿಮೆ ಆಗಬಹುದೇ ಹೊರತು ಅದನ್ನು ಸ್ಟ್ರೆಂಗ್ತನ್ ಮಾಡತಕ್ಕಂಥ ಕ್ರಮ ಅಲ್ಲ ಎಂಬುದನ್ನು ನಾನು ಹೇಳಲಿಕ್ಕೆ ಅಪೇಕ್ಷೆ ಪಡುತ್ತೇನೆ. ಇನ್ನು ವೃತ್ತಿ ಶಿಕ್ಷಣಕ್ಕೆ ಏಕರೂಪ ಪ್ರವೇಶ ನೀತಿ ಎಂದು ತಾವು ಹೇಳಿದ್ದೀರಿ. ಆದರೆ ಅದರಲ್ಲಿ ಮೈನಾರಿಟಿಗೆ ಕೂಡ, ತಾವು ಇವತ್ತು ಆರ್ಟಿಕಲ್ 30ರ ಪ್ರಕಾರ ಪ್ರೊಟೆಕ್ಷನ್ ಕೊಡತಕ್ಕಂಥ ವಿಚಾರವನ್ನೇ ಗಣನೆಗೆ ತರದೆ ತಾವು ಯಾರು ಯಾರನ್ನೋ ಮೆಚ್ಚಿಸಬೇಕು ಎಂದು ಹೇಳಿ ಇವತ್ತು ಮೈನಾರಿಟಿಗಳ ಹಕ್ಕನ್ನು ಕೂಡ ಮುರಿದು, ಇವತ್ತು ನೀವು ಒಂದೇ ರೀತಿಯ ಅಡ್ಮಿಷನ್ ಮಾಡುತ್ತೇವೆ ಎಂದು ಹೇಳಿರುತ್ತೀರಿ, ತಾವು ಹೇಳಿರುವುದು ಎಷ್ಟು ಸಾಧು ಅಥವಾ ಎಷ್ಟರಮಟ್ಟಿಗೆ ಕೋರ್ಟಿನಲ್ಲಿ ಉಳಿಯುತ್ತದೆಯೋ ಇಲ್ಲವೋ You are bound to protect the rights of the minority students,ಕಾನ್ಸಿಟ್ಯೂಷನ್ ಪ್ರಕಾರ. ಅದನ್ನು ಹೇಗೆ ನೀವು ನಿಗ್ರಹಿಸಲಿಕ್ಕೆ ಇವತ್ತು ಹೊರಟಿದ್ದೀರಿ; ನನಗೆ ತಿಳಿಯುತ್ತಿಲ್ಲ. ಏಕೆಂದರೆ, ಕಮಿಟಿಯವರೂ ಕೂಡ ಹೇಳಿದ್ದಾರೆ. ಮೈನಾರಿಟಿ ಇನ್‌ಸ್ಟಿಟ್ಯೂಷನ್‌ಗೆ ಕೂಡ ಅಡ್ಮಿಷನ್ ಮಾಡುವಾಗ ಅವರೂ ಕೂಡ ಎನ್‌ಟ್ರೆನ್ಸ್ ಟೆಸ್ಟನ್ನು ಮಾಡಿಯೇ ಅಡ್ಮಿಟ್ ಮಾಡಬೇಕು ಎನ್ನುವಂಥ ವಾದವನ್ನು ನಾನೂ ಒಪ್ಪುತ್ತೇನೆ. I can agree with that. ಈಗ ಕಮಿಟಿಯವರು ಮಾಡಿದ್ದಾರೆ ಆದರೆ ಇವತ್ತು ಮೈನಾರಿಟೀಸ್‌ನ್ನು ಸೇರಿಸಲಿಕ್ಕೆ ಇರತಕ್ಕಂಥ ಹಕ್ಕು ಏನಿದೆ, ಈಗ ಸುಪ್ರಿಂ ಕೋರ್ಟ್‌ನವರೂ ಕೂಡ 50% ಅಡ್ಮಿಷನ್ ಮಾಡಲಿಕ್ಕೆ ಅವರು ಏನು ಹಕ್ಕು ಕೊಟ್ಟಿದ್ದಾರೆ ಅದು 50% ಇರಬಹುದು, 30% ಇರಬಹುದು, ಅದು ಏನಾದರೂ ಆಗಲೀ, ಮೈನಾರಿಟೀಸ್‌ಗೆ ಇರತಕ್ಕಂಥ ಸ್ಪೆಷಲ್ ಸ್ಟೇಟಸ್ ಅದನ್ನು ಅನಲ್ ಮಾಡಲಿಕ್ಕೆ ಇವತ್ತು ಯಾವ ಲೆಜಿಸ್ಲೇಷನ್‌ನಿಂದಲೂ ಕೂಡ ಸಾಧ್ಯವಿಲ್ಲ. It is a constitutional guarantee which is granted. ಆದರೆ ತಮ್ಮ ಒಟ್ಟು ಸಂದೇಶ ಏನು ಆಗಾಗ ಬರತಕ್ಕಂಥ ಹೇಳಿಕೆಗಳಿಂದ ಅಥವಾ ಕ್ಯಾಬಿನೆಟ್ ಲೀಡರ್‌ನಿಂದ ಏನು ಹೊರಗಡೆ ಬರುತ್ತಿದೆ ಎಂದು ಹೇಳಿದರೆ ತಾವು ಮೈನಾರಿಟೀಸ್‌ಗೆ ಕೊಡತಕ್ಕಂಥ ಒಂದು ಹಕ್ಕನ್ನೂ ಕೂಡ ಇವತ್ತು ತೆಗೆದು ಏಕರೂಪವಾದಂಥ ಒಂದು ಯೂನಿಫಾರಂ ಅಪ್ರೋಚನ್ನು ನಾವು ಮಾಡುತ್ತೇವೆ ಎಂದು ಧ್ವನಿ ಏನು ಬರುತ್ತಾ ಇದೆ....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಇದನ್ನು ರಿಲಿಜಿಯಸ್ ಮೈನಾರಿಟೀಸ್ ಅಥವಾ

ಲಿಂಗ್ವಿಸ್ಟಿಕ್ ಮೈನಾರಿಟೀಸ್ ಏನಿದೆ, ಕಾನ್ಸ್ಟಿಟ್ಯೂಷನಲ್ ಹಕ್ಕಿನ ಪ್ರಕಾರ ಯಾರಿಗೆ ಸಿಗಬೇಕು ಅವರಿಗೆ ಸಿಗುವುದರಲ್ಲಿ ನಮ್ಮದೂ ಕೂಡ ಏನೂ ಅಭ್ಯಂತರ ಇಲ್ಲ. ಆದರೆ ಈ ಮಣಿಪಾಲ್ ಅಂಥ ಇನ್ಸ್ಟಿಟ್ಯೂಷನ್‌ಗಳಲ್ಲಿ, ಅಲ್ಲಿ ಇರಲಿಕ್ಕೆ ಒಂದು 10 ಸಾವಿರ ಪಾಪ್ಯುಲೇಷನ್ ಇಲ್ಲ. ಒಂದು 200-300 ಸೀಟ್ ಏನು ಅಂತ ಅಂದರೆ ಡೀಮ್ಡ್ ಯೂನಿವರ್ಸಿಟಿ ಅಂಥ ಮಾಡಿಕೊಂಡು ಎಲ್ಲಾ ಅವರಿಗೆ ಆದರೆ ಇದು ಕಷ್ಟವಾಗುತ್ತದೆ. ಅದಕ್ಕೆ ಹೇಗೆ ಮಾಡುತ್ತೀರ ಹೇಳಿ. ಈ ರಿಲಿಜಿಯಸ್ ಮೈನಾರಿಟಿಗೆ ಉಳಿದಂಥ ಲಿಂಗ್ವಿಸ್ಟಿಕ್ ಮತ್ತು ರಿಲಿಜಿಯಸ್ ಮೈನಾರಿಟೀಸ್‌ಗೆ ಕಾನ್ಸ್ಟಿಟ್ಯೂಷನಲೀ ಯಾವ ಗ್ಯಾರಂಟಿ ಕೊಡಬೇಕೋ ಅದನ್ನು ಕೊಡೋಣ. ಆದರೆ ಇಂಥವರು ಕೆಲವರು ಬರುತ್ತಾರಲ್ಲ, ಯಾವ ಜನಸಂಖ್ಯೆಯೂ ಇಲ್ಲ, ಭಾಷೆಯ ಹೆಸರಿನ ಮೇಲೆ ಡೀಮ್ಡ್ ಯೂನಿವರ್ಸಿಟಿ ಮಾಡಿಕೊಂಡು ಮಾಡುತ್ತಿದ್ದಾರೆ. ಅದಕ್ಕೆ ಏನು ಮಾಡುತ್ತೀರಿ ಎನ್ನುವುದನ್ನು ತಾವು ಸ್ವಲ್ಪ ಹೇಳಬೇಕು.

ಶ್ರೀ ಎಂ.ಸಿ.ನಾಣಯ್ಯ:- ಈಗ ಸರ್ಕಾರ ತೆಗೆದುಕೊಂಡಿರತಕ್ಕಂಥ ನಿಲುವು ಏನೆಂದರೆ, ಸುಪ್ರೀಂ ಕೋರ್ಟ್‌ನವರು ಉನ್ನಿಕೃಷ್ಣನ್ ಕೇಸ್‌ನಲ್ಲಿ, ಪ್ರೊಫೆಷನಲ್ ಕಾಲೇಜಿಗೆ ಅಡ್ಮಿಷನ್ ಮಾಡುತ್ತಾ ಇರತಕ್ಕಂಥಾದ್ದಕ್ಕೆ ಅವರೇ ಒಂದು ಸ್ಕೀಮನ್ನು ತಯಾರು ಮಾಡಿದ್ದರು. ಪ್ರೊಫೆಷನಲ್ ಕಾಲೇಜುಗಳ ಅಡ್ಮಿಷನ್ ಸ್ಕೀಮ್ ಸುಪ್ರೀಂ ಕೋರ್ಟ್‌ನವರು ಮಾಡಿರತಕ್ಕ ಸ್ಕೀಮ್ ತಾನೇ. 1992ರಲ್ಲಿ ಉನ್ನಿಕೃಷ್ಣನ್ ಕೇಸ್‌ನಲ್ಲಿ ಜಡ್ಜ್‌ಮೆಂಟನಲ್ಲಿ ಮಾಡಿರತಕ್ಕಂಥ ಸ್ಕೀಮ್, ನಾವು ಯಾವುದನ್ನು ಹೇಳಿದ್ದೇವೆ ಎಂದರೆ, since you have evolved a Scheme for admission to the professional colleges, all professional colleges will have to be brought within the purview of this scheme. Lingustic minorities, religious minorities, deemed Universities will also have to be brought under the purview of this scheme.ಎಂದು ಹೇಳಿರತಕ್ಕಂಥಾದ್ದು. ತಾವು ಹೇಳಿಕತಕ್ಕಂಥ ಆರ್ಟಿಕಲ್ 31 ಏನಿದೆ Article 31 guarantees the right to a minority institution, to religious minorities, to establish and administer the institutions. There is no bar to establish and administer institutions at all. What we have said before the Supreme Court is that whether it also includes admissions, does not the state government have a right to regulate the admissions in respect of professional colleges. For which the Supreme Court said 'This is a larger issue which requires to be interpreted by the Constitutional bench.' As such it has been referred to the Constitutional bench. Let us see what it will decide about this.

ಶ್ರೀ ಎಂ.ವೀರಪ್ಪ ಮೊಯಿಲಿ:- ಕಾನ್ಸ್ಟಿಟ್ಯೂಶನಲ್ ಬೆಂಚ್‌ನಲ್ಲಿ ಈ ವಿಚಾರ ಇದೆ ಎಂದು ತಿಳಿದುಕೊಂಡೂ ಕೂಡ ಕ್ಯಾಬಿನೆಟ್‌ನಲ್ಲಿ ಯಾರಿಗೆ ಮೆಚ್ಚಿಸಲಿಕ್ಕೆ ತಾವು ಇದನ್ನು ಮಾಡಿದ್ದುದು? It is one of the political concessions after the

elections. ಮೊಯಿಲಿಯವರ ಮೇಲೆ ಯಾರೋ ಒಂದು ವರ್ಗದವರು ಧಾಳಿ ಮಾಡಿದರು ಆದರೆ ನಿಮ್ಮ ಮೇಲೆ ಆ ಧಾಳಿ ಬಾರದೇ ಇರಲಿ ಎಂದು ಹೇಳಿ as a shield you should not use the government for that. That is all.

ಅಧ್ಯಕ್ಷರು:- ಈ ರಿಲೀಜಿಯಸ್ ಮೈನಾರಿಟಿ ಇನ್ಸ್ಟಿಟ್ಯೂಶನ್ಸ್ ಇರುತ್ತವಲ್ಲ, ಅದರಲ್ಲಿ ಅಡ್ಮಿಶನ್ಸ್ ಕೂಡ ಅವರಿಗೇ ಕೊಡುತ್ತಾರೋ ಅಂದರೆ ಮೈನಾರಿಟೀಸ್‌ಗೆ? ಏಕೆಂದರೆ ನನಗೆ ಈ ಬಗ್ಗೆ ಐಡಿಯಾ ಇಲ್ಲ.

SRI. M.C. NANAIAH:- In respect of minorities institutions and linguistic minorities institutions, to the extent of 50% of the seats can be done by those institutions and these seats will have to be confined only to the members of that particular community.

ಅಧ್ಯಕ್ಷರು:- ಕೊಡುತ್ತಾರಂತೆ?

SRI M.C. NANAIAH:- I think that is a bigger issue as to whether these institutions are giving only to them. Not only that whether the students of Karnataka only are getting it or students from else where are also getting it?

ಅಧ್ಯಕ್ಷರು:- ಆಲ್ ಓವರ್ ಇಂಡಿಯಾ ಯಾರಿಗಾದರೂ ಕೊಡಲಿ. ಮೈನಾರಿಟೀಸ್‌ಗೆ ಕೊಡುತ್ತಾರೆ ಎಂದು ಹೇಳಿ. ಎಲಿಜಿಬಲ್ ಸ್ಟೂಡೆಂಟ್ಸ್ ಬರದೇ ಹೋದರೆ ಬೇರೆಯವರಿಗೆ ಕೊಡಬಹುದು ಎಂದು ಅಥವಾ ಅಲ್ಲಿ ಇನ್ನೊಂದು ರೈಡರ್ ಇಟ್ಟುಕೊಂಡಿರುತ್ತಾರೆಯೇ?

ಶ್ರೀ ಎಂ.ವೀರಪ್ಪಮೊಯಿಲಿ:- ಡೀಮ್ಡ್ ಯೂನಿವರ್ಸಿಟಿ ಬಿಟ್ಟು.....

ಅಧ್ಯಕ್ಷರು:- ಬೇಕಾದರೆ ವೆರಿಫೈ ಮಾಡಿ ನೋಡಿ. ಎಜ್ಯುಕೇಶನ್ ಮಿನಿಸ್ಟರ್ ಹೇಳಬೇಕು. ಮೈನಾರಿಟೀಸ್‌ಗೆ ಕೊಡುತ್ತಾರೋ? ಡೀಟೇಲ್ಸ್ ತರಿಸಿ.

Dr.U.CHITHARANJAN:- As far as I know the basic conception of minority institution has not been defined by the Supreme Court.

ಶ್ರೀ ಎಂ.ವೀರಪ್ಪಮೊಯಿಲಿ:- ಮೈನಾರಿಟೀಸ್ ಬಗ್ಗೆ ತಮ್ಮ ವ್ಯೂ ಏನಿದೆ ಎಂದು ನಮಗೆ ಗೊತ್ತಿದೆ. ಇಲ್ಲದಿದ್ದರೆ ನಿಮ್ಮ ವ್ಯೂ ಏನಿದೆ...... your views are known.

ಡಾ:ಎಂ.ಪಿ.ಕರ್ಕಿ:- ನೀವು ಹೇಳಿದ ತರಹ ನಾವು ಇಲ್ಲ.

Dr. U. CHITHARANJAN:- Basic question one must understand. What is a minority institution? Whether the management is to be minority? Whether the teachers should be minorities? Whether the students should be minorities? This basic question- Law Minister will enlighten me -This has not been yet defined by the Supreme Court. It is a basic issue.

ಶ್ರೀ ಎಂ.ವೀರಪ್ಪ ಮೊಯಿಲಿ:- ಲೇಟೆಸ್ಟ್ ಆಗಿ ಸುಪ್ರೀಂ ಕೋರ್ಟ್‌ಪ್ರಕಾರ ಕೂಡ Institutions should be managed by them Students should also be.ಆ ರಿಸರ್ವೇಶನ್ ಏನು 50 ಪರ್ಸೆಂಟ್ ಕೊಟ್ಟಿದ್ದಾರೆ, ಅದು ಆಯಾಯ ಮೈನಾರಿಟಿ ಇನ್ಸ್ಟಿಟ್ಯೂಶನ್‌ದ್ದು ಏನು ನೇಚರ್ ಇದೆ, ಆ ಮೈನಾರಿಟಿ ಸ್ಟೂಡೆಂಟ್ಸ್‌ನ್ನೇ ಅಲ್ಲಿ ಅಡ್ಮಿಟ್ ಮಾಡಬೇಕೆಂದು ಈಗ ಇರತಕ್ಕದ್ದು. ಅದರ ಪ್ರಕಾರ ಗೈಡ್‌ಲೈನ್ಸ್ ಇದೆ. They have given the guidelines. Of course if a muslim institution is there for ex. Bijapur- they have to admit. In Unnikrishnan case judgment is given. They can get from outside or inside. That is different. But, it is given to their discretion. In Bijapur, for example, muslim institution, they have to admit only the muslims.ಉದಾಹರಣೆಗೆ ಇಲ್ಲಿ ತುಳು ಮೈನಾರಿಟೀಸ್ ಅಂತ ಹೇಳಿ ಲಿಂಗ್ವಿಸ್ಟಿಕ್ ಮೈನಾರಿಟಿ ಯಾವುದು ಕೊಟ್ಟಿದ್ದಾರೆ ಅವರು Only Tulu speaking students, they should admit. In Konkani, only Konkani speaking students. they should admit. I know it. That is according to the Supreme Court decision. Otherwise you can challenge it ಸುಪ್ರಿಂ ಕೋರ್ಟ್‌ನಲ್ಲಿ ತಾವು ಚಾಲೆಂಜ್ ಮಾಡಬಹುದು.

ಶ್ರೀ ಎಸ್.ಸುರೇಶ್ ಕುಮಾರ್:- ಒಂದು ನಿಮಿಷ It was so tempting that even Ramakrishna Mission wanted to claim themselves as minorities institution to take protection under it. ರಾಮಕೃಷ್ಣ ಮಿಶನ್ ಅಂತ ಒಂದು ಸಂಸ್ಥೆ, ಅವರೂ ಕೂಡ ನಾವು ಮೈನಾರಿಟಿ ಎಂದು ಹೇಳುವಂಥ ಸ್ಥಿತಿಗೆ ಬರುವ ಹಾಗೆ ನಾವು ಮಾಡಿದ್ದೇವೆ.

ಅಧ್ಯಕ್ಷರು:- ಯಾರ್‍ಯಾರು ಮೈನಾರಿಟಿಗೆ ಬಂದಿದ್ದಾರೆ ಎಂದು ಯಾರಿಗೆ ಗೊತ್ತು?

ಶ್ರೀ ಎಂ.ವೀರಪ್ಪ ಮೊಯಿಲಿ:- ಈಗ ನ್ಯಾಷನಲ್ ರಿಲೀಜಿಯಸ್ ಅಂಡ್ ಲಿಂಗ್ವಿಸ್ಟಿಕ್ ಮೈನಾರಿಟಿ ಕಮಿಶನ್ ಎಂದು ಇದೆ. ಅವರು ಆಗಾಗ್ಯೆ ಕೆಲವು ಕ್ರೈಟೇರಿಯಾಗಳನ್ನು ಹಾಕುತ್ತಾರೆ. ಹಾಗೆ ಅವರು ಹಾಕಿದಾಗ ಕೆಲವು ಕೋರ್ಟುಗಳು ಕೂಡ have pronounced rulings over this. ಅದಕ್ಕೆ ಲೆಜಿಸ್ಲೇಶನ್ ಮಾಡುವಾಗ ಇದನ್ನೆಲ್ಲ ನೀವು ಪರಿಗಣನೆಗೆ ತೆಗೆದುಕೊಂಡು, which are the minority institutions, what should be the criteria to admit those students.ಎಂದು ಹಾಕತಕ್ಕಂಥಾದ್ದನ್ನು ಮಾಡಬಹುದು. ಆದರೆ ಲಿಂಗ್ವಿಸ್ಟಿಕ್‌ಗೆ ನೀವು ಸರಿಯಾದ separate ಸ್ಟೇಟಸ್‌ನ್ನು ಕೊಡದೇ ಇದ್ದರೆ it will be in contravention of the constitutional right, guarantee that is given. ಅದನ್ನು ಮಾಡುತ್ತೇವೆ ಎಂದು ತಾವು ಹೇಳುವುದಕ್ಕೆ ಹೋಗಿದ್ದೀರಿ, ಅದನ್ನು ಮಾಡುವುದಕ್ಕೆ ಆಗುವುದಿಲ್ಲವೆಂದು ಗೊತ್ತಿದ್ದೂ ಕೂಡ ಇದನ್ನು ಮಾಡುವುದು ಯಾರನ್ನು ಸಂತೋಷಪಡಿಸುವುದಕ್ಕೆ ಎಂದು ನನಗಂತೂ ಅರ್ಥವಾಗುತ್ತಿಲ್ಲ. ಆದರೆ ಒಂದು ವಿಷಯವನ್ನು ನಮ್ಮ ಸ್ನೇಹಿತರು ಮಣಿಪಾಲ್‌ನವರ ಬಗ್ಗೆ ಹೇಳಿದರು.

ಮಣಿಪಾಲಿನದು ಬಿಡಿ ಒಂದು ಮಾತನ್ನು ಹೇಳಿದರೆ ಈಗಾಗಲೇ ನಮಗೆ ಅವರ ಉದಯವಾಣಿ ಪತ್ರಿಕೆಯಲ್ಲಿ they have blacked out me ಒಂದು ಸ್ಪೀಚ್, ಒಂದು ಮಾತು ಯಾವುದೂ ಕೂಡ ಅದರಲ್ಲಿ ಬರುವುದೇ ಇಲ್ಲ. Because I fought against the capitation fees, that is the price I am paying for the sin of criticising the capitation fees. But, I continue to commit that kind of a sin to fight against the capitation fees. Nobody can threaten me.ನಮ್ಮ ಉಸಿರು ಇರುವವರೆಗೆ ಯಾವುದು ಈ ಡಿ ವ್ಯಾಲ್ಯುಯೇಶನ್ ಇದೆ, ಅಪಮೌಲ್ಯಗಳು ಸಮಾಜದಲ್ಲಿ ಇದೆ, ಅದರ ವಿರುದ್ಧವಾಗಿ ನಾವು ಹೋರಾಟ ಮಾಡುತ್ತೇವೆ. ತಮಗೆ ಗೊತ್ತಿದೆ, ಅದರ ಬಗ್ಗೆ ಅವರಿಗೆ ವಿಶೇಷವಾದ ಆಸಕ್ತಿ ಇದೆ. ನಮ್ಮ ವಿಷಯವನ್ನು ಆ ಪತ್ರಿಕೆಯವರು ಹಾಕುವುದು ಬೇಡ. ಅವರ ಜನ್ಮದಲ್ಲಿ ನಮ್ಮ ಹೆಸರು ಹಾಕುವುದು ಬೇಡ. ಸತ್ತರೂ ಅವರು ಪತ್ರಿಕೆಯಲ್ಲಿ ಹಾಕುವುದು ಬೇಡ. we don't mind.

ಅಧ್ಯಕ್ಷರು:- ನಿಮಗೆ ಇನ್ನೂ ಮೂರು ಜನರೇಶನ್‌ಗೆ ಆಗುವಷ್ಟು ಪಬ್ಲಿಸಿಟಿ ಸಿಕ್ಕಿದೆ. Why should you worry?

ಒಬ್ಬರು ಮಾನ್ಯ ಸದಸ್ಯರು:- ಇದು ಅವರ ಮನಸ್ಸಿಗೆ ನೋವಾಗಿದೆ ಎಂದು ಅರ್ಥ.

ಶ್ರೀ ಎಂ.ವೀರಪ್ಪ ಮೊಯಿಲಿ:- ಅಲ್ಲಲ್ಲ, ಹೋರಾಟ ಮಾಡುವಾಗ ನೋವು ಬಂದೇ ಬರುತ್ತದೆ. ಈಗ ವಾಟಾಳ್ ನಾಗರಾಜ್‌ರವರು ಕನ್ನಡಕ್ಕಾಗಿ ಎಷ್ಟು ನೋವು ತಿಂದಿದ್ದಾರೆ? ಆದ್ದರಿಂದ ನೋವನ್ನು ನಾವು ಹೇಳಿಕೊಳ್ಳಬೇಕಾಗುತ್ತದೆ. ಆದರೆ ಆ ನೋವಿನಿಂದ ನಾವು ನಮ್ಮ ಜೀವನದಲ್ಲಿ ಹಿಂಜರಿಯುತ್ತೇವೆ ಎನ್ನುವ ಪ್ರಶ್ನೆ ಇಲ್ಲ. ಯಾರಿಗಾದರೂ ನಮಗೆ ನೋವು ಮಾಡಿ ಇವರನ್ನು ಆ ತತ್ವದಿಂದ, ಸಿದ್ಧಾಂತದಿಂದ ಬೇರೆ ದಾರಿಗೆ ಕೊಂಡುಹೋಗುತ್ತೇವೆ ಎಂದು ಹೇಳಿದರೆ ಅದು ಅವರ ಹಗಲುಕನಸು ಅಷ್ಟೆ.

ಅಧ್ಯಕ್ಷರು:- ಈಗ ಮೊಯಿಲಿಯವರೇ, ನಿಮ್ಮ ವಿಚಾರ ಅವರು ಬರೆಯದೇ ಹೋಗುವುದರಿಂದ ನಿಮಗೆ ಏನೂ ನಷ್ಟ ಇಲ್ಲ. ಅವರಿಗೇ ನಷ್ಟ. ನಿಮಗೆ ಇಷ್ಟು ಪಬ್ಲಿಸಿಟಿ ಸಿಕ್ಕಿದೆ ಎಂದರೆ, ಅದು ಇನ್ನೂ ಮೂರು ಜನರೇಶನ್‌ಗೆ ಸಾಕಾಗುತ್ತದೆ. ನಿಮ್ಮ ವಿಚಾರ ಬರೆದರೆ ಅವರ ಸರ್ಕ್ಯುಲೇಶನ್ ಬೂಸ್ಟ್‌ಅಪ್ ಆಗುತ್ತದೆ. ಬರೆಯದೇ ಹೋದರೆ ಅವರಿಗೇ ನಷ್ಟ. ಬೇಡ ಬಿಡಿ. ಅವರು ಬರೆಯುವುದು ಬೇಡ. At least let them take clue from this and start covering your proceedings.

ಶ್ರೀ ಎಂ.ವೀರಪ್ಪ ಮೊಯಿಲಿ:- ಪ್ರಾರಂಭದಲ್ಲಿ ಬರೆಯುತ್ತಿದ್ದರು. ಯಾವಾಗಲೂ ಮನುಷ್ಯ cannot be bent. Then, they thought that by doing this, they can bend me. ಆದರೆ ಅದು ಆಗುವುದಿಲ್ಲ ಎಂದು ಹೇಳಿ ಬಿಟ್ಟುಬಿಟ್ಟಿದ್ದಾರೆ. ಆದ್ದರಿಂದ ನಾನು ಮಣಿಪಾಲ್‌ನವರಿಗೆ ಸಪೋರ್ಟ್ ಮಾಡುವುದು, ಡೀಮ್ಡ್ ಯೂನಿವರ್ಸಿಟಿಗೆ ಮೈನಾರಿಟಿ ಅಂತ ಹೇಳಿ ಪ್ರಶ್ನೆನೇ ಬರುವುದಿಲ್ಲ. ಇದು ನಿಮಗೆ ಕಿವಿಮಾತು ಹೇಳಿದೆ ಅಷ್ಟೆ. ಏಕೆಂದರೆ ಶಿಕ್ಷಣ ಬಗ್ಗೆ ಹೇಳಬೇಕು ಎಂದರೆ ಅದು ದೊಡ್ಡ ಸಾಗರ. ಆದ್ದರಿಂದ ಅದರ ಬಗ್ಗೆ ಇಲ್ಲಿಗೇ ನಿಲ್ಲಿಸಿಬಿಡುತ್ತೇನೆ. ಮತ್ತೆ ಸಮಾಜ ಕಲ್ಯಾಣ ಬಗ್ಗೆ ಎರಡು ಮಾತು. ಏಕೆಂದರೆ ಇವತ್ತು ಪ್ರಥಮ ಬಾರಿಗೆ ನಮ್ಮಲ್ಲಿ ಸರಿಯಾದಂಥ ಮೀಸಲಾತಿ ನೀತಿಯನ್ನು ಹಾವನೂರು ಕಮಿಷನ್

ಪ್ರಕಾರ ಜಾರಿಗೆ ತಂದವರು ದಿವಂಗತ ದೇವರಾಜ್ ಅರಸು ಅವರು. ಈಗ ನಾವು, for the first time he brought in a concept of political reservation. ಗ್ರಾಮಪಂಚಾಯತಿ ಮತ್ತು ತಾಲ್ಲೂಕು ಪಂಚಾಯಿತಿ ಎಲೆಕ್ಷನ್ ಕಾಲದಲ್ಲಿ ಅದೇ ರಿಸರ್ವೇಶನ್ ಪಾಲಿಸಿಯನ್ನು ತಾವು ಮುಂದುವರೆಸಿದ್ದೀರಿ. ಆದರೆ ಅಲ್ಲಿ ಕೆಲವು ಅಪಾಯಿಂಟ್‌ಮೆಂಟ್ಸ್ ಏನು ಬಾಕಿ ಇವೆ, ಈಗ ಕೆಲವು ಅಪಾಯಿಂಟ್ ಪ್ರೊಸೆಸ್ ಕಂಪ್ಲೀಟ್ ಆಗಿದೆ, ಕೆಲವು ಆಗುತ್ತಾ ಇವೆ. ಕೆಲವು ಕೆ.ಪಿ.ಎಸ್.ಸಿ.ನಲ್ಲಿದೆ ಮತ್ತೊಂದು ಇದೆ. ಇದರ ಬಗ್ಗೆ you have not finally... ಮಂತ್ರಿಗಳು ಎಲ್ಲಿಗೆ ಹೋಗಿದ್ದಾರೆ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಇಷ್ಟು ಹೊತ್ತು ಇದ್ದರು.

ಶ್ರೀ ಎಂ.ವೀರಪ್ಪ ಮೊಯಿಲಿ:- ಪರವಾಗಿಲ್ಲ, ಬೇರೆ ಸಚಿವರು ಇದ್ದಾರೆ. It is enough for me.

ಅಧ್ಯಕ್ಷರು:- ಅಧಿಕಾರಿಗಳು ಅಲ್ಲಿ ಇದ್ದಾರೆ. They will take down.

ಶ್ರೀ ಎಂ.ವೀರಪ್ಪ ಮೊಯಿಲಿ:- ಆದ್ದರಿಂದ ಇವತ್ತು ತಾವು ಹಿಂದೆ ತಂದ ರಿಸರ್ವೇಶನ್ ಪಾಲಿಸಿಯನ್ವಯ ತಾಲ್ಲೂಕು ಪಂಚಾಯತಿ ಚುನಾವಣೆ ಮಾಡಿದ್ದೀರಿ, ಜಿಲ್ಲಾ ಪರಿಷತ್ ಚುನಾವಣೆ ಮಾಡಿದ್ದೀರಿ, ಆದರೆ ನಿಮ್ಮ ಎಲ್ಲ ಅಪಾಯಿಂಟ್‌ಮೆಂಟ್ಸ್ ಬಗ್ಗೆ ಏನು ಪ್ರಕ್ರಿಯೆಯನ್ನು ಪ್ರಾರಂಭ ಮಾಡಿದ್ದೀರಿ, ಕೆಲವು ಫೈನಲೈಸ್ ಆಗಿದೆ. ಕೆಲವು ಲಿಸ್ಟ್ ಫೈನಲೈಸ್ ಆಗಿದೆ. ಕೆಲವು ಪ್ರೊಸಸ್‌ನಲ್ಲಿವೆ. ನನ್ನ ಮಾಹಿತಿ ಪ್ರಕಾರ ನೀವು ಅಪಾಯಿಂಟ್‌ಗೆ ಈ ಪ್ರೊಸಸ್‌ನ್ನು ಇನ್ನೂ ಮಾಡಿಲ್ಲ. ಇದರ ಬಗ್ಗೆ ಸ್ಪಷ್ಟವಾದ ನೀತಿಯನ್ನು ಇವತ್ತು ತಾವು ಹೇಳಬೇಕಾಗುತ್ತದೆ. ಏಕೆಂದರೆ ಡಿಸೆಂಬರ್‌ಗೆ ನೀವು ಬಂದು ಒಂಬತ್ತು ತಿಂಗಳಾಯಿತು. ಅನೇಕ ಉಪಾಧ್ಯಾಯರ ನೇಮಕಾತಿ ಏನು ಇದೆ, ಅದು ನೆನೆಗುದಿಗೆ ಬಿದ್ದಿದೆ. ಸಬ್ ಇನ್‌ಸ್ಪೆಕ್ಟರ್ ಸೆಲೆಕ್ಷನ್ ಮತ್ತು ಬೇರೆ ಬೇರೆ ಇಲಾಖೆಗಳಲ್ಲಿ ಏನು ಪ್ರಕ್ರಿಯೆ ಪ್ರಾರಂಭ ಮಾಡಿದ್ದೀರಿ, ಇದರ ಬಗ್ಗೆ ನೀವು ಒಂದು ಕ್ಯಾಬಿನೇಟ್ ಸಬ್ ಕಮಿಟಿಯನ್ನು ಮಾಡಿದ್ದೀರಿ ಎಂದು ಪತ್ರಿಕೆಯಲ್ಲಿ ನೋಡಿದ್ದೇವೆ.

ಒಬ್ಬರು ಮಾನ್ಯ ಸದಸ್ಯರು:- ಇದರಲ್ಲಿ ದ್ವಂದ್ವ ಏನಿದೆ?

ಶ್ರೀ ಎಂ.ವೀರಪ್ಪ ಮೊಯಿಲಿ:- ದ್ವಂದ್ವ ಏನೂ ಇಲ್ಲ. ಜಿಲ್ಲಾ ಪರಿಷತ್ ತಾಲ್ಲೂಕ್ ಪಂಚಾಯತ್ ಚುನಾವಣೆಯಲ್ಲಿ ನಮ್ಮ ರಿಸರ್ವೇಶನ್ ಪಾಲಿಸಿಯನ್ನು ಇಂಪ್ಲಿಮೆಂಟ್ ಮಾಡಿದ್ದೀರಿ. ಆದರೆ ಅಪಾಯಿಂಟ್‌ಮೆಂಟ್ಸ್ ಬಗ್ಗೆ ಮೀನಾಮೇಷ ಎಣಿಸುತ್ತಿದ್ದೀರಿ ಎಂದು ನನಗೆ ಅನುಮಾನ ಇದೆ.

5.30 ಪಿ.ಎಂ.

ಶ್ರೀ ಬಸವರಾಜ್:- ಮಾನ್ಯ ಅಧ್ಯಕ್ಷರೇ, ತಾವು ಯಾವ ದೃಷ್ಟಿ ಇಟ್ಟುಕೊಂಡು ರಿಸರ್ವೇಷನ್ ಮಾಡಿದ್ದಾರೆಂದು ಹೇಳುತ್ತಿದ್ದಾರೋ ನನಗೆ ಅರ್ಥವಾಗುತ್ತಾ ಇಲ್ಲ. ಬೆಂಗಳೂರು ಗ್ರಾಮಾಂತರದಲ್ಲಿ, ಪರಿಶಿಷ್ಟ ಪಂಗಡದವರು 49,305 ಜನ ಇದ್ದಾರೆ. ಇವರಿಗೆ ಮೀಸಲಾತಿ ಕೊಟ್ಟಿರುವುದು ಎಷ್ಟು ಗೊತ್ತೆ. ಒಬ್ಬರೇ ಒಬ್ಬರಿಗೆ ಕೊಟ್ಟಿದ್ದಾರೆ. ಮತ್ತೆ ಹಾಸನದಲ್ಲಿ ಬಂದರೆ, 16,581 ಜನ ಇದ್ದಾರೆ, ಇವರನ್ನು ಇಲ್ಲಿ ಕಡೆಗಣಿಸಿಬಿಟ್ಟರು. ಅಲ್ಲಿ ಯಾರೂ ಇಲ್ಲವೇ ಇಲ್ಲ; ಪರಿಶಿಷ್ಟ ಪಂಗಡದವರು ಇಲ್ಲವೆಂದು, ಅವರಿಗೆ ಏನೂ ಕೊಡುವುದು ಬೇಡವೆಂದರು. ಇದನ್ನು ಮಾನ್ಯ ಮೊಯಿಲಿಯವರು ಯಾವರೀತಿ ಪ್ರಶಂಸೆ ಮಾಡುತ್ತಾ ಇದ್ದಾರೋ ನನಗೆ

ಅರ್ಥವಾಗುತ್ತಾ ಇಲ್ಲ. ಮತ್ತೆ ಮಂಡ್ಯದಲ್ಲಿ 11,936 ಜನರು ಇದ್ದಾರೆ. ಅಲ್ಲಿಯೂ ಕೂಡ ಒಂದೇ ಒಂದು ಸೀಟು ಮೀಸಲಾತಿ ಕೊಟ್ಟಿಲ್ಲ. ಮೀಸಲಾ[illegible]ಗ್ಗೆ ಅಲ್ಲಿಯ ಜನರು ಏನು ಸೌಲಭ್ಯ ಇದೆ, ಸೌಕರ್ಯ ಸಿಗುತ್ತದೆ ಎನ್ನುವುದನ್ನು ರೆಪ್ರಸೆಂಟ್ ಮಾಡುವುದಕ್ಕೆ ಅವರಿಗೆ ಅವಕಾಶ ಸಭೆಯಲ್ಲಿ ಇಲ್ಲವೆಂದು ಹೇಳಿದರೆ, ನಾವು ಯಾವರೀತಿ ಇದನ್ನು ಪ್ರಶಂಸೆ ಮಾಡಬೇಕಾಗಿದೆ. ಇದನ್ನು ಮಾನ್ಯ ಮೊಯಿಲಿಯವರು ಸ್ವಲ್ಪ ವಿಚಾರ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ:- ಈಗ ಗ್ರಾಮಪಂಚಾಯಿತಿಗೆ ಡಿಸ್ಟ್ರಾರ್ಷನ್ ಆಗಿಲ್ಲ. ಜಿಲ್ಲಾ ಪರಿಷತ್ತು ಮತ್ತು ತಾಲ್ಲೂಕು ಪಂಚಾಯಿತಿಗಳ ಬಗ್ಗೆ ಹೋರಾಟ ಮಾಡಿದ್ದೇವೆ. ತಾವು ಅಸೆಂಬ್ಲಿಯಲ್ಲಿ ಇದ್ದಿರೋ ಇಲ್ಲವೋ. ಆದರೆ ವಿಷಯ ಇಷ್ಟೆ. ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತಿನಲ್ಲಿ ರಿಸರ್ವೇಷನ್ ಮಾಡುವಾಗ, ಸಾಕಷ್ಟು ಡಿಸ್ಟ್ರಾರ್ಷನ್ಸ್ ಆಗಿದೆ ಎಂಬ ಹೋರಾಟವನ್ನು ನಾವು ಅಸೆಂಬ್ಲಿಯಲ್ಲಿ ಮಾಡಿದ್ದೇವೆ. ಇಲ್ಲಿ ಬಹಳ ಚರ್ಚೆಯಾಯಿತು, ಬಿರುಸಿನಿಂದ ಚರ್ಚೆಯಾಯಿತು. ಹೊರಗಡೆಯೂ ನಾವು ಇದರ ಬಗ್ಗೆ ಹೋರಾಟ ಮಾಡಿದ್ದೇವೆ. ಜಿಲ್ಲಾಮಟ್ಟದಲ್ಲಿ ನಾವು ಚಳುವಳಿ ಮಾಡಿದ್ದೇವೆ. ಇತ್ತೀಚೆಗೆ ಈ ಸರ್ಕಾರ ಬಂದಮೇಲೆ ಅವರು ಏನು ಮಾಡಿದ್ದಾರೆ, ಅದನ್ನು ಸರಿಪಡಿಸತಕ್ಕ ಅವಶ್ಯಕತೆ ಇದೆ. ಅದನ್ನು ನಾನು ಒಪ್ಪುತ್ತೇನೆ. ಆಮೇಲೆ ಗ್ರಾಮಪಂಚಾಯಿತಿಗಳಲ್ಲಿ 33 ಪರ್ಸೆಂಟ್ ಮಹಿಳೆಯರಲ್ಲಿ 43.6 ಪರ್ಸೆಂಟ್ ರಿಸರ್ವೇಶನ್ ಸಿಕ್ಕಿತ್ತು. ಅದೇಪ್ರಕಾರ ಗ್ರಾಮಪಂಚಾಯಿತಿಗಳಲ್ಲಿ ವ್ಯವಸ್ಥಿತವಾಗಿ ಎಷ್ಟು ಕೊಟ್ಟಿದ್ದೇವೋ ಅದಕ್ಕಿಂತ 10-15-20 ಪರ್ಸೆಂಟ್ ಹೆಚ್ಚು ಸೀಟುಗಳು ಅವರಿಗೆ ಸಿಕ್ಕಿವೆ. ಆದ್ದರಿಂದ, ಇವತ್ತು ನೇಮಕಾತಿಗೆ ಸರಿಯಾದ ನೀತಿಯನ್ನು ಮಾಡಲಿಲ್ಲ. ಮೈನಾರಿಟೀಸ್‌ಗೂ ಕೂಡ ನಾವು 6 ಪರ್ಸೆಂಟ್ ಮಾಡಿದ್ದೆವು. ಆಮೇಲೆ 50 ಪರ್ಸೆಂಟ್‌ಗೆ ಲಿಮಿಟ್ ಮಾಡಬೇಕೆಂದು ಹೇಳಿದಾಗ, ಮೈನಾರಿಟೀಸ್‌ಗೆ, ರಿಲಿಜಿಯಸ್ ಮೈನಾರಿಟೀಸ್‌ಗೆ ಒಂದು ರಿಸರ್ವೇಷನ್ ಕಾನ್‌ಸೆಪ್ಟ್ ಮೊದಲನೇ ಬಾರಿ ರಾಜ್ಯದಲ್ಲಿ ಇಂಟ್ರಡ್ಯೂಸ್ ಮಾಡಿದ್ದೇವೆ. ಅದು ಈಗ 4 ಪರ್ಸೆಂಟ್ ಬಂದಿದೆ. ಆದ್ದರಿಂದ, ನೇಮಕಾತಿಗೂ ಕೂಡ, ದಯಮಾಡಿ ತಕ್ಷಣ ನಿರ್ಣಯ ಮಾಡಬೇಕಾಗುತ್ತದೆ. ಇಲ್ಲದಿದ್ದರೆ, ನೇಮಕಾತಿ ಮಾಡುವುದಕ್ಕಾಗುವುದಿಲ್ಲ. ಮತ್ತು ರಿಸರ್ವೇಷನ್ಸ್ ಸರಿಯಾಗಿ ಸಿಕ್ಕುವುದಿಲ್ಲ. ನಾನು ಇದರಲ್ಲಿ ಎರಡು ಮೂರು ಪಾಯಿಂಟ್ಸ್ ಹೇಳಿದೆ. ಮತ್ತೆ ಪರ್ಮನೆಂಟ್ ಬ್ಯಾಕ್‌ವರ್ಡ್‌ಕ್ಲಾಸ್ ಕಮೀಷನ್ ಇದೆ. ಪರ್ಮನೆಂಟ್ ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ಇದ್ದರೆ, ನೀವು ಆಗಾಗ ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ತಾವೇನು ಮಾಡಿದಿರಿ, ಅದನ್ನು ಪೊಲಿಟಿಕಲ್ ಅಪಾಯಿಂಟ್‌ಮೆಂಟ್ ಎಂದು ತಿಳಿದುಕೊಂಡು, ಅದನ್ನು ರದ್ದು ಮಾಡಿದಿರಿ. ಸರಿ, ತಾವು ಅದನ್ನು ರದ್ದು ಮಾಡಿದಿರಿ, ಅದಕ್ಕೆ ನಮ್ಮ ವಿವಾದ ಇಲ್ಲ. ಆದರೆ, ಹೊಸದಾಗಿ ಖಾಯಂ ಬ್ಯಾಕ್‌ವರ್ಡ್‌ಕ್ಲಾಸ್ ಕಮೀಷನ್ ತಕ್ಷಣ ಮಾಡಬೇಕಾಗುತ್ತದೆ. 9 ತಿಂಗಳಾಯಿತು; ಖಾಯಂ ಹಿಂದುಳಿದವರ್ಗದವರ ಆಯೋಗವನ್ನು ತಾವು ಮಾಡಿಯೇ ಇಲ್ಲ. ಇದು ಸರ್ಕಾರದ ದೊಡ್ಡ ಲೋಪ. ಮಾನ್ಯ ಸದಸ್ಯರು, ಇದನ್ನು ದ್ರೋಹವೆಂದು ಹೇಳುತ್ತಿದ್ದಾರೆ. ಇದು ನನ್ನಮಟ್ಟಿಗೆ ದೊಡ್ಡಲೋಪವೆಂದು ಹೇಳುತ್ತೇನೆ. ಮತ್ತೆ ಯಾವುದು ಎನ್ನುವುದನ್ನು ಅವರಿಗೇ ಬಿಡುತ್ತೇನೆ, ಅವರೇ ನಿರ್ಣಯ ಮಾಡಲಿ. ಆದರೆ, ಹಿಂದುಳಿದ ವರ್ಗದವರ ಆಯೋಗದ ಬಗ್ಗೆ ಆಸಕ್ತಿ ಇರಬೇಕಾಗುತ್ತದೆ. You will have to fight Mr.Jigajinagi. ಯಾವಾಗಲೂ

ಮಂತ್ರಿಗಳು ಯಾವರೀತಿ ಇರಬೇಕೆಂದರೆ, as a Social Welfare Minister, you must lead some sort of Dalit movement in the Cabinet. ನೀವು ಫೈಟ್ ಮಾಡುತ್ತೀರಿ, ನನಗೆ ಗೊತ್ತಿದೆ. ಕೆಲವು ಪತ್ರಿಕೆಗಳಲ್ಲೂ ಬರುತ್ತಾ ಇದೆ. ಅದು ಎಷ್ಟು ಸತ್ಯವೋ ಗೊತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಅವರು ಹೇಳುವುದಕ್ಕೂ ಸ್ವಲ್ಪ ಆಧಾರಗಳಿವೆಯೆಂದು ನನಗನಿಸುತ್ತದೆ. ನಿಮ್ಮನ್ನೇ ಕುರಿತು ಏಕೆ ಹೇಳುತ್ತಿದ್ದಾರೆಂದರೆ ನಿಮ್ಮ ಮೇಲೆಯೇ ಗುಸು,ಗುಸು ಶುರುವಾಗಿರುವುದು. ಸಚಿವ ಸಂಪುಟದಲ್ಲಿ ಧೈರ್ಯವಾಗಿ ನಿಂತು, ನಮಗೆ ಅನ್ಯಾಯವಾಗಿದೆ ಎಂದು ಪ್ರತಿಭಟನೆ ಮಾಡಿದಿರಿ ಎಂದು ಬಹಳ ದೊಡ್ಡ ಪ್ರಚಾರ ನಡೆದಿದೆ. ಅದರ ಜೊತೆಗೆ, ಇತ್ತೀಚಿನ ದಿನಗಳಲ್ಲಿ, ಅತೃಪ್ತ ಶಾಸಕರುಗಳೆಲ್ಲ ಗುಂಪು ಸೇರುತ್ತಿದ್ದೀರಿ ಎನ್ನತಕ್ಕಂಥ ನಿದರ್ಶನಗಳು. ನಾನು ನಿಮ್ಮ ಸರ್ಕಾರ ಇರಬೇಕೆಂದು ಹೇಳುವವನು. ನೀವು ಏಕೆ ಬಿಡಿ ಎಂದು ಹೇಳುತ್ತಿದ್ದೀರಿ. ನೀವು ಇರಿ, ನಮ್ಮದೇನೂ ಅಭ್ಯಂತರವಿಲ್ಲ, ನಮ್ಮದೇನೂ ತಕರಾರು ಇಲ್ಲ. ಇವತ್ತು 70 ಶಾಸಕರ ಪ್ರತ್ಯೇಕ ಸಭೆ ಎಂದು ಪತ್ರಿಕೆಯಲ್ಲಿ ಬಂದಿದೆ. ಈ ಪತ್ರಿಕೆ, ಎಲ್ಲರೂ ಓದತಕ್ಕ ಪತ್ರಿಕೆ. ನೀವು ಯಾವ ಪತ್ರಿಕೆ ಎಂದು ಕೇಳಿದರೆ, ಇದೇನು ತಮಿಳು, ತೆಲುಗು ಅಥವಾ ಮಲೆಯಾಳಿ ಪತ್ರಿಕೆಯೇ? ಇದು ಕೂಡ ಕನ್ನಡ ಪತ್ರಿಕೆ. ಮಂತ್ರಿಗಳು ಗುಟ್ಟಾಗಿ ಓದತಕ್ಕ ಪತ್ರಿಕೆ. 70 ಜನ ಶಾಸಕರು ತಮ್ಮ ನಾಯಕರ ಮೇಲೆ, ಆಕ್ರೋಶವನ್ನು ಪ್ರದರ್ಶನ ಮಾಡಿದ್ದಾರೆ. ಸರ್ಕಾರದ ವಿರುದ್ಧ ಬಂಡಾಯ ಎದ್ದಿದ್ದಾರೆ. ನಾನು ಇದರಲ್ಲಿ ನಿಮ್ಮನ್ನೇ ಅಧ್ಯಕ್ಷರು ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಯಾರು ಸೇರಿದ್ದರು, ಎಲ್ಲಿ ಸೇರಿದ್ದಿರಿ. ನೀವು ಇದನ್ನು ಸತ್ಯಕ್ಕೆ ದೂರವಾದುದು ಎಂದು ಹೇಳುವುದಕ್ಕೆ ಸಾಧ್ಯವೇ ಇಲ್ಲ. ನಿಮ್ಮ ಆತ್ಮ ಮುಟ್ಟಿ ನೋಡಿಕೊಳ್ಳಿ ಎಂದು ಮೊದಲಿಂದಲೂ ಹೇಳುತ್ತಿದ್ದೇನೆ. ಇದು ''ಸಂಜೆ ನುಡಿ'' ಎಂಬ ಪತ್ರಿಕೆ, ಸಂಜೆ ಬರತಕ್ಕ ಪತ್ರಿಕೆಗಳು. ಈ ಪತ್ರಿಕೆಗಳನ್ನು ನೀವು ಯಾರೂ ಓದುವುದಿಲ್ಲವೇ, ಇದನ್ನು ಯಾರೂ ಮುಟ್ಟುವುದಿಲ್ಲವೇ...

ಶ್ರೀ ಎಲ್.ಆರ್.ಶಿವರಾಮೇಗೌಡ:- 20 ಜನರು ಸೇರಿದ್ದರೆ, ಅದರಲ್ಲಿ 70 ಜನ ಎಂದು ಬರೆದಿರಬೇಕು.

ಶ್ರೀ ವಾಟಾಳ್ ನಾಗರಾಜ್:- ಹೋಗಲಿ, 20 ಜನ ಸದಸ್ಯರು ಸೇರಿದ್ದರು ಎಂಬುದು ನಿಮ್ಮ ತೀರ್ಮಾನವೇ.

ಅಧ್ಯಕ್ಷರು:- ಆ ಪೇಪರ್ ಯಾವತ್ತಿನದು ಮತ್ತು ಯಾವುದು ಆಂಧ್ರ ರಾಜ್ಯದ ವಿಚಾರ ಏನಾದರೂ ಬರೆದಿದ್ದಾರೋ....

ಶ್ರೀ ವಾಟಾಳ್ ನಾಗರಾಜ್:- ತಾವೂ ಏಕೆ ಅನುಮಾನ ಪಡುತ್ತಿದ್ದೀರಿ. ಇದು ''ಸಂಜೆ ನುಡಿ'' ಎಂಬ ಪತ್ರಿಕೆ, ಇದು ಕರ್ನಾಟಕದಲ್ಲಿಯೇ ಪ್ರಕಟವಾಗಿರತಕ್ಕಂತಾದ್ದು. ನಾವೂ, ನೀವೂ ಎಲ್ಲರೂ ಓದತಕ್ಕ ಪತ್ರಿಕೆ; ಸಂಜೆಪತ್ರಿಕೆ. ಅದೂ ಕೂಡ ಇವತ್ತಿನ ಅಂದರೆ, 6-9-95ರ ಪತ್ರಿಕೆ. ನಾನು ಏಕೆ ಹೇಳುತ್ತಿದ್ದೇನೆಂದರೆ, ''ಇದ್ದವರು ಮೂರು ಜನ, ಕದ್ದವರು ಯಾರು'' ಎನ್ನುವಂತಾಗಿದೆ. ಎಲ್ಲರೂ ಇಲ್ಲಿಯೇ ಇದ್ದೀರಿ, ಯಾವ ಪೇಪರಿನಲ್ಲಿ ಬಂತು, ಹೇಗೆ ಬಂತು ಎಂದು ನೀವು ಕತೆ ಹೇಳುತ್ತಿದ್ದೀರಿ. ಅವರು ಯಾರು ಯಾರು ಸೇರಿದ್ದರೆಂದು ಎಲ್ಲವೂ ನಿಮಗೆ ಗೊತ್ತಿದೆ.

ಶ್ರೀ ಸಿ.ಎಂ.ಮಾಮನಿ:- ಆ ಪತ್ರಿಕೆ 1994ನೇ ಇಸವಿಯದೇ ಎಂಬುದನ್ನು ನೋಡಿ.

ಶ್ರೀ ವಾಟಾಳ್ ನಾಗರಾಜ್:- ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಈ ಸರ್ಕಾರ ಇರಬೇಕೆಂದು ಹೇಳುವವನು ನಾನು. ಮಾನ್ಯ ಸಂಸದೀಯ ಸಚಿವರಾದ ನಾಣಯ್ಯನವರು ಇದು ಉಂಟೆ, ಇಲ್ಲವೇ ಎಂಬುದನ್ನು ಧೈರ್ಯವಾಗಿ ಹೇಳಲಿ.

ಶ್ರೀ ಎಂ.ಸಿ.ನಾಣಯ್ಯ:- ಅದು ಇಲ್ಲ. ಪತ್ರಿಕೆಯಲ್ಲಿ ಬಂದಿರುವುದು ಸತ್ಯಕ್ಕೆ ದೂರವಾದುದು ಎಂದು ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಎಷ್ಟು ದೂರ?...

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅವರು ಎಂ.ಎಲ್.ಸಿ.ಗಳನ್ನು ಕರೆಸಿಲ್ಲ, ಬರೀ ಎಂ.ಎಲ್.ಎ.ಗಳನ್ನು ಮಾತ್ರ ಸೇರಿಸಿದ್ದಾರೆ...

ಶ್ರೀ ವಾಟಾಳ್ ನಾಗರಾಜ್:- ಬರೀ ಶಾಸಕರು 70 ಜನರು, ಇದರಲ್ಲಿ ವಿಧಾನ ಪರಿಷತ್ತಿನ ಸದಸ್ಯರು ಇಲ್ಲ. ಅವರು ನೇರವಾಗಿ ಇಲ್ಲವೇ ಇಲ್ಲವೆಂದು ಹೇಳಲಿಲ್ಲ. ಸತ್ಯಕ್ಕೆ ದೂರ ಎಂದು ಹೇಳಿದ್ದಾರೆ. ಇದು ಸ್ವಲ್ಪ ನಮಗೆ ಅನುಮಾನ. ಎಷ್ಟು ದೂರ, ಎಷ್ಟು ಇವೆಲ್ಲಾ ಅನುಮಾನಗಳು ಬರುತ್ತವೆ. ಆದ್ದರಿಂದ, ಮಾನ್ಯ ನಾಣಯ್ಯನವರು ಯಾವಾಗಲೂ ಇದ್ದುದನ್ನು ಸ್ಪಷ್ಟವಾಗಿ ಹೇಳತಕ್ಕಂಥ ಸಚಿವರು. ಅವರ ಬಗ್ಗೆ ನನಗೆ ಬಹಳ ಗೌರವ ಇದೆ, ತಾವು ಪ್ರಾಮಾಣಿಕವಾಗಿ ಹೇಳಿಬಿಡಿ.

ಶ್ರೀ ಎಂ.ಸಿ.ನಾಣಯ್ಯ:- ನೇರವಾಗಿ ಹೇಳುವದಾದರೆ, ಅದು ಸುಳ್ಳು.

ಶ್ರೀ ವಾಟಾಳ್ ನಾಗರಾಜ್:- ತಾವು ಕೋಪಿಸಿಕೊಂಡು ಹೇಳಬೇಡಿ. ಏಕೆಂದರೆ, ಈ ವಿಚಾರ ಎತ್ತಿದ ತಕ್ಷಣ ಮಾನ್ಯ ನಾಣಯ್ಯನವರಿಗೆ ಕೋಪ ಬಂತು. ಅವರಿಗೆ ಏಕೆ ಕೋಪ ಬರಬೇಕು. ನಾವು ಇಷ್ಟೆಲ್ಲಾ ನಡೆಸುತ್ತಿದ್ದೇವೆ, ಇವರಿಗೆ ಹೇಗೆ ಗೊತ್ತಾಯಿತು ಎಂಬುದು ಅವರ ಮನಸ್ಸಿನಲ್ಲಿರಬೇಕು. ನನಗೂ ಗೊತ್ತಾಗಿದೆ. ನಾನು ಏನು ತಿಳಿದುಕೊಂಡಿದ್ದೆ ಎಂದರೆ, ನನ್ನ ತಲೆಯಲ್ಲಿ ಇದ್ದುದು ಕೇವಲ 63 ಜನರು ಎಂದು ಇತ್ತು. ನಾನು ಹಿಂದೆ ತಮಗೆ ಹೇಳಿದ್ದೆ. ನಾನು ಹಿಂದೆ, ಇಲ್ಲಿ ಭಾಷಣ ಮಾಡುವಾಗ, ಸರ್ ಸಿ.ವಿ.ರಾಮನ್ ರಸ್ತೆಗೆ 63 ಜನರು ಹೋಗಿದ್ದರೆಂದು ಹೇಳಿದ್ದೆ. ಈಗ ಇವರು ಆ ರಸ್ತೆಗೂ ಹೋಗಿಲ್ಲ, ಇಲ್ಲಿಯೇ ಯಾವುದೋ ಮನೆಯಲ್ಲಿ ಸೇರಿರತಕ್ಕಂತಾದ್ದು ಮತ್ತು ಇದು ನಡೆದಿರತಕ್ಕಂತಾದ್ದು, ಇದು ಸ್ಪಷ್ಟ. ಇದಕ್ಕಾಗಿ, ನಾಳೆ ಮುಖ್ಯಮಂತ್ರಿಗಳು ಬಂದನಂತರ ತಕ್ಷಣ ಜನತಾದಳದ ಸಭೆಯನ್ನು ಕರೆದು, ಪರಿಶೀಲನೆಗೆ ಯೋಚನೆ ಮಾಡುತ್ತಿದ್ದೀರಿ. ಇದು ನನಗೆ ಗೊತ್ತು. ಮಾನ್ಯ ಜಿಗಜಿಣಗಿಯವರು ನಿಜ ಹೇಳಿದರು. ಇದೆಲ್ಲಾ ನಮಗೆ ಗೊತ್ತಿದೆ, ನೀವೇಕೆ ಹೇಳುತ್ತಿದ್ದೀರೆಂದು, ಸಂತೋಷ. ಅವರು ಅಷ್ಟು ಹೇಳಿದರೆ, ನನಗೆ ಸಂತೋಷ. ಅವರ ಮನೆ ಜಗಳ ಎಂದು ಮಾನ್ಯ ಶಿವರಾಮೇಗೌಡರು ಹೇಳುತ್ತಿದ್ದಾರೆ. ಅಂದರೆ, ಅವರೂ ಅಲ್ಲಿಗೆ ಹೋಗಿದ್ದಾರೆ. ಅಂದರೆ 70ರಲ್ಲಿ ಇವರೂ ಒಬ್ಬರು. ಮಾನ್ಯ ಶಿವರಾಮೇಗೌಡರು ಆಡಳಿತ ಪಕ್ಷದ ಸದಸ್ಯರು ಎಂದು ಇದರಲ್ಲಿ ಬರೆದಿದ್ದಾರೆ.

ಶ್ರೀ ಎಲ್.ಆರ್.ಶಿವರಾಮೇಗೌಡ:- ನಾನು ಆಡಳಿತ ಪಕ್ಷದ ಸದಸ್ಯ ಅಲ್ಲ, ಪಕ್ಷೇತರ ಸದಸ್ಯ.

ಶ್ರೀ ವಾಟಾಳ್ ನಾಗರಾಜ್:- ತಮಗೆ 20 ಜನರ ಹೆಸರು ಗೊತ್ತು. ನನಗನಿಸುತ್ತದೆ, ನೀವು

ಅಷ್ಟು ಸುಲಭವಾಗಿ, ಶಾಂತವಾಗಿ ಮಲಗುವುದಕ್ಕೆ ದಾರಿ ಇಲ್ಲ, ನಿಮ್ಮಲ್ಲಿ ಭಾರಿ ಒಡಕು ಬಂದಿದೆ, ಬರಬಾರದಿತ್ತು ಎಂದು ನನ್ನ ಆಸೆ. ನಾನು ಪ್ರಾರಂಭದಲ್ಲಿ ಮಾತನಾಡುವಾಗ, ಅಧ್ಯಕ್ಷರನ್ನು ಸ್ವಾಗತ ಮಾಡುವಾಗ, ಏನು ಹೇಳಿದೆ ಎಂದರೆ, ನಿಮ್ಮ ಸರ್ಕಾರ 5 ವರ್ಷಗಳ ಕಾಲ ಇರಬೇಕೆಂದು ಸದುದ್ದೇಶದಿಂದ, ಪ್ರೀತಿಯಿಂದ ಹೇಳಿದೆ.

ಶ್ರೀ ಡಿ.ಟಿ.ಜಯಕುಮಾರ್:- ನಿಮಗೆ ಆ ಅನುಮಾನ ಬೇಡ.....

ಶ್ರೀ ವಾಟಾಳ್ ನಾಗರಾಜ್:- ನಿಮ್ಮ ತೋಟಗಾರಿಕೆ ಇಲಾಖೆ ನಾಳೆ ಇರುತ್ತದೆಯೋ ಇಲ್ಲವೋ. ಅವರು ಅನುಮಾನ ಬೇಡ ಎಂದು ಹೇಳುತ್ತಿದ್ದಾರೆ. ಅವರು ಯಾವ ಘಳಿಗೆಯಲ್ಲಿ ಇರುತ್ತಾರೋ, ಹೋಗುತ್ತಾರೋ ನನಗೆ ಗೊತ್ತಿಲ್ಲ. ಮಾನ್ಯ ಜಯಕುಮಾರ್‌ರವರೇ ನನಗೆ ಗೊತ್ತು. ಅನುಮಾನ ಬೇಡ ಎಂದು ಹೇಳುವವರೆಲ್ಲರೂ ಅನುಮಾನದಲ್ಲಿರುವವರೇ. ಯಾವಾಗಲೂ ಆ ರೀತಿ ಹೇಳುವವರು ಅನುಮಾನದಲ್ಲಿರುವವರೇ....

ಶ್ರೀ ಸಿ.ಎಂ.ಮಾಮನಿ:- ವಾಟಾಳ್ ನಾಗರಾಜ್‌ರವರು ಸ್ಥಿರ ಇದ್ದಾರೆಯೇ, ಯಾವುದು ಸ್ಥಿರ ಇದೆ..

ಶ್ರೀ ವಾಟಾಳ್ ನಾಗರಾಜ್:- ಯಾವುದು ಸ್ಥಿರ ಇದೆ, ಅದನ್ನು ಒಪ್ಪುತ್ತೇನೆ, ಸತ್ಯ. ನೀವು ಸತ್ಯ ಹೇಳಿದಿರಿ. ಈಗ ಸ್ಥಿರ ಇಲ್ಲ ಎಂಬುದನ್ನು ಒಪ್ಪಿಕೊಂಡಿರಿ...

ಅಧ್ಯಕ್ಷರು:- ಇಷ್ಟುಹೊತ್ತು ಮಾಜಿ ಮುಖ್ಯಮಂತ್ರಿಗಳು ಮಾತನಾಡುತ್ತಾ ಇದ್ದರೂ ನಂಜೇಗೌಡರು ಒಳಕ್ಕೆ ಬರಲಿಲ್ಲ. ಆದರೆ, ಈಗ ನೀವು ಮಾತನಾಡಿದ ತಕ್ಷಣ, ನಿಮ್ಮ ಧ್ವನಿ ಕೇಳಿದ ತಕ್ಷಣ, ಅವರು ಒಳಕ್ಕೆ ಬಂದರು.

ಶ್ರೀ ವಾಟಾಳ್ ನಾಗರಾಜ್:- 70 ಜನ ಶಾಸಕರು ಸೇರಿರತಕ್ಕಂತಾದ್ದು, ಮಾನ್ಯ ನಂಜೇಗೌಡರಿಗೂ ಗೊತ್ತು. ಮಾನ್ಯ ಶಿವರಾಮೇಗೌಡರು, ಸೇರಿದ್ದು ನಿಜ, ಅದರಲ್ಲಿ ಅನುಮಾನ ಪಡಬೇಡಿ ಎಂದು ಹೇಳುತ್ತಾ, ನನ್ನ ಪಕ್ಕಕ್ಕೇ ಬಂದಿದ್ದಾರೆ. ಇದು ಸತ್ಯ ನಾನು ಈ ಸದನದಲ್ಲಿ ಮಾತನಾಡಿರುವುದು.....

ಶ್ರೀ ಎಚ್.ಎನ್.ನಂಜೇಗೌಡ:- 70 ಜನ ಸೇರಿದ್ದು ನನಗೆ ಗೊತ್ತಿಲ್ಲ. ಜನ ಸೇರಿದ್ದಿರಬಹುದು, ನೀವು 70 ಜನ ಎಂದು ನಂಬರ್ ಹೇಳುತ್ತಾ ಕುಳಿತರೆ ನಾನು ಏಕೆ ಸಾಕ್ಷಿ ಹೇಳಲಿ?

ಶ್ರೀ ವಾಟಾಳ್ ನಾಗರಾಜ್:- ನಂಜೇಗೌಡರು ಹೇಳಿದ್ದುದು ಶಾಸಕರು ಸೇರಿದ್ದುದು ನಿಜ, ಆದರೆ 70 ಅಲ್ಲ ಅಂದರು. ನನಗೆ ಗೊತ್ತಿರುವ ಸುದ್ದಿ ನಾನು ಹೇಳಿದ್ದೇನೆ ಸ್ವಾಮಿ. ಅದರಲ್ಲಿ ಮಾಮನಿಯವರು ಯಾವುದು ಎಂದು ಕೇಳಿದರೆ ಅವರೂ ಸೇರಿದ್ದರು ಅಂತ ನನಗೆ ಗೊತ್ತು. ಅದಕ್ಕೋಸ್ಕರ ಅವರ ಬಗ್ಗೆ ನಾನು ಹೇಳಬಾರದು ಅಂತ ಅಷ್ಟೇ.

ಶ್ರೀ ಎಂ.ವೀರಪ್ಪ ಮೊಯಿಲಿ:- ಆದ್ದರಿಂದ ಸಚಿವರಾದ ಶ್ರೀ ರಮೇಶ್ ಜಿಗಜಿಣಗಿಯವರ ಶಕ್ತಿ ಏನು ಅಂತ ಅದನ್ನು ಉಲ್ಲೇಖ ಮಾಡುವ ಸಂದರ್ಭದಲ್ಲಿ ಇದು ಬಂತು.

ಅಧ್ಯಕ್ಷರು :- ಇವರ ಕ್ಯಾಬಿನೆಟ್‌ನಲ್ಲೆಲ್ಲ ಬರಿ ಬಾಯಿಮಾತಿನಲ್ಲಿದ್ದಾರೆ, ನಿಮ್ಮ ವ್ಯವಸ್ಥೆ ಇಲ್ಲ ಇವರಲ್ಲಿ.

+ ನಗು +

ಶ್ರೀ ಎಂ.ವೀರಪ್ಪ ಮೊಯಿಲಿ:- ತಮ್ಮ ಬಜೆಟ್ ಏನಿದೆ ಅದರ ಕಾರ್ಯಕ್ರಮವನ್ನು ನಿರ್ವಹಿಸುವುದರಲ್ಲಿಯೇ ಮಾನ್ಯ ಸಮಾಜಕಲ್ಯಾಣ ಸಚಿವರ ಪಾತ್ರ ನಿಲ್ಲಬಾರದು. ಯಾವುದೇ ಇಲಾಖೆ ಆಗಲಿ, ಬರೀ ವಿಶೇಷ ಘಟಕ ಎಂದು ಬಾಕಿ ಇಲಾಖೆಯ ಹಣ ಮಾತ್ರ ಕ್ರೋಢೀಕರಣ ಮಾಡಿ ಅದನ್ನು ನಿರ್ವಹಣೆ ಮಾಡಿದರೆ ಸಾಲದು. ಆಯಾಯ ಇಲಾಖೆಯಲ್ಲಿ ಏನಾಗುತ್ತದೆ ಮತ್ತು ಈ ಟೋಟಲ್ ಮೀಸಲಾತಿ ಏನಿದೆ ಅದು ತಮ್ಮ ಸಬ್ಜೆಕ್ಟ್. ಗ್ರಾಮೀಣಾಭಿವೃದ್ಧಿಯವರು ಚುನಾವಣೆ ಮಾಡುತ್ತಾರೆ, ಬಜೆಟ್ ರಿಲೀಸ್ ಮಾಡುತ್ತಾರೆ ಅಲ್ಲಿಗೆ ಬಿಡುತ್ತಾರೆ. ಆದರೆ ಇವತ್ತು ಹೊಸದಾಗಿ ಈ ಪೊಲಿಟಿಕಲ್ ರಿಸರ್ವೇಶನ್ ಏನಾಗಿದೆ ಅದು ಎಷ್ಟರಮಟ್ಟಿಗೆ ನಿರ್ವಹಣೆಯಾಗಿದೆ, ಎಷ್ಟರಮಟ್ಟಿಗೆ ಅವರು ಸ್ವತಂತ್ರವಾಗಿ ಕೆಲಸಮಾಡುವುದಕ್ಕೆ ಬ್ಯಾಕ್‌ವರ್ಡ್‌ಕ್ಲಾಸಸ್‌ನವರು ಕನಸಿನಲ್ಲಿ ನೆನೆಸಲಿಕ್ಕೆ ಇವತ್ತು ಸಾಧ್ಯವಿಲ್ಲ. ಅಂಥವರು ಇವತ್ತು ಜಿಲ್ಲಾಪರಿಷತ್ ಅಧ್ಯಕ್ಷರು ಉಪಾಧ್ಯಕ್ಷರಾಗಿದ್ದಾರೆ. ತಾಲೂಕುಪಂಚಾಯಿತಿ ಅಧ್ಯಕ್ಷ ಉಪಾಧ್ಯಕ್ಷರಾಗಿದ್ದಾರೆ. ಅನೇಕ ಕಡೆಗಳಲ್ಲಿ ಇವತ್ತು ನಮಗೆ ಬಂದ ವರ್ತಮಾನದ ಪ್ರಕಾರ ಅವರು ಕರ್ತವ್ಯ ನಿರ್ವಹಿಸಲು ಸಾಕಷ್ಟು ಆತಂಕಗಳು ಬರುತ್ತಿವೆ. ಅವರ ಮೇಲೆ ಅವಿಶ್ವಾಸನಿರ್ಣಯ ತಂದು ಅವರನ್ನು ತೆಗೆದು ಉಪಾಧ್ಯಕ್ಷರು ತಮ್ಮ ಕರ್ತವ್ಯ ನಿರ್ವಹಿಸುವಂತಹ ಪರಿಸ್ಥಿತಿ ಅನೇಕ ಕಡೆ ಆಗುತ್ತಿದೆ. ದೈಹಿಕವಾಗಿ ಹೊಡೆದಿದ್ದಾರೆ, ಧಾಳಿಯಾಗಿದೆ. ಇದನ್ನು ತಾವು ಪರಿಶೀಲನೆ ಮಾಡಬೇಕು. ಯಾವುದೇ ಜಿಲ್ಲೆಗೆ ಹೋದರೂ ಬರೀ ತಮ್ಮ ಇಲಾಖೆಯವರನ್ನು ಕರೆದು ಮಾತನಾಡಿದರೆ ಸಾಲದು. ಹೊಸ ಕ್ರಾಂತಿಕಾರಿ ಬದಲಾವಣೆ ಇವತ್ತು ಕರ್ನಾಟಕ ರಾಜ್ಯದಲ್ಲಿ ಏನು ಆಗಿದೆ ಅದು ಶಾಶ್ವತವಾಗಿ ನೆಲೆಯೂರುವಲ್ಲಿ ತಮ್ಮ ಪಾತ್ರ ಬಹಳ ಇದೆಯೆಂಬುದನ್ನು ನಾನು ನೆನಪು ಮಾಡಿಕೊಡುತ್ತೇನೆ. ಇದು ಬಹಳ ಗಂಭೀರವಾದ ವಿಷಯ, ಇದನ್ನು ತಾವು ನೋಡಿಕೊಳ್ಳಬೇಕಾಗುತ್ತದೆ. ತಮಗೆ ಒಂದು ಕಿವಿಮಾತು ಹೇಳಬೇಕಾದರೆ, ನಮ್ಮ ಲಾ ಸಚಿವರು ಇಲ್ಲಿಯೇ ಇದ್ದಾರೆ. ಆಗ ಇಲ್ಲಿ ನಾನು ಲಾ ಮಿನಿಸ್ಟರಾಗಿದ್ದೆ. ಹೈಕೋರ್ಟಿನಿಂದ ಒಂದು ಲಿಸ್ಟ್ ಬಂತು, ತಮಗೆ ಗೊತ್ತಿರಬಹುದು. 33 ಮಂದಿ ಮುನ್ಸೀಫ್‌ಗಳನ್ನು ಸೆಲೆಕ್ಟ್ ಮಾಡಬೇಕೆಂದು ಬಂತು. ನೋಡಲಿಕ್ಕೆ ಹೋದರೆ ಎಸ್‌ಸಿ ಎಸ್‌ಟಿಯವರು ಯಾರೂ ರಿಟನ್ ಪರೀಕ್ಷೆಯಲ್ಲಿ ಪಾಸಾಗಿರಲಿಲ್ಲ. ಆದ್ದರಿಂದ they were not in a position to recommend anybody in the penal ನಾನು ಆಲೋಚನೆ ಮಾಡಿ ಆಗಿನ ಮಾನ್ಯ ಮುಖ್ಯನ್ಯಾಯಾಧೀಶರ ಜೊತೆ ಮಾತನಾಡಿ ಇದು ಬಹಳ ಅನ್ಯಾಯವಾಗುತ್ತದೆ. ಯಾವ ಮೀಸಲಾತಿ ಕಾನೂನನ್ನು ಇವತ್ತು ಎನ್‌ಫೋರ್ಸ್ ಮಾಡಬೇಕಾದಂತಹ ಹೈಕೋರ್ಟಿನಿಂದಲೇ ಇಂತಹ ಒಂದು ಅಚಾತುರ್ಯವಾದರೆ ಅದು ಸರಿಯಾಗುವುದಿಲ್ಲ ಎಂದು ಹೇಳಿದ ಮೇಲೆ ಸ್ಪೆಶಲ್ ರೂಲ್ಸ್ ಮಾಡಿ ಮುನ್ಸೀಫ್‌ರದು 18 ಪೋಸ್ಟಿತ್ತು ಬ್ಯಾಕ್‌ಲಾಗ್, ನಾನು ಅವರಿಗೆ ರಿಕ್ವೆಸ್ಟ್ ಮಾಡಿದೆ, ಅವರಿಗೆ 3 ತಿಂಗಳು ತರಬೇತಿ ಕೊಡಿ ಅವರು ರಿಕ್ರೂಟಾದ ಮೇಲೆ ಅವರಿಗೆ ರಿಟನ್ ಟೆಸ್ಟಿಲ್ಲದೆ ಓರಲ್ ಟೆಸ್ಟ್ ಮಾತ್ರ ಮಾಡಿ, 3 ತಿಂಗಳು ತರಬೇತಿ ಕೊಟ್ಟು ನೇಮಕ ಮಾಡಿ ಎಂದು ಹೇಳಿದ್ದಕ್ಕೆ same thing has been done. According to the assessment which we have received 6 Munsiffs were far far superior then rest of them ಸೊ ಮೆರಿಟ್‌ಥಿಯರಿ ಏನಿದೆ ಅದು ಬಹಳ ಮುಸುಕು ಥಿಯರಿ. ಹಿಟ್ಲರು ಮೆರಿಟ್‌ಥಿಯರಿ ಮೇಲೇನೆ ಫಿಲಾಸಫಿ ಮಾಡಿದ್ದುದು. ಅಪರ್ಥಿಡ್ ಥಿಯರಿ ಕೂಡ ಮೆರಿಟ್‌ಥಿಯರೀನೆ. ಇವತ್ತು ಮೆರಿಟ್ ಥಿಯರಿ ಬಗ್ಗೆ ನಾವು ದೊಡ್ಡ ವ್ಯಾಖ್ಯಾನ ಮಾಡುತ್ತೇವೆ.

ಆದರೆ ಯಾವುದರಲ್ಲಿ ಮೆರಿಟ್? ಬರೀ ಅಂಕ ತೆಗೆದುಕೊಳ್ಳುವುದರಲ್ಲಿ ಮೆರಿಟ್ಟಾ? ಅಥವಾ ಬುದ್ಧಿ ಜಾಣ್ಮೆಯನ್ನು ಪರೀಕ್ಷೆ ಮಾಡುವ ಮಾನದಂಡ ಯಾವುದು? ಸ್ಕೂಲ್ ಅಥವಾ ಕಾಲೇಜ್ ಪರೀಕ್ಷೆ ಒಂದು ಮಾನದಂಡವಿರಬಹುದು.one of the components - ಆದರೆ ಅದೇ ಸಂಪೂರ್ಣ ಸಮಗ್ರವಾದಂಥ ನೋಟ ಆಗಿರುವುದಿಲ್ಲ. 18 Munsiffs from the Scheduled Castes and Scheduled Tribes may be in the country got into the judicial service.ಅದೇ ರೀತಿ ಡಿಸ್ಟ್ರಿಕ್ಟ್ ಜಡ್ಜಸನ್ನೂ ತಾವು ಇವತ್ತು ನೇಮಕ ಮಾಡಬಹುದು, ಅದಕ್ಕೆ ಸ್ಪೆಶಲ್ ರೂಲ್ಸ್ ಮಾಡಿ. ಅದೇ ಪ್ರಕಾರ ನಾವು ಮೊನ್ನೆ 35 ಲಕ್ಷ ರಿಲೀಸ್‌ಮಾಡಿ ನ್ಯಾಷನಲ್ ಲಾ ಸ್ಕೂಲಿನಲ್ಲಿ ಕಳೆದ ವರ್ಷ ಮತ್ತೊಂದು ಪ್ರಯೋಗ ಮಾಡಿದೆವು. I think about 32 students, out of which 27 or so I don't remember the exact number ಎಸ್‌ಸಿ ಎಸ್‌ಟಿ ಯಿಂದ ನಾವು ಗುಡ್‌ಲಾಯರ್ಸನ್ನು ಆಯ್ಕೆ ಮಾಡಿ ನ್ಯಾಷನಲ್ ಲಾ ಸ್ಕೂಲಿಗೆ ಓರಿಯೆಂಟೇಷನ್ ಟ್ರೈನಿಂಗ್‌ಗೆ ಕಳಿಸಿದೆವು. I spent about 35 lakhs ರಿಸಲ್ಟ್ ಏನೆಂದರೆ ಮುನ್ಸಿಫ್ ಕಾಂಪಿಟಿಟಿವ್ ಪರೀಕ್ಷೆ ಆಗುವಾಗ ಓರಲ್‌ನಲ್ಲಿ I think about 9 of them came by General Merit. ಸೊ ಇವತ್ತು hidden or suppressed talent ಏನಿದೆ ಅದನ್ನು ಹೊರತರಲಿಕ್ಕೆ ಅವಕಾಶ ಬೇಕು. ನೆಪೋಲಿಯನ್ ಬೋನಪಾರ್ಟೆ ಮಾಡಿದಾಗ ಬರೀ ಟ್ಯಾಲೆಂಟ್ ಇದ್ದರೆ ಸಾಲದು ಆಪರ್ಚುನಿಟೀಸ್ ಬೇಕು. ಆ ಆಪರ್ಚುನಿಟೀಸನ್ನು ಇವತ್ತು ಕೊಡಬೇಕಾಗಿದೆ. ಅದಕ್ಕೆ ವರ್ಷವರ್ಷ ತಾವು ಇದನ್ನು ಮಾಡಿ, ಎಸ್‌ಸಿ ಎಸ್‌ಟಿಗೆ ಒಂದು ಬ್ಯಾಚ್ ಮಾಡಿ, ಮೈನಾರಿಟೀಸ್ ಬ್ಯಾಕ್‌ವರ್ಡ್‌ಕ್ಲಾಸ್‌ಗೊಂದು ಬ್ಯಾಚ್ ಮಾಡಿ. ಬಹುಶಃ ಜುಡಿಶಿಯರಿನಲ್ಲಿ ಬರಲಿಕ್ಕೆ ಸಾಧ್ಯವಿಲ್ಲವೆಂಬ ಮಿಥ್ ಏನಿದೆ you will be exploding that ಏನೂ ಕಷ್ಟ ಇಲ್ಲ. still on merit. I don't say that you must decry the merit ಆದರೆ you must open up the opprtunities to them ಆ ಅವಕಾಶದ ಬಾಗಿಲನ್ನು ತಾವು ತೆರೆಯಬೇಕಾಗುತ್ತದೆ. ಈ ವಿಶೇಷ ಕಾರ್ಯಕ್ರಮ ನಾವು ಏನು ಪ್ರಾರಂಭಮಾಡಿದ್ದೇವೆ ಅದನ್ನು ಪರ್‌ಪೆಚ್ಯುವೇಟ್ ಮಾಡಬೇಕಾದ ಜವಾಬ್ದಾರಿ does not matter you reappropriate money ಯಾವುದಾದರೂ ಒಂದು ಪ್ರೋಗ್ರಾಮನ್ನು you get these programmes and some of the programmes you reorient, opprtunities ನೀವು ಕ್ರಿಯೇಟ್ ಮಾಡಬೇಕಾದ ಕ್ರಮವನ್ನು ತಾವು ಕೈಗೊಳ್ಳಲಿಕ್ಕೆ ಸಾಧ್ಯವಿದೆ, ಅದನ್ನು ತಾವು ದಯಮಾಡಿ ಮಾಡಬೇಕೆಂದು ಇಷ್ಟು ಮಾತ್ರ ಹೇಳಿ ಸಾಕಷ್ಟು ಡಿಟೇಲನ್ನು ಇವತ್ತು ನಾನು ಕೊಡುತ್ತಿಲ್ಲ. ಅದೇ ದೊಡ್ಡ ಸಬ್ಜೆಕ್ಟಾಗುತ್ತದೆ. ಇವತ್ತು ಬೇರೆಬೇರೆ ಕಡೆಗಳಲ್ಲಿ ದಲಿತರ ಮೇಲಿನ ಧಾಳಿ ಆಗಿ ವರ್ತಮಾನ ಬರುತ್ತಿದೆ. ಅದಕ್ಕೆ ಜಿಲ್ಲಾಧಿಕಾರಿಗಳನ್ನು ಎಸ್‌ಪಿಗಳನ್ನು personally you must hold them responsible. ಬಹುಶಃ ಕೆಲವು ಸಂದರ್ಭಗಳಲ್ಲಿ ಇದನ್ನು ಸ್ಟ್ರಿಕ್ಟಾಗಿ ಎನ್‌ಫೋರ್ಸ್ ಮಾಡಬೇಕಾದಂತಹ ಅವಶ್ಯಕತೆ ಕೂಡ ಇದೆ ಎಂದು ನಾನು ಹೇಳಲಿಕ್ಕೆ ಅಪೇಕ್ಷೆ ಪಡುತ್ತೇನೆ. ಮತ್ತು ಮುಖ್ಯವಾಗಿ ಜಾತಿ ಸರ್ಟಿಫಿಕೇಟ್ ಕೊಡುವಾಗ ಬಹಳ ಗೊಂದಲ. ಇವತ್ತು ನಿಜವಾದಂಥ ಅರ್ಹರಿಗೆ ಸಿಗುವುದಿಲ್ಲ. ನನಗೆ ಬಹಳ ಸಂತೋಷ, ನಮ್ಮ ಜೆಎಚ್ ಪಟೇಲರು ಬಹಳ ಓಪನಾಗಿ ಹೇಳಿದರು ವೀರಶೈವ ಜಂಗಮರು ಈ ಬೇಡಜಂಗಮ ಪಟ್ಟಿಯಲ್ಲಿ

ಬರುವುದಿಲ್ಲ ಎಂದು. ಇದರಲ್ಲಿ ಸಾಕಷ್ಟು ವರದಿಗಳಿವೆ. ನಾವು ಕೂಡ ಆಗಾಗ್ಗೆ ಸುತ್ತೋಲೆಗಳನ್ನು ಕಳಿಸಿದ್ದೇವೆ. ಬಹಳ ಸಂತೋಷ ದಿನಾಂಕ 18-1-95 ರಲ್ಲಿ ತಾವೂ ಒಂದು ಸುತ್ತೋಲೆ ಕೊಟ್ಟು ಈ ರೀತಿ ಆಕ್ರಮವಾಗಬಾರದು ಎಂದು. Even the Anthropology Survey of India ಪ್ರಕಾರ ಅವರು ನಮ್ಮ ಸೆಕ್ರೆಟರಿಯೇಟ್‌ಗೆ ಬರೆದಿದ್ದಾರೆ, ಅದರ ಪ್ರಕಾರ 20-7-94 ರಲ್ಲಿ ನಾವು ಒಂದು ವರದಿ ತರಿಸಿದ್ದೇವೆ. ಅದರ ಪ್ರಕಾರ ಕೂಡ ವೀರಶೈವ ಜಂಗಮರು ಜಂಗಮರಾಗುವುದಿಲ್ಲ ಎಂಬುದನ್ನು ಬಹಳ ಸ್ಪಷ್ಟವಾಗಿ ಅದರಲ್ಲಿ ನಮೂದಿಸಿದ್ದಾರೆ. ಆದ್ದರಿಂದ ಇದರ ಬಗ್ಗೆ ರಾಜಕಾರಣಿಗಳು ಕೂಡ ಒಂದು ಗೆರೆ ಹಾಕಬೇಕಾಗುತ್ತದೆ, ಇದರಲ್ಲಿ ರಾಜಕಾರಣ ಮಾಡಬಾರದು, ಇದರಲ್ಲಿ ಕೆಲವರು ಸಪೋರ್ಟ್ ಮಾಡುವುದು ಕೆಲವರು ವಿರೋಧ ಮಾಡುವುದು ಆಗಬಾರದು. ಏಕೆಂದರೆ ನಿರ್ದಿಷ್ಟವಾದ ಒಂದು ಜನಾಂಗಕ್ಕೆ ವರ್ಗಕ್ಕೆ ಒಂದು ಸವಲತ್ತು ಹೋಗುವಾಗ ಪಕ್ಷಜಾತಿಮತಭೇದವಿಲ್ಲದೆ ಎಲ್ಲರೂ ಕೂಡ ಅತ್ಯಂತ ಕೆಳ ಸ್ತರದಲ್ಲಿರುವಂತಹ, ಶತಮಾನಗಳಿಂದ ತುಳಿಯಲ್ಪಟ್ಟಂತಹ ನೆಲಕಚ್ಚಿದಂತಹ ಜನಾಂಗವನ್ನು ಏಳಿಸುವುದಕ್ಕೆ ಎಲ್ಲರ ಕೈ ಜೋಡಿಸಿಕೊಂಡು ಈ ಕೆಲಸ ಮಾಡಬೇಕಾಗಿದೆ. There should be some political consensus on this question. Those who don't deserve we must mercilessly delete them.

ಶ್ರೀ ಕಾಗೋಡು ತಿಮ್ಮಪ್ಪ:- ಬೇಡ ಜಂಗಮ ಎಂಬುದು ಎಸ್‌ಸಿ ಎಸ್‌ಟಿ ಲಿಸ್ಟ್ ಏನು ಕೇಂದ್ರಸರ್ಕಾರ ಪಬ್ಲಿಶ್ ಮಾಡಿದೆ ಅದರಲ್ಲಿದೆ. ನಾನು ಈ ಖಾತೆಯಲ್ಲಿದ್ದಾಗಲೇ ಈ ಸಮಸ್ಯೆ ಬಂದದ್ದು. ಈಗಿರುವ ವ್ಯವಸ್ಥೆಯಲ್ಲಿ ಸರ್ಟಿಫಿಕೇಟ್ ಕೊಡುವ ಅಧಿಕಾರ ಇರುವುದು ನಮ್ಮ ತಹಸೀಲ್ದಾರ್‌ಗೆ. ಒಂದು ವೇಳೆ ಆ ಲಿಸ್ಟ್‌ನಲ್ಲಿದ್ದರೆ ಏನು ಮಾಡಬೇಕು ಎಂಬುದು ಪ್ರಶ್ನೆ. ಬೇಡ ಜಂಗಮ ಎಂಬುದು ಆ ಲಿಸ್ಟ್‌ನಲ್ಲಿರುವವರೆಗೂ...

ಶ್ರೀ ರಮೇಶ್ ಜಿಗಜಿಣಗಿ:- ಬೇಡ ಜಂಗಮರು ಯಾರು ಎಂಬುದಕ್ಕೆ ಸ್ಪೆಸಿಫಿಕೇಶನ್ ಇದೆ. ಇಂಥವರು ಮಾತ್ರವೇ ಬೇಡಜಂಗಮರು ಎಂದು. ಈಗ ಒಬ್ಬ ಬೇಡ ಜಂಗಮ ಜಿಲ್ಲಾಪರಿಷತ್ತಿಗೆ ಗೆದ್ದು ಬಂದಿದ್ದಾನೆ. ನಮ್ಮ ಅಧಿಕಾರಿಗಳಿಗೆ ಹೇಳಿ ಅದನ್ನು ತನಿಖೆ ಮಾಡಿ ಕರೆಕ್ಟಾಗಿ ವರದಿ ಕೊಡಿರಿ ಎಂದರೆ ನಿನ್ನೆ ಹೈಕೋರ್ಟಿನವರು ಎನ್‌ಕ್ವಯರಿ ಮಾಡುವುದಕ್ಕೇ ಸ್ಟೇಕೊಟ್ಟಿದ್ದಾರೆ I have asked our Hon'ble Minister, our Secretary and Lawyers to vacate the stay ಇಂತಹ ಪರಿಸ್ಥಿತಿಯಲ್ಲಿ ನಡೆಸುವುದು ಕಷ್ಟವಾಗುತ್ತದೆ. ಆದರೆ ಬೇಡಜಂಗಮರು ಯಾರು ಎಂದರೆ ಸ್ಪೆಸಿಫಿಕೇಶನ್ ಇದೆ. ಅವರು ಮೂಲತಃ ಮಾಂಸಹಾರಿಗಳು ಎಂದು ಸೂಚನೆ ಇದೆ. ಆದರೆ ಅದನ್ನು ಬಿಟ್ಟು ಯಾರ್‍ಯಾರಿಗೋ ಕೊಟ್ಟುಬಿಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್: ಇದರ ಬಗ್ಗೆ ಚರ್ಚೆಮಾಡುತ್ತಾ ಹೋದರೆ ದಿಕ್ಕು ತಪ್ಪುತ್ತದೆ. ಅದಕ್ಕೋಸ್ಕರ ಬೇಡಿ. ಮಾಂಸ ಯಾವುದು ಮೌಸ ಯಾವುದು ಮೂಸ ಯಾವುದು ಎಲ್ಲ ಬೇರೆ ದಿಕ್ಕು ತಪ್ಪುತ್ತದೆ ಅದಕ್ಕಾಗಿ ಹೋಗುವುದು ಬೇಡ.

ಶ್ರೀ ಎಂ.ವೀರಪ್ಪಮೊಯಿಲಿ:- ಈಗ ಕೃಷಿ ಬಗ್ಗೆ ಒಂದೇ ವಾಕ್ಯದಲ್ಲಿ ಹೇಳುತ್ತೇನೆ. ಬಯಲು ಸೀಮೆ ಅಥಾರಿಟಿ ಎಂದು ನಾವು ಮಾಡಿದ್ದೇವೆ. ನನಗೆ ಗೊತ್ತಿರುವ ಪ್ರಕಾರ ಎರಡೂ ಸದನದಲ್ಲಿ ಅದಕ್ಕೆ ಆಕ್ಟ್ ಆಗಿದೆ. ಅದರ ಬಗ್ಗೆ ಬಹಳ ವೆಹೆಮೆಂಟಾಗಿ ಆರ್ಗ್ಯೂ ಮಾಡುತ್ತಿದ್ದವರು ಭೈರೇಗೌಡರು, ಕೃಷಿ ಸಚಿವರು, ಇಲ್ಲಿ ಕುಳಿತುಕೊಂಡು. ಆದರೆ ನಾನು ಬಹಳ ಹುಡುಕಿದೆ,

ಬಜೆಟ್‌ನಲ್ಲಿ ಯಾವುದು ಹಣ ಒದಗಿಸಿರುವುದು ನನಗೆ ಕಾಣಲಿಲ್ಲ. ಏಕೆಂದರೆ, ಮಲೆನಾಡು ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶಗಳಿಗೆ ಹೊರತುಪಡಿಸಿ ಇರತಕ್ಕಂತಹ ಪ್ರದೇಶಗಳಿಗೆ ಒಂದು ಪ್ರತ್ಯೇಕ ಕಾರ್ಯಕ್ರಮ ಬೇಕು ಎಂಬ ಉದ್ದೇಶದಿಂದ ಮಾಡಿದ್ದೇವೆ. ಅದರ ಬಗ್ಗೆ ಉತ್ತರ ಕೊಡುವಾಗ ತಿಳಿಸಿ. ಮತ್ತು ಅವರು ಕರಡು ಕೃಷಿ ನೀತಿ ಏನು ಕೊಟ್ಟಿದ್ದಾರೆ ಅದು ನನಗೆ ಅಧ್ಯಯನ ಮಾಡಲಿಕ್ಕೆ ಆಗಲಿಲ್ಲ. ಅದರ ಬಗ್ಗೆ ನಾನು ಏನೂ ಕಾಮೆಂಟ್ ಮಾಡುವುದಿಲ್ಲ. ಇನ್ನೊಂದು, ನಮ್ಮ ಕನ್ನಡ ಮತ್ತು ಸಂಸ್ಕೃತಿ ಸಚಿವರು ಇಲ್ಲಿದ್ದಾರೆ. ಇವರು ಅದಕ್ಕೆ ಅತ್ಯಂತ ಯೋಗ್ಯ ಸಚಿವರು ಎಂದು ಮೊದಲೇ ನಾನು ಹೇಳಿಬಿಡುತ್ತೇನೆ. ಏಕೆಂದರೆ ಅವರೇ ಒಬ್ಬ ಕಲಾವಿದೆ ಒಬ್ಬ ಸಾಹಿತಿ. ಅವರ ಬಗ್ಗೆ ನಮಗೆ ವಿಶೇಷವಾದ ನಂಬಿಕೆ ವಿಶ್ವಾಸ ಖಂಡಿತ ಇದೆ. ಇದು ನನಗೆ ಬಹಳ ಆಪ್ಯಾಯಮಾನವಾದ ವಿಷಯ. ಇದಕ್ಕೆ ಬಂದಕೂಡಲೇ ಅವರು ತುಳು ಕೊಂಕಣಿ, ಕೊಡಗು ಅಕಾಡೆಮಿಗಳನ್ನು ರದ್ದುಮಾಡುತ್ತೇನೆ ಎಲ್ಲದಕ್ಕೂ ಒಂದು ಭಾಷಾ ಅಕಾಡೆಮಿ ಮಾಡುತ್ತೇನೆಂದು ಹೇಳಿಕೆ ಕೊಟ್ಟರು. ಬಹಳ ನಿರಾಶೆಯಾಯಿತು. ಮೊದಲ ಇಂಪ್ರೆಶನ್ನೇ ಸ್ವಲ್ಪ ಬದಲಾವಣೆ ಆಗುವ ಹಾಗೆ ಮಾಡಿದಿರಿ. ರಾಜಕೀಯವಾಗಿ ಮೊಯಿಲಿಯವರು ಈ ಅಕಾಡೆಮಿಗಳನ್ನು ಮಾಡಿದ್ದಾರೆಂದು ದಯಮಾಡಿ ತಾವು ತಿಳಿದುಕೊಳ್ಳಬೇಡಿ. ಇದು ಬರೀ ಭಾಷಾ ಪ್ರಶ್ನೆ ಅಲ್ಲ. ಶಿಕ್ಷಣ ಇಲಾಖೆಯವರು ಭಾಷೆ ನೋಡುತ್ತಾರೆ ಅದಕ್ಕೆ ಅಕಾಡೆಮಿ ನಿಮಗೆ ಏಕೆ ಬೇಕು. ಸಾಂಸ್ಕೃತಿಕವಾದ ಅಭಿವೃದ್ಧಿ ಆಗಬೇಕು ಅನೇಕ ಸಂಸ್ಕೃತಿ ಉಪಸಂಸ್ಕೃತಿಗಳು ಇವೆ- ಈ ಅನೇಕ ಉಪನದಿಗಳು ಸೇರಿ ಮಹಾನದಿಯಾಗುತ್ತದೆ. ಅದೇ ರೀತಿ ಎಲ್ಲಾ ಭಾಷೆಗಳು ಉಪಸಂಸ್ಕೃತಿಗಳು ಈ ನಾಡಿನ ಕನ್ನಡ ಸಂಸ್ಕೃತಿಗೆ ಪೂರಕವಾಗಿರುತ್ತವೆಯೇ ವಿನಹ ಅದಕ್ಕೆ ವಿರುದ್ಧವಾದ ದಿಕ್ಕಿನಲ್ಲಿ ಹೋಗುವುದಿಲ್ಲ. ನಿಮ್ಮ ಬೆಂಗಳೂರಿನಲ್ಲೇ ಇಂಗ್ಲೀಷ್ ಮೀಡಿಯಂ ಹಾವಳಿ ಹೊರತು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳ ಕಡಿಮೆ. ಎಲ್ಲರೂ ಕನ್ನಡವನ್ನೆ ಕಲಿಯುತ್ತಾರೆ. ಅದು ವಾಸ್ತವ. ಈಗೀಗ ನಿಮ್ಮ ಬೆಂಗಳೂರು ಸಹವಾಸ ಸ್ವಲ್ಪ ಬಂದು ಅಲ್ಲಿ ಸ್ವಲ್ಪ ಕೆಡಿಸಿದೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ನನ್ನ ಬೆಂಗಳೂರು ಎಂದು ಹೇಳುತ್ತಾರೆ, ಬೆಂಗಳೂರು ನನ್ನದೇನಲ್ಲ. ಇದು ಕುಲಗೆಟ್ಟಿರುವುದು ಅಂದಿನಿಂದ ಇಲ್ಲಿಯವರೆಗೂ ಇವರು ಸರ್ಕಾರ ರಚನೆ ಮಾಡಿದರಲ್ಲ ಮೊಯಿಲಿಯವರು ಬಂಗಾರಪ್ಪನವರು ವೀರೇಂದ್ರಪಾಟೀಲರು ರಾಮಕೃಷ್ಣಹೆಗಡೆಯವರು ಈಗ ದೇವೇಗೌಡರು ಏನು ಹಣೆಬರಹ ಮಾಡಿಕೊಂಡು ಬಂದಿದ್ದಾರಲ್ಲ ಕನ್ನಡದ ಬಗ್ಗೆ ಇವರು ತೋರಿಸಿರುವ ಸಂಸ್ಕೃತಿ ಈ ಮಟ್ಟಕ್ಕೆ ಬಂದಿದೆ. ನಾವೇನೂ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಎಂ.ವೀರಪ್ಪ ಮೊಯಿಲಿ:- ನಮ್ಮನ್ನು ಇಲ್ಲಿಗೆ ಕರೆಸಿದ್ದುದು ಯಾರು ಎಂದರೆ ಮಾನ್ಯ ವಾಟಾಳ್‌ನಾಗರಾಜ್‌ರವರು, ಅವರು ಚಾಮರಾಜನಗರದಿಂದ ಇಲ್ಲಿಗೆ ಬಂದರು, ಅವರು ಯಾವಾಗ ಬೆಂಗಳೂರಿಗೆ ಬಂದರೋ ನಾವು ಬಂದೆವು ಅಷ್ಟೆ.

ಶ್ರೀ ವಾಟಾಳ್ ನಾಗರಾಜ್:- ನಾನು ಬೆಂಗಳೂರಿನಿಂದ ಚಾಮರಾಜನಗರಕ್ಕೆ ಹೋಗಿದ್ದೇನೆ, ಅಲ್ಲಿಂದ ಇಲ್ಲಿಗೆ ಬರಲಿಲ್ಲ.

ಶ್ರೀ ಎಂ.ವೀರಪ್ಪ ಮೊಯಿಲಿ:- ಹುಟ್ಟಿದ್ದು ಅಲ್ಲಾದರೂ ಕಲಿತದ್ದು ಇಲ್ಲೇ, ಮತ್ತು ಬೆಂಗಳೂರಿನಲ್ಲಿಲ್ಲ ಎಂದು ಏಕೆ ಹೇಳುತ್ತೀರಿ, ನಾನು ಬೆಂಗಳೂರು ಲಾ ಕಲೇಜಿನಲ್ಲೇ ಕಲಿತದ್ದು,

62ನೇ ಇಸವಿಯಿಂದ ಇಲ್ಲೇ ಇದ್ದೇವೆ.

ಅಧ್ಯಕ್ಷರು:- ಅವರೂ ಇಲ್ಲಿಯವರೆ. ನೀವೆಲ್ಲ ಬಂದದ್ದು ನೋಡಿ ಬೇಸರವಾಗಿ ಬೆಂಗಳೂರು ಬಿಟ್ಟು ಹೊರಟುಹೋದರು.

ಶ್ರೀ ಎಂ.ವೀರಪ್ಪ ಮೊಯಿಲಿ:- ನಾನು ಬಹಳ ಅಧ್ಯಯನ ಮಾಡಿದ್ದೇನೆ. ಕಡೇ ಪಕ್ಷ ನಾನು ಕಾದಂಬರಿ ಬರೆಯಲಿಕ್ಕಾದರೂ ಅಧ್ಯಯನ ಮಾಡಿದ್ದೇನೆ. ಒಂದೊಂದು ವರ್ಗಕ್ಕೆ ಸೇರಿದ ಜನಾಂಗದ ಬಗ್ಗೆ ನಾನು ಕಾದಂಬರಿ ಬರೆದಿದ್ದೇನೆ ತಮಗೆ ಗೊತ್ತಿರಬಹುದು. ''ಕೊಟ್ಟ'' ಎಂದು ಬರೆದಿದ್ದೇನೆ. ಈಗ ಒಂದು ದೊಡ್ಡ ಕಾದಂಬರಿ ಬರೆಯುತ್ತಿದ್ದೇನೆ. ಎಷ್ಟು ಅಗೆದರೂ ಅಲ್ಲಿ ಒಂದು ಅಗಾಧವಾದ ಗಣಿ ಇರುತ್ತದೆ. ಚಿನ್ನದ ಗಣಿಯಾದರೂ ಚಿನ್ನ ಮುಗಿದುಹೋಗಬಹುದು, ಆದರೆ ಸಂಸ್ಕೃತಿ ಗಣಿ, ನನ್ನ ಜಿಲ್ಲೆ ಮಟ್ಟಿಗೆ ಹೇಳುತ್ತೇನೆ, ಬಾಕಿ ಜಿಲ್ಲೆಯದು ಇಲ್ಲವೆಂದು ಹೇಳುವುದಿಲ್ಲ. ನನ್ನ ಜಿಲ್ಲೆಯದನ್ನು ಮತ್ತೆ ಮತ್ತೆ ಅಧ್ಯಯನ ಮಾಡಿದ ಹಾಗೆ ಅಗಾಧವಾದ ವಿಸ್ತಾರವಾದ ಸಂಸ್ಕೃತಿ ಗಣಿ ಅದನ್ನು ತೆಗೆಯಬೇಕಾಗುತ್ತದೆ. ಇವತ್ತು what we have done not even .0001% ಅದು ಇವತ್ತು ಯಾವ ರೀತಿಯಲ್ಲಿ ಹೊರಬರಬೇಕು. ಅದಕ್ಕೊಂದು ಲಿಪಿ ಕೂಡ ಇದೆ. ಆ ಲಿಪಿ ವ್ಯವಹಾರಕ್ಕೆ ಬರಬೇಕೆಂದು ನಾನು ಹೇಳುತ್ತಿಲ್ಲ. ಅದರ ಬಗ್ಗೆ ಕೂಡ ಅಧ್ಯಯನ ವಿಶೇಷವಾಗಿ ನಡೆಯಬೇಕಾಗಿದೆ. ಅಕಾಡೆಮಿಯಾದಂತಹ ಒಂದೆರಡು ವರ್ಷದಲ್ಲೇ ದಯಮಾಡಿ ತಾವು ಅಲ್ಲಿ ಹೋಗಿ ನೋಡಬೇಕು, ಅಲ್ಲಿ ಆಫೀಸಿದೆ, ಸಂಗ್ರಹಮಾಡಿದ್ದಾರೆ, ಗೋವಿಂದಪೈ ಸ್ಮರಣಾರ್ಥ ಸಂಸ್ಥೆ ಏನು ಮಾಡಿದ್ದಾರೆ ಎಂಜಿಎಂ ಕಾಲೇಜಿನ ಹತ್ತಿರ that itself is an International Musem.. ಅನೇಕ ಅಂತರರಾಷ್ಟ್ರೀಯ ವಿದ್ಯಾರ್ಥಿಗಳು ಬಂದು ಅಧ್ಯಯನ ಮಾಡುತ್ತಿದ್ದಾರೆ. ಯಕ್ಷಗಾನ ಬಯಲಾಟ ಅಥವಾ ಭೂತದ ಕೋಲಾಗಳಾಗಲಿ ಅಥವಾ ಅಲ್ಲಿನ ಬೇರೆ ವರ್ಗದ ಕಲೆಯನ್ನು ನೀವು ಇನ್ನೊಂದು ಸಾವಿರ ವರ್ಷ ಅಧ್ಯಯನ ಮಾಡಲಿಕ್ಕೆ ಅಷ್ಟು ಮೆಟಿರಿಯಲ್ಸ್ ಇದೆ.ತಮಗೆ ಗೊತ್ತಿರಬಹುದು. ಯುನೈಟೆಡ್ ಸ್ಟೇಟ್‌ನಲ್ಲಿ ಅಡ್ಮಿಶನ್‌ಗೆ ಹೋಗಬೇಕಾದರೆ ಅವರು ಟೆಸ್ಟ್ ಮಾಡುತ್ತಾರಲ್ಲ...

ಶ್ರೀಮತಿ ಬಿ.ಟಿ.ಲಲಿತಾ ನಾಯಕ್:- ತಾವು ಹೇಳಿದ್ದಕ್ಕೆ ಅನಂತರ ನಾನು ಉತ್ತರ ಕೊಡುತ್ತೇನೆ ಆದರೆ ಒಂದೇ ಒಂದು ವಿಷಯ. ತಾವು ಹೇಳಿದಿರಿ, ಕಲೆ ಸಂಸ್ಕೃತಿ ಎಂಬುದು ತೆಗೆದಂತೆಲ್ಲ ಬರುವ ಗಣಿ, ಬಂಗಾರದ ಗಣಿ ಮುಗಿಯಬಹುದು, ಆದರೆ ಅದು ಮುಗಿಯುವುದಿಲ್ಲ ಅಂತ. ಆದರೆ ತಮ್ಮಲ್ಲಷ್ಟೇ ಅಲ್ಲ ಎಲ್ಲ ಜಾತಿ ಜನಾಂಗಗಳಲ್ಲೂ ಅಂತಹ ಒಂದು ಗಣಿಯಿದೆ. ಅಗೆಯುತ್ತಿದ್ದ ಹಾಗೆಲ್ಲ ಬರುತ್ತಾ ಇರುತ್ತದೆ. ಅದಕ್ಕೇ ಹವ್ಯಕರು ಕೇಳುತ್ತಿದ್ದಾರೆ ನಮ್ಮಲ್ಲಿ ಭಾರಿ ದೊಡ್ಡ ಗಣಿ ಇದೆ, ಬಂಜಾರ ಲಂಬಾಣಿ ಕೇಳುತ್ತಿದ್ದಾರೆ ನಮ್ಮಲ್ಲಿ ಭಾರಿ ಗಣಿ ಇದೆ ಸಂಸ್ಕೃತದವರು ಕೇಳುತ್ತಿದ್ದಾರೆ, ಇವತ್ತು ಸಂಸ್ಕೃತದ ಧ್ವನಿ ಅಡಗಿಹೋಗಿದೆ. ಸಂಸ್ಕೃತ ಅಕಾಡೆಮಿ ತೆಗಿಯಿರಿ, ದಲಿತ ಸಾಹಿತ್ಯ ಅಕಾಡೆಮಿ ತೆಗೆಯಿರಿ ಎಂದು ಹೇಳುತ್ತಿದ್ದಾರೆ ದಲಿತರಲ್ಲಿ ಸಾಕಷ್ಟು ಇದೆ ಹೀಗೆ ಪ್ರತಿಯೊಂದು ಜನಾಂಗಕ್ಕೂ ತನ್ನದೇ ಆದ ಅತ್ಯಂತ ಅಮೂಲ್ಯವಾದ ಸಂಸ್ಕೃತಿ ಇದೆ. ಅದನ್ನು...

ಶ್ರೀ ವೀರಪ್ಪಮೊಯಿಲಿ:- ನೀವು ಬಹಳ ಮಿಶ್ರಣ ಮಾಡಿಬಿಟ್ಟಿರಿ. ಸ್ಪಷ್ಟವಾದ ದೃಷ್ಟಿಯಿಂದ ತಾವು ನೋಡಬೇಕಾಗುತ್ತದೆ. ತುಳು ಒಂದು ಜಾತಿಯೂ ಅಲ್ಲ ಜನಾಂಗವೂ ಅಲ್ಲ, ಏನು

ಸುಂದರರಾಯರೇ? ಅದೊಂದು ಭಾಷೆ ಅಷ್ಟೆ. ಈಗ ಕೊಡಗು ತೆಗೆದುಕೊಂಡರೆ ಅನೇಕ ಜಾತಿಗಳು ಸೇರಿ ಕೊಡಗು ಆಯಿತು.

ಶ್ರೀಮತಿ ಬಿ.ಟಿ.ಲಲಿತಾನಾಯಕ್:- ಕೊಡಗು ಒಂದು ಪ್ರತ್ಯೇಕ ರಾಜ್ಯವಾಗಿತ್ತು.....

ಶ್ರೀಎಂ.ವೀರಪ್ಪ ಮೊಯಿಲಿ:- ದಯಮಾಡಿ ಹಾಗೆ ಹೇಳಬೇಡಿ. It is very wrong. you are sending a very bad note ದಯಮಾಡಿ ಅದನ್ನು ಹೇಳಲಿಕ್ಕೆ ಹೋಗಬೇಡಿ ರಾಜ್ಯ ಕೇಳಿದರು ಎಂದರೆ ಏನರ್ಥ? ಇದು ಸಾಂಸ್ಕೃತಿಕ ಶಬ್ದ ಅಲ್ಲ. ಜವಾಬ್ದಾರಿಯುತವಾದ ಸಚಿವರು ಇವತ್ತು ರಾಜ್ಯಕೇಳಬಹುದು ಎಂದು ಪ್ರಚೋದನೆ ಪ್ರಾದೇಶಿಕವಾಗಿ ಕೊಡುತ್ತಿದ್ದೀರಿ Don't provoke the people.

6.00 ಪಿ.ಎಂ.

ದಯಮಾಡಿ ಆ ರೀತಿ ತಾವು ಮಾಡಬೇಡಿ. ತಾವು ಸಂಸ್ಕೃತಿಯ ಸಚಿವರು, ಕನ್ನಡ ಸಂಸ್ಕೃತಿ ಈ ಎಲ್ಲವನ್ನೂ ತೆಗೆದು ಕೊಂಡು ಹೋಗತಕ್ಕಂತಹ ದೃಷ್ಟಿಕೋನವನ್ನು ತಾವು ಇಡಬೇಕು. ಕೆಲವು ಭಾಷೆಗಳ ಬಗ್ಗೆ I am very sorry to make this change. step-motherly treatment to any language....

(ಗೊಂದಲ)

ಒಬ್ಬ ಮಾನ್ಯ ಸದಸ್ಯರು:- ಮೊದಲು ನಮ್ಮ ರಾಜ್ಯ ಉಳಿದ ಮೇಲೆ ಬೇರೆ ನೋಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:- ಮೊಯ್ಲಿಯವರೆ, ದಯವಿಟ್ಟು ತಾವು ತಾಳ್ಮೆ ಕಳೆದುಕೊಳ್ಳಬಾರದು. ಅವರು ಹೇಳತಕ್ಕಂತಹ ವಾದ ಆ ರೀತಿ ಇರಬಹುದೆಂಬ ಭಾವನೆಯಿಂದ ಹೇಳಿರಬಹುದು. ತಾಳ್ಮೆ ಇರಲಿ. ಮಾನ್ಯ ಮೊಯಿಲಿಯವರೇ ತಾವು ಏಕೆ ಸಿಟ್ಟಾಗಿದ್ದೀರಿ.

ಅಧ್ಯಕ್ಷರು:- ನೀವು ಕೇಳಿದರೂ ನಾವು ಕೊಡುವುದಿಲ್ಲ ತಾವು ಕುಳಿತುಕೊಳ್ಳಿ.

ಶ್ರೀ ಬಿ.ರಮಾನಾಥ್ ರೈ:- ಬೇರೆ ಬೇರೆ ಪ್ರದೇಶಗಳಲ್ಲಿ ತೆಲಂಗಾಣ ಚಳುವಳಿಯಾಗಲೀ ಬೋಡೋ ಚಳುವಳಿಯಾಗಲೀ ಗೂರ್ಖಾ ಚಳುವಳಿಯಾಗಲಿ, ಅವರ ಭಾವನೆಯನ್ನು ಕೆರಳಿಸತಕ್ಕಂತಹ ಮಾತುಗಳು ಬಂದಾಗ ಮಾತ್ರ ಚಳುವಳಿಯಾಗುತ್ತದೆ. ಅಂತಹ ಭಾವನೆಗಳನ್ನು ಕೆರಳಿಸತಕ್ಕಂಥಾದ್ದು ಮಾಡಬಾರದು.

ಶ್ರೀ ಎಂ.ವೀರಪ್ಪ ಮೊಯಿಲಿ:- ಅಂತಹ ಅಪಸ್ವರ ಬರಲೇಬಾರದು. ಅಂತಹ ಅಪಸ್ವರ, ಒಡಕುಧ್ವನಿ ನಮ್ಮ ರಾಜ್ಯದ ಸಮಗ್ರತೆಗೆ ಘನತೆಗೆ ಧಕ್ಕೆ ಬರುತ್ತದೆ. I am a patrietಈ ತರಹದ ಶಬ್ದ ಕೇಳಿದರೆ ನಮಗೆ ರಕ್ತ ಉಕ್ಕಿ ಬರುತ್ತದೆ. ಏಕೆಂದರೆ We are all patriots. First of all we are patriots.ಭಾಷೆ ಮತ್ತೊಂದು ಆಮೇಲೆ. ಆದರೆ ನಮ್ಮ ರಾಜ್ಯದ ಪ್ರಶ್ನೆ ನಮ್ಮ ರಾಷ್ಟ್ರದ ಸಮಗ್ರತೆ ಬಂದಾಗ ಖಂಡಿತವಾಗಿ ಅದನ್ನು ಎತ್ತಿ ಹಿಡಿಯಲಿಕ್ಕೆ ಯಾವ ತ್ಯಾಗಕ್ಕೂ ನಾವು ಸಿದ್ಧವಾಗಿರಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:- ಇದನ್ನು ಪ್ರಚೋದನೆ ಮಾಡಿಕೊಂಡು ಸಮಸ್ಯೆಯನ್ನು ದೊಡ್ಡದು ಮಾಡತಕ್ಕಂಥಾದ್ದು ಅಲ್ಲ. ಅವರಿಗೆ ಈ ಬೇಡಿಕೆಗಳು ಬಂದಿವೆ. ನಮ್ಮ ಎಲ್ಲಾ ವಿಚಾರದಲ್ಲೂ ನಾವು ಮಾತನಾಡುವಾಗ ಯಾವುದು ಮಾಡಬೇಕಾದರೂ ಸ್ವಲ್ಪ ಎಚ್ಚರಿಕೆಯಿಂದ

ಯೋಚನೆ ಮಾಡಿ ಎಂದು ನಾವು ಹೇಳಿದ್ದೇವೆ. ಆವತ್ತಿನ ಪರಿಸ್ಥಿತಿ ಏನು ಇದೆ ಎಂದು ವಿವರಣೆ ಕೊಟ್ಟರೇ, ಹೊರತು ಬೇರೇನೂ ಅಲ್ಲ. ಇಡೀ ದಕ್ಷಿಣ ಕನ್ನಡ ಜಿಲ್ಲೆಯವರೆಲ್ಲಾ ನಮ್ಮ ಮೇಲೆ ಧಾಳಿ ಮಾಡುತ್ತಿರುವುದು ಅಲ್ಲ. ಆ ಭಾವನೆಯನ್ನು ಅರ್ಥ ಮಾಡಿಕೊಳ್ಳಬೇಕು.

(ಗೊಂದಲ)

ಶ್ರೀ ಕುಂಬ್ಳೆ ಸುಂದರರಾವ್:- ನಾವು ರಾಜ್ಯ ಕೊಡಬೇಕೆಂದು ಕೇಳಿದರೆ ರಾಜ್ಯ ಕೊಡುತ್ತಾರೋ?......

ಶ್ರೀ ಬಿ.ರಮಾನಾಥ ರೈ:- ತುಳು ಅಕಾಡೆಮಿ ಕೇಳಿದ್ದಕ್ಕೆ ಪ್ರಚೋದನೆ ಎಲ್ಲಿ ಬಂತು. ಪ್ರಚೋದನೆ ಮಾಡತಕ್ಕಂತಹ ಪರಿಸ್ಥಿತಿ ಇಲ್ಲ.

ಶ್ರೀ ಎಂ.ಸಿ.ನಾಣಯ್ಯ:- ಮಾಜಿ ಮುಖ್ಯ ಮಂತ್ರಿಗಳಾದ ಶ್ರೀ ವೀರಪ್ಪ ಮೊಯಿಲಿಯವರು ಅವರ ಕಾಲದಲ್ಲಿ 3 ಅಕಾಡೆಮಿಗಳನ್ನು ರಚನೆ ಮಾಡಿಯಾದ ಮೇಲೆ ಆಯಾಯ ಭಾಷೆಗೆ ಸಂಬಂಧಪಟ್ಟಂತೆ ಆ ವರ್ಗಕ್ಕೆ ಸಂಬಂಧಪಟ್ಟಿರತಕ್ಕಂತಹ ಸಂಸ್ಕೃತಿ ಎಂದು ಹೇಳತಕ್ಕಂತಹ ಹಿನ್ನೆಲೆಯಲ್ಲಿ ನಡೆದಿರತಕ್ಕಂಥಾದ್ದು, ಅದು ಅವರ ಕಾಲದಲ್ಲಿ ನಡೆದಿರತಕ್ಕಂತಹ ವಿಚಾರ ಆಗಲಿ. ಕೊಡವ ಅಕಾಡೆಮಿಯನ್ನು ಅವರ ಕಾಲದಲ್ಲೇ ಮಾಡಿದ್ದುದು. ಕೊಡವ ಅಕಾಡಮಿ, ತುಳು ಅಕಾಡಮಿ ಮತ್ತು ಕೊಂಕಣಿ ಅಕಾಡಮಿ ಮಾಡಿರತಕ್ಕಂಥಾದ್ದನ್ನು ನಾನೂ ಕೂಡ ಆ ಸಂದರ್ಭದಲ್ಲಿ ಸ್ವಾಗತ ಮಾಡಿರತಕ್ಕಂಥಾದ್ದು ನಿಜ. ಶ್ರೀಮತಿ ಲಲಿತಾ ನಾಯಕ್ ರವರು ಈ ಖಾತೆಯನ್ನು ಪಡೆದಾದ ಮೇಲೆ ಅವರ ಮನಸ್ಸಿನಲ್ಲಿರತಕ್ಕಂತಹ ಚಿಂತನೆ ಬಗ್ಗೆ ವಿಚಾರ ಮಾಡಿದ್ದಾರೆ. ಅವರು ಕನ್ನಡದಲ್ಲಿ ಒಬ್ಬ ಸಾಹಿತಿ, ಕವಿ ಆಗಿದ್ದಾರೆ. ಅದರ ಬಗ್ಗೆ ಬೇಕಾದಷ್ಟು ಕೆಲಸ ಮಾಡಿದ್ದಾರೆ. ಆ ಸಂದರ್ಭದಲ್ಲಿ ಎಲ್ಲವನ್ನೂ ಒಟ್ಟು ಮಾಡಿ ಒಂದು ಭಾಷಾ ಅಕಾಡೆಮಿಯನ್ನು ಏಕೆ ಮಾಡಬಾರದೆಂಬ ಅವರ ಮನಸ್ಸಿನ ವೈಯಕ್ತಿಕವಾಗಿರತಕ್ಕಂತಹ ಚಿಂತನೆ ಇದಾಗಿದೆ. ಈ ಚಿಂತನೆಯ ಹಿನ್ನೆಲೆಯಲ್ಲಿ ಆಡುತ್ತಿರತಕ್ಕಂತಹ ಸಂದರ್ಭದಲ್ಲಿ ಬಹುಶಃ ಪ್ರತಿಯೊಬ್ಬರೂ ಒಂದೊಂದು ಭಾಷೆಗೆ ಅಕಾಡೆಮಿಯನ್ನು ಎಲ್ಲಿಯಾದರೂ ಕೇಳಿಯಾರು ಎಂದು ಹೇಳಿರಬಹುದು. ಯಾರೂ ಕೂಡ ಕೇಳುವುದಿಲ್ಲ. ಸರಕಾರದ ವತಿಯಿಂದ ಮಂತ್ರಿಯಾಗಿ ಆಡಿರತಕ್ಕಂತಹ ಮಾತು ಬಂದಾಗ ನಾನು ಇವತ್ತು ಸರಕಾರದ ವತಿಯಿಂದ ಅವರು ಆಡಿರತಕ್ಕಂತಹ ಮಾತು ಯಾವುದು ಇದೆ, ಸಂಬಂಧಪಟ್ಟಿರತಕ್ಕಂಥಾದ್ದು ಯಾವುದು ಇದೆ ಅದು ಅವರ ಉದ್ದೇಶ ಕೂಡ ಅಲ್ಲ. ಅದನ್ನು ನಾನು ಹಿಂದಕ್ಕೆ ತೆಗೆದುಕೊಳ್ಳುತ್ತಿದ್ದೇನೆ.

SRI B.N.BACHEGOWDA:- The words 'she is unfit to be a minister' shall not go into the record.

ಶ್ರೀ ಎಂ.ವೀರಪ್ಪ ಮೊಯಿಲಿ:- ಮಾನ್ಯ ಅಧ್ಯಕ್ಷರೆ, Those words need not go into the record. I am sorry for it. Why should it go into the record?

ಅಧ್ಯಕ್ಷರು:- ನಾವು ನಿಮ್ಮ ಮೇಲೆ ಇನ್‌ಸಿಸ್ಟ್ ಮಾಡಿ ನೀವು ಅಪಾಲಜೈಸ್ ಮಾಡಬೇಕೆಂದು ಹೇಳುವುದು ಅಲ್ಲ.

ಶ್ರೀ ಎಂ.ವೀರಪ್ಪ ಮೊಯಿಲಿ:- I withdraw that ಅದೂ ಕೂಡ ಒಬ್ಬ ಸನ್ಮಾನಿತ ಮಹಿಳೆಯ ಮೇಲೆ ಆ ರೀತಿಯ ಗಧಾ ಪ್ರಹಾರ ಮಾಡಲಿಕ್ಕೆ ಸಿದ್ಧನಿಲ್ಲ.

MR.SPEAKER:- You have got high regards for ladies.

ಶ್ರೀ ಎಂ.ವೀರಪ್ಪಮೊಯಿಲಿ:- ಒಬ್ಬ ಮಹಿಳೆಯ, I do not want to be that much uncharitable ಅವರ ಮೇಲೆ ನಮಗೆ ಬಹಳ ಅಭಿಮಾನ ಇದೆ. ಆ ಪ್ರಶ್ನೆಯೇ ಇಲ್ಲ.

ಶ್ರೀ ವಾಟಾಳ್ ನಾಗರಾಜ್:- ಇಂತಹ ಅಭಿಮಾನ ಬೇಡ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಪ್ರಾರಂಭದಲ್ಲೇ ಹೇಳಿದರು, ಅವರ ಮೇಲೆ ಅಭಿಮಾನ ಇದೆ ಎಂದು.

ಶ್ರೀ ವಾಟಾಳ್ ನಾಗರಾಜ್:- ಈ ರೀತಿಯ ಅಭಿಮಾನ ಬೇಡಪ್ಪ ಎಂದು ನಾನು ಹೇಳುತ್ತಿದ್ದೇನೆ. ಒಂದು ಧಾಳಿ ಮಾಡಿ ಆಮೇಲೆ ಅಭಿಮಾನವೆಂದು ಹೇಳುವುದು ಬೇಡವೆಂದು ನಾನು ಹೇಳಿದ್ದು.

ಶ್ರೀ ಎಂ.ವೀರಪ್ಪ ಮೊಯಿಲಿ:- ತಮಗೆ ಗೊತ್ತಿಲ್ಲ. ಒಮ್ಮೆ ಏನಾಯಿತು ಎಂದರೆ ನಾನು ಮುಖ್ಯ ಮಂತ್ರಿಯಾಗಿದ್ದಾಗ ಮಾನ್ಯ ಸಚಿವೆಯವರು ಲಂಬಾಣಿ ವೇಷ ತಾವೇ ಹಾಕಿಕೊಂಡು ನಮ್ಮ ಮನೆಗೆ ಬಂದು ಸಮಾರಂಭಕ್ಕೆ ಕರೆದುಕೊಂಡು ಹೋದರು. ಅಲ್ಲಿ ಅವರ ಬೇಡಿಕೆ ಇತ್ತು. ಲಂಬಾಣಿ ಜನಾಂಗಕ್ಕೆ ಸೇರಿದ ಕರಕುಶಲ ಅಭಿವೃದ್ಧಿ ಬಗ್ಗೆ ಅವರ ಸಂಸ್ಕೃತಿ ಬಗ್ಗೆ ಒಂದು ಲಂಬಾಣಿ ಡೆವಲಪ್‌ಮೆಂಟ್ ಕಾರ್ಪೊರೇಶನ್ ಮಾಡಬೇಕೆಂಬ ಬೇಡಿಕೆ ಇತ್ತು. ನಾನು ಅದನ್ನು ಅನೌನ್ಸ್ ಮಾಡಿದೆ. ಬಡ್ಜೆಟ್ಟಿನಲ್ಲಿ ಕೂಡ ಸೇರಿಸಿದ್ದೇನೆ. ಲಂಬಾಣಿ ಡೆವಲಪ್‌ಮೆಂಟ್ ಕಾರ್ಪೊರೇಶನ್ ಮಾಡಬೇಕೆಂದು ಹೇಳಿದ್ದೇನೆ. ಲಂಬಾಣಿಯವರಲ್ಲಿ ಅಷ್ಟೇ ವೈವಿಧ್ಯತೆಯ ಸಂಸ್ಕೃತಿ ಅಲ್ಲಿ ಇದೆ. ಅದು ನಿಮಗೆ ಗೊತ್ತಿಲ್ಲ. ಅವರಲ್ಲಿ ಅಷ್ಟೆ ಕುಶಲತೆ ಇದೆ. ಅದನ್ನು ಮಾಡಬೇಕೆಂದು ನಾನು ಹೇಳಿದ್ದೇನೆ. ಏಕೆ ಹಿಂಜರಿಯಬೇಕು. ಆದರೆ ಈ ರೀತಿ ಹೇಳಬೇಡಿ. ಒಂದು ಅಕಾಡೆಮಿಯಾದ ಕೂಡಲೇ ರಾಜ್ಯ ಕೇಳುತ್ತಾರೆಂದು ಹೇಳಬೇಡಿ. ತುಳುವಿನ ಬಗ್ಗೆ ಹೇಳಿದೆ. 118 ಭಾಷೆಗಳ ಲಿಸ್ಟ್ ಅನ್ನು ಸ್ಟೇಟ್ಸ್‌ನಲ್ಲಿ ಮಾಡಿದ್ದಾರೆ. ಅಡ್ಮಿಷನ್‌ಗೆ ಪರೀಕ್ಷೆ ಮಾಡಲಿಕ್ಕೆ. ಆ 118 ರಲ್ಲಿ Tulu is one of the languages recognised in the United States of America. It is one of the 5 languages. ಇದು ಉಪ ಭಾಷೆಯೂ ಅಲ್ಲ. ನಾವು ಕನ್ನಡಕ್ಕೆ ಸರಂಡರ್ ಆಗಿದ್ದೇವೆ; ಶರಣಾಗತರಾಗಿದ್ದೇವೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಮೊಯಿಲಿಯವರು ಇವತ್ತೇಕೋ ತೀಟೆ ಜಗಳ ಮಾಡುತ್ತಿದ್ದಾರೆ. ನಾವು ಸರಂಡರ್ ಆಗಿಲ್ಲ...... ನಾವು ನಿಮ್ಮನ್ನು ಹೇಳೇ ಇಲ್ಲವೇ?

ಶ್ರೀ ಕಾಗೋಡು ತಿಮ್ಮಪ್ಪ:- ಅವರ ಆಳ್ವಿಕೆಯಲ್ಲೇ ಸೇರಿರುವುದು ಅವರು.

ಶ್ರೀ ವಾಟಾಳ್ ನಾಗರಾಜ್:- ಈಗ ಸರಂಡರ್ ಆಗಿಲ್ಲವೆಂದು ಹೇಳುವುದು ಗೊತ್ತಿದೆ. ನಾವೆಲ್ಲ ಉಪನದಿಗಳೆಲ್ಲಾ ಸೇರಿ ದೊಡ್ಡ ನದಿಗಳಿಗೆ ಸೇರಿದ್ದೇವೆ ಎಂದು ಹೇಳುತ್ತಾರೆ. ಕನ್ನಡ ಸಂಸ್ಕೃತಿ ಅದರ ಹಿನ್ನೆಲೆ ಎಲ್ಲಾ ಹೇಳುತ್ತಾರೆ. ನಾವು ಅವರಿಗೆ ಸರಂಡರ್ ಆಗಿಲ್ಲ ಎಂದು ಹೇಳುತ್ತಾರೆ. ಯಾರು ಹೇಳಿದರು.

ಒಬ್ಬ ಮಾನ್ಯ ಸದಸ್ಯರು:- ನಾವು ಶರಣಾಗತರಾಗಿದ್ದೇವೆಂದು ಹೇಳಿದ್ದೇನೆ. ತಾವು ಪೂರ್ತಿ ಕೇಳುವುದಿಲ್ಲ. 5 ಪಂಚ ದ್ರಾವಿಡ ಭಾಷೆಗಳಲ್ಲಿ ಕನ್ನಡ ತೆಲುಗು, ಮಲೆಯಾಳಂ, ತಮಿಳು, ತುಳು,

ಪಂಚ ದ್ರಾವಿಡ ಭಾಷೆಗಳಲ್ಲಿ ತುಳು ಸ್ವತಂತ್ರ ಭಾಷೆ.

ಶ್ರೀ ವಾಟಾಳ್ ನಾಗರಾಜ್:- ಭಾಷೆ ಬಂದಾಗ ಇವರೆಲ್ಲ ಹೇಗೆ ಒಂದಾಗಿದ್ದಾರೆ ನೋಡಿ. ಬರೀ ಮಂಗಳೂರು. ಬಿ.ಜೆ.ಪಿ. ಯಾವುದೂ ಇಲ್ಲ. ಕಾಂಗ್ರೆಸ್ ಯಾವುದೂ ಇಲ್ಲ ಹೇಗೆ ಒಟ್ಟಾಗಿ ಇದ್ದಾರೆ ನೋಡಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ :- ಸತ್ಯ ಇದೆ.

ಶ್ರೀ ವಾಟಾಳ್ ನಾಗರಾಜ್:- ನೋಡಿ ಸತ್ಯ ಇದೆಯಂತೆ. ಇದು ಸತ್ಯ ಇರಲಿ ಇಲ್ಲದಿರಲಿ. ನನ್ನ ವಿರುದ್ಧ ಮಾತನಾಡುವಾಗ ಇವರು ಎದ್ದು ಹೇಳಬೇಕು. ನೀವು ಅಸತ್ಯ ಮಾತನಾಡಿದರೂ ಸತ್ಯ ಇದೆ ಎಂದು ಹೇಳುತ್ತಾರೆ. ಏಕೆಂದರೆ ನನ್ನ ವಿರುದ್ಧ ಹೇಳಬೇಕೆಂದು ಇವರ ಪೂರ್ವಾಗ್ರಹ ಪೀಡಿತವಾದಂಥ ತೀರ್ಮಾನ.

ಅಧ್ಯಕ್ಷರು:- ನಿಮ್ಮ ವಿರುದ್ಧ ಅಲ್ಲ. ತೆಲುಗು ಪಂಚ ದ್ರಾವಿಡ ಭಾಷೆಯಲ್ಲಿದೆ ಎಂದು ಹೇಳಿದರಲ್ಲ ಅದಕ್ಕೆ ಅವರು ಹೇಳಿದ್ದುದು.

ಶ್ರೀ ಎಂ.ವೀರಪ್ಪ ಮೊಯಿಲಿ:- ಕೊಂಕಣಿ ಭಾಷೆ ಇದನ್ನು ಕಾನ್‌ಸ್ಟಿಟ್ಯೂಷನ್ ಷೆಡ್ಯೂಲ್‌ನಲ್ಲಿ ಹಾಕಿದ್ದಾರೆ. ಇದನ್ನು ಮುಸ್ಲಿಂಮರು ಮಾತನಾಡುತ್ತಾರೆ, ಕ್ರಿಶ್ಚಿಯನ್ಸ್ ಹಿಂದೂಗಳು ಮಾತನಾಡುತ್ತಾರೆ, ಗೋವೆಯಲ್ಲಿ ಮಾತನಾಡುತ್ತಾರೆ, ಕೇರಳದಲ್ಲಿ ಮಾತನಾಡುತ್ತಾರೆ. ಮಹಾರಾಷ್ಟ್ರದಲ್ಲಿ ಮಾತನಾಡುತ್ತಾರೆ. ಇದು ವ್ಯಾಪಕವಾದಂತಹ ಭಹಳ ವಿಶೇಷವಾದಂಥ ಭಾಷೆ. ತಾವು ಕೊಂಕಣಿ ಪಿಕ್ಚರ್ಸ್ ನೋಡಿದ್ದೀರೋ ಇಲ್ಲವೋ. ಕೊಂಕಣಿ ಸಂಸ್ಕೃತಿಯನ್ನು ತಿಳಿಯಲಿಕ್ಕೆ ತಮ್ಮನ್ನು ಆದಷ್ಟು ಈ ಕಾರ್ಯಕ್ರಮಗಳಲ್ಲಿ ತೊಡಗಿಸಲಿಕ್ಕೆ ನಾನು ಹೇಳುತ್ತೇನೆ. ಕೊಡಗಿನ ಬಗ್ಗೆಯಂತೂ ಹೇಳುವುದೇ ಬೇಡ. Kodava Language is a warrier language. ಆದುದರಿಂದ ಇದರ ಬಗ್ಗೆ ಪ್ರಾದೇಶಿಕವಾಗಿ ರಾಜಕೀಯವಾಗಿ ಏನಾದರೂ ಲಾಭ ಪಡೆಯಬೇಕೆಂದು ಮಾಡಿದಂತಹ ಪ್ರಕ್ರಿಯೆ ಅಲ್ಲ ಅದು.

ಶ್ರೀ ವಾಟಾಳ್ ನಾಗರಾಜ್:- ನಾಣಯ್ಯನವರಿಗೆ ನೀವು ಈಗ ಗುಳಿಗೆ ಕೊಟ್ಟಿರಿ. ನಾಣಯ್ಯನವರು ಅತ್ಯಂತ ಆನಂದವಾಗಿ ತಲೆ ಕುಣಿಸುತ್ತಿದ್ದಾರೆ, ನೋಡಿ. ಕೊಡವ ಭಾಷೆ ಬಗ್ಗೆ ನಾವ್ಯಾರೂ ನಿಮ್ಮನ್ನು ವಿರೋಧ ಮಾಡುತ್ತಿಲ್ಲ. ಒಳ್ಳೆಯ ಮತ್ತು ಬಂದ ಹಾಗೆ ಇದ್ದಾರೆ. ಅವರು ನಿಮ್ಮನ್ನು ಮೇಲಕ್ಕೆ ಏಳಿಸುತ್ತಿದ್ದಾರೆ.

ಶ್ರೀ ಎಂ.ಸಿ.ನಾಣಯ್ಯ:- ಮಾನ್ಯ ಸಭಾಧ್ಯಕ್ಷರೆ, ನೀವು ನಮ್ಮನ್ನು ಮೇಲಕ್ಕೆ ಎತ್ತಿದರೂ ಒಂದೇ ಕೆಳಗೆ ಹಾಕಿದರೂ ಒಂದೇ, ನಾವು ನಾವೇ.

ಶ್ರೀ ವಾಟಾಳ್ ನಾಗರಾಜ್:- ನಾಣಯ್ಯನವರು ನಾಣಯ್ಯನವರೇ ಎಂದು ನಿಮಗೂ ಗೊತ್ತಿದೆ ನಮಗೂ ಗೊತ್ತು.

ಶ್ರೀ ಎಂ.ವೀರಪ್ಪ ಮೊಯಿಲಿ:- ಶಿಲ್ಪ ಕಲಾ ಅಕಾಡೆಮಿ ಬಗ್ಗೆ ಹೇಳುವುದಾದರೆ, ಶಿಲ್ಪ ಕಲೆಯಲ್ಲಿ ಇಡೀ ವಿಶ್ವದಲ್ಲೇ ಒಂದು ರಾಜ್ಯ ಔನ್ನತ್ಯದ ಶಿಲ್ಪ ಕಲಾ ಸೌಂದರ್ಯವನ್ನು ಕೊಡತಕ್ಕಂತಹ ರಾಜ್ಯ ಎಂದರೆ ಅದು ಕರ್ನಾಟಕ ರಾಜ್ಯ. ಹೀಗಿರುವಾಗ ನಾವು ಶಿಲ್ಪ ಕಲಾ ಅಕಾಡೆಮಿಯನ್ನು ನಾವು ಮಾಡಿದ್ದರೆ ಅದನ್ನು ವೈಂಡಪ್ ಮಾಡತಕ್ಕಂತಹ ಪ್ರವೃತ್ತಿಗೆ ತಾವು ಹೋಗಿದ್ದೀರಿ. ಆದ್ದರಿಂದ ತುಳು, ಕೊಂಕಣಿ, ಕೊಡಗು ಅಕಾಡೆಮಿಗಳ ಎಲ್ಲಾ

ಚಟುವಟಿಕೆಯನ್ನು ಸ್ಥಗಿತ ಮಾಡಿದ್ದೀರಿ ನನಗೆ ಗೊತ್ತಿರುವ ಮಟ್ಟಿಗೆ. ನೀವು ಯಾರನ್ನು ಬೇಕಾದರೂ ಅಧ್ಯಕ್ಷರನ್ನು ಮ್ಹಾಡಿ. ನಾವ್ಯಾರೂ ಅದಕ್ಕೆ ಪ್ರಭಾವ ಬೀರುವುದಿಲ್ಲ. ನೀವು ಇಂಥವರನ್ನೇ ಅಧ್ಯಕ್ಷರನ್ನಾಗಿ ಮಾಡಿ, ಇಂಥವರನ್ನೇ ಸದಸ್ಯರನ್ನಾಗಿ ಮಾಡಿ ಎಂದು ನಾವು ಯಾವುದನ್ನೂ ಒತ್ತಾಯ ಮಾಡುವುದಿಲ್ಲ. ಆದರೆ ಈ ಅಕಾಡೆಮಿಗಳು ಒಂಭತ್ತು ತಿಂಗಳಿಂದ ಇದರ ಎಲ್ಲಾ ಚಟುವಟಿಕೆಗಳು ಸ್ಥಗಿತವಾಗಿಬಿಟ್ಟಿದೆ. ಇವು ನಾಲ್ಕು ಅಕಾಡೆಮಿಗಳು. ಶಿಲ್ಪಕಲಾ ಅಕಾಡೆಮಿ, ತುಳು ಅಕಾಡೆಮಿ, ಕೊಂಕಣಿ ಮತ್ತು ಕೊಡಗು. ಅದರ ಚಟುವಟಿಕೆಗಳನ್ನು ಪುನಃ ನೀವು ಪ್ರಾರಂಭಮಾಡಲಿಕ್ಕೆ ಕೂಡಲೇ ಕ್ರಮ ತೆಗೆದುಕೊಳ್ಳುತ್ತೀರಿ ಎಂದು ತಾವು ಹೇಳಿಕೆ ಕೊಡುತ್ತೀರಿ ಎಂದು ನಾನೊಂದು ವಿಶ್ವಾಸವನ್ನು ಇಟ್ಟುಕೊಂಡಿದ್ದೇನೆ. ವಿದ್ಯುತ್ ಬಗ್ಗೆ ನಮ್ಮ ಮಾನ್ಯ ಸಚಿವರೇ ಬಂದಿಲ್ಲ.It is a big subject.

ಒಬ್ಬ ಮಾನ್ಯ ಸದಸ್ಯರು:- ಇವತ್ತಿನ ದಿವಸ ವಿದ್ಯುತ್ ಸಬ್ಜೆಕ್ಟೇ ಇಲ್ಲ.

ಶ್ರೀ ಎಂ.ವೀರಪ್ಪಮೊಯಿಲಿ:- ವಿದ್ಯುತ್ ಸಬ್ಜೆಕ್ಟ್ ಇಲ್ಲವೇ? It is a big issue. There are lot of things to be said.

ಅಧ್ಯಕ್ಷರು:- ಇದೆ. ಮಾತನಾಡಿ.

ಶ್ರೀ ಎಂ.ವೀರಪ್ಪ ಮೊಯಿಲಿ:- ಇದನ್ನು ನಾಳೆ ತೆಗೆದುಕೊಳ್ಳೋಣ.

ಅಧ್ಯಕ್ಷರು:- ನೀವು ಕಂಟಿನ್ಯೂ ಮಾಡಿ. ವಿದ್ಯುತ್ ಬಗ್ಗೆ ಮಾತನಾಡಿ.

SRI M. VEERAPPA MOILY:- It is a big subject. ಮಾನ್ಯ ಸಚಿವರು ಇಲ್ಲ. ಆದ್ದರಿಂದ ನಾಳೆ ತೆಗೆದುಕೊಂಡರೆ ಒಳ್ಳೆಯದು.

ಅಧ್ಯಕ್ಷರು:- ಬೇಡ ಬೇಡ. ಕಂಟಿನ್ಯೂ ಮಾಡಿ ವಿದ್ಯುತ್ ಸಬ್ಜೆಕ್ಟ್ ಇದೆ. ಮಾತನಾಡಿ

ಶ್ರೀ ಎಂ.ವಿರಪ್ಪಮೊಯಿಲಿ:- ನಾಳೆ ಮುಗಿಸಿಬಿಡುತ್ತೇನೆ.

ಅಧ್ಯಕ್ಷರು:- ಬೇಡ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಸಚಿವರು ಇದ್ದರೆ ಒಳ್ಳೆಯದು. ಬೇರೆಯವರಿಗೆ ಈ ಸಬ್ಜೆಕ್ಟ್ ಅರ್ಥವಾಗುವುದಿಲ್ಲ.

ಅಧ್ಯಕ್ಷರು:- ಪರವಾಗಿಲ್ಲ, ಕ್ಯಾಬಿನೆಟ್‌ನ ಸಹೋದ್ಯೋಗಿಗಳೆಲ್ಲರೂ ಇದ್ದಾರೆ. ನಾವು ಮಧ್ಯಾಹ್ನ 1 ಗಂಟೆ ಲಂಚ್ ಬ್ರೇಕ್ ಬೇರೆ ಮಾಡಿದ್ದೇವೆ. We have lost some days ಡಿಮ್ಯಾಂಡ್ಸ್ ಎಲ್ಲಾ ಇದ್ದಾವೆ. ಇನ್ನು ಹೊಸ ಮೆಂಬರ್ಸ್ ಎಲ್ಲಾ ಬಹಳ ಜನ ಪಾರ್ಟಿಸಿಪೇಟ್ ಮಾಡುವವರು ಇದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಸಚಿವರನ್ನಾದರೂ ಕರೆಯಿಸಿ ಮಾನ್ಯ ಅಧ್ಯಕ್ಷರೆ, ಕೊನೆಗೆ.

ಅಧ್ಯಕ್ಷರು:- ಕರೆಯಿಸುತ್ತೇನೆ. ಅವರು ಕಂಟಿನ್ಯೂ ಮಾಡಲಿ. I will ask the minister to come. Law Minister is such vigilent man ಯಾವ ಇಲಾಖೆ ಬಗ್ಗೆ ಬೇಕಾದರೂ he is capable to speak.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ಎಲ್ಲಿ ಸೂಜಿ ಯೂಸ್

ಮಾಡಬೇಕೋ ಅಲ್ಲಿ ಸೂಜಿ ಯೂಸ್ ಮಾಡಬೇಕು. ಎಲ್ಲಿ ದಬ್ಬಣ ಯೂಸ್‌ಮಾಡಬೇಕೋ ಅಲ್ಲಿ ದಬ್ಬಣ ಯೂಸ್ ಮಾಡಬೇಕು. ನೀವು ಎಲ್ಲದಕ್ಕೂ ಅವರು ಹುಷಾರ್ ಇದ್ದಾರೆ ಎಂದು ಸೂಜಿಯನ್ನು ಎಲ್ಲಾ ಕಡೆ ಉಪಯೋಗ ಮಾಡಿದರೆ ಹೇಗೆ?

ಅಧ್ಯಕ್ಷರು:- ಅವರು ಫ್ಲೆಕ್ಸಿಬಲ್ ಇದ್ದಾರೆ.

ಶ್ರೀ ಎಂ.ಸಿ.ನಾಣಯ್ಯ:- ಮಾನ್ಯ ಅಧ್ಯಕ್ಷರೇ, ಏಕೆ ಎಂದರೆ ಆರೂವರೆ ಗಂಟೆ ಆಗಿದೆ. ವೋಲ್ಟೇಜ್ ಡ್ರಾಪ್ ಆಗುವ ಸಮಯ ಎಂದು ಎಲ್ಲಾದರೂ ಮನಸ್ಸಿಗೆ ಬಂತೋ ಏನೋ ಗೊತ್ತಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಇಲ್ಲ, ಇಲ್ಲ. ನಿಮ್ಮ ವೋಲ್ಟೇಜ್ ಇರುವವರೆಗೂ ನಾವು ಕೊಡುತ್ತೇವೆ.

ಅಧ್ಯಕ್ಷರು:- ಮಾನ್ಯ ಮೊಯಿಲಿಯವರೇ, ಕಂಟಿನ್ಯೂ ಮಾಡಿ.

ಶ್ರೀ ಎಂ.ವೀರಪ್ಪ ಮೊಯಿಲಿ:- ಕಂಟಿನ್ಯೂ ಮಾಡಬಹುದು. If the Minister were to be here ಮಂತ್ರಿಗಳು ಇದ್ದರೆ ಒಳ್ಳೆಯದು ಎಂದು ಹೇಳುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಇದೊಂದು ಮುಖ್ಯವಾದ ವಿಷಯ.

ಶ್ರೀ ಎಂ.ವೀರಪ್ಪಮೊಯಿಲಿ:- ಹೌದು. ಅದು ಬಹಳ ಇದೆ. ಅದಕ್ಕಿಂತ ಈಗ ವಿದ್ಯುತ್ತಿಗೆ ಹೋಗುವ ಮೊದಲು ಎರಡು ಮಾತು ಮಾತ್ರ......

ಅಧ್ಯಕ್ಷರು:- ಈಗ ರಫ್‌ಲಿ ಎಷ್ಟು ಹೊತ್ತು ಆಗಬಹುದು ತಮಗೆ. By now you have taken 2.07 hours. How much time you require ನಾನು ನಿಮ್ಮನ್ನು ತಡೆಯುವುದಿಲ್ಲ. ಈಗ 4-12 ಗಂಟೆಗೆ ತಾವು ಪ್ರಾರಂಭ ಮಾಡಿದ್ದೀರಿ. ಈಗ 6-15 ಗಂಟೆ ಆಗಿದೆ.

ಶ್ರೀ ಎಂ.ವೀರಪ್ಪಮೊಯಿಲಿ:- ಈಗ ಮಾನ್ಯ ಸಚಿವೆಯವರು ಸ್ವಲ್ಪ ಇರಲಿ. ಎರಡು ಮಾತು ಮಾತ್ರ ಹೇಳುವುದಕ್ಕೆ ಇದೆ. ಸಾಹಿತ್ಯ ಪರಿಷತ್ ಬಗ್ಗೆ. ಇದು ಮುಖ್ಯವಾಗಿ ಕನ್ನಡ ಸಾಹಿತ್ಯ ಪರಿಷತ್‌ಗೆ ಸಂಬಂಧಪಟ್ಟಿದ್ದು. ನಾವು ಹಿಂದೆ ಅವರಿಗೆ ಬರೀ 19 ಲಕ್ಷ ರೂಪಾಯಿ ಮಾತ್ರ ಕೊಡುತ್ತಿದ್ದೆವು. ಸಂಬಳ ಕೊಡುವುದಕ್ಕೂ ಸಾಕಾಗುತ್ತಿರಲಿಲ್ಲ. ಅದಕ್ಕೆ1993-94 ರಲ್ಲಿ ನಾನು 43 ಲಕ್ಷ ರೂಪಾಯಿಗಳನ್ನು ಕೊಟ್ಟೆ. ಅದು 1994-95 ಬರುವಾಗ 36.75 ಲಕ್ಷ ರೂಪಾಯಿ ಆಯಿತು. ಕೊನೆಗೆ ತಾವು ಹಣವನ್ನು ಕೊಡಲೇ ಇಲ್ಲ. ನಿಜವಾಗಿಯೂ ವರ್ಷ ವರ್ಷ ಹತ್ತತ್ತು ಲಕ್ಷ ರೂಪಾಯಿಗಳನ್ನಾದರೂ ತಾವು ಜಾಸ್ತಿ ಮಾಡಬೇಕಾಗುತ್ತದೆ. ಏಕೆಂದರೆ ಅದು ದೊಡ್ಡ ಸಂಸ್ಥೆ. ಅತ್ಯಂತ ಹಿರಿಯರು, ಕನ್ನಡದ ದೊಡ್ಡ ದೊಡ್ಡ ದಿಗ್ಗಜಗಳು ಕಟ್ಟಿದಂಥ ಒಂದು ಬೃಹತ್ ಸಂಸ್ಥೆ. ಅದಕ್ಕೆ ಪ್ರತಿ ವರ್ಷ ಅಂದರೆ ಈ ವರ್ಷ ಕಡಿಮೆ ಪಕ್ಷ ಐವತ್ತು ಲಕ್ಷ ರೂಪಾಯಿಗಳನ್ನಾದರೂ ತಾವು ಕೊಡಬೇಕಾಗುತ್ತದೆ. ಆದ್ದರಿಂದ ಅದಕ್ಕೆ ಕೊಡಬೇಕಾಗುತ್ತದೆ. ಅದೇ ರೀತಿಯಲ್ಲಿ ಉತ್ತರ ಕನ್ನಡ ಭಾಗದಲ್ಲಿ ಧಾರವಾಡದಲ್ಲಿ ವಿದ್ಯಾವರ್ಧಕ ಸಂಘ ಎಂದು ಇದೆ. ತಮಗೆ ಹೇಳುವುದಿದ್ದರೆ ಬಹುಶಃ ಕನ್ನಡ ಸಾಹಿತ್ಯ ಪರಿಷತ್ತಿಗಿಂತಲೂ ಮೊದಲು ಹುಟ್ಟಿದ್ದುದು ಆ ಭಾಗದಲ್ಲಿ ವಿದ್ಯಾವರ್ಧಕ ಸಂಘ ಎಂದು ಹೇಳಿ. ಅಲ್ಲಿಗೆ ಬರೀ ಒಂದೊಂದು ಲಕ್ಷ ರೂಪಾಯಿಯನ್ನೇ ಕೊಡುತ್ತಾ ಬರುತ್ತಿದ್ದರು. ನಾನು ಆಮೇಲೆ 93-94 ಕ್ಕೆ 11 ಲಕ್ಷ

ರೂಪಾಯಿ ಕೊಟ್ಟೆ. ಸ್ಪೆಷಲ್ ಗ್ರಾಂಟನ್ನು ಪ್ರತ್ಯೇಕವಾಗಿ ಕೊಟ್ಟಿದ್ದೇವೆ. 1994-95ಕ್ಕೆ ಅದಕ್ಕೂ ಕೂಡ ಕೊನೆಗೆ ಬರುವಾಗ ನಾವು 6 ಲಕ್ಷ ಕೊಟ್ಟಿದ್ದೇ ಬಂತು. ಆಮೇಲೆ ತಾವು ಕೊಡಲಿಲ್ಲ. ಅದಕ್ಕೂ ಕೂಡ ಕಡಿಮೆ ಪಕ್ಷ 25 ಲಕ್ಷ ರೂಪಾಯಿಗಳನ್ನಾದರೂ ಪ್ರತಿವರ್ಷಕ್ಕೆ ವಿದ್ಯಾವರ್ಧಕ ಸಂಘಕ್ಕೆ ತಾವು ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್:- ನೀವು ಕೊಟ್ಟಿದ್ದೆಷ್ಟು?

ಶ್ರೀ ಎಂ.ವೀರಪ್ಪಮೊಯಿಲಿ:- ಹಿಂದೆ ಒಂದೊಂದು ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದರು. ನಾವು 93-94 ಕ್ಕೆ 11 ಲಕ್ಷ ರೂಪಾಯಿ ಕೊಟ್ಟೆವು. ಆಮೇಲೆ 94-95ಕ್ಕೆ 25 ಲಕ್ಷ ರೂಪಾಯಿ ಕೊಡಬೇಕೆಂದು ಇತ್ತು. ಅದು ಬರೀ 6 ಲಕ್ಷಕ್ಕೆ ನಿಲ್ಲಿಸಿಬಿಟ್ಟರು. ಕೊನೆಗೆ ಬರುವಾಗ, ವರ್ಷದ ಕೊನೆಗೆ ನಾವು ಬಿಡುಗಡೆ ಮಾಡುವುದು. ಅದು ಕೂಡ ಆಗ ನಿಲ್ಲಿಸಿಬಿಟ್ಟಿರಿ. ಇದನ್ನು ಸ್ವಲ್ಪ ವಿಚಾರಮಾಡಬೇಕು. ಇದನ್ನು ಮರುಪರಿಗಣನೆ ಮಾಡಬೇಕು. ಮತ್ತೆ ಅವರು ಹೇಳಿದ ಪ್ರಕಾರ ಗಡಿನಾಡಿನಲ್ಲಿ ಇರುವ ನಮ್ಮ ಕನ್ನಡಿಗಳು ಇರುವ ಸಂಸ್ಥೆಗಳಿಗೆ ಪ್ರೋತ್ಸಾಹ ಕೊಡಲಿಕ್ಕೆ ತಾವು ವಿಶೇಷವಾದಂಥ ಕಾರ್ಯಕ್ರಮಗಳನ್ನು ಮಾಡಬೇಕು ಎಂದು ವಿಶೇಷವಾಗಿ ತಮ್ಮ ಹತ್ತಿರ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ವಿದ್ಯುತ್ ಬಗ್ಗೆ ಕೆಲವು ಮಾತುಗಳನ್ನು ಹೇಳಬೇಕು ಎಂದು ನಾನು ಅಪೇಕ್ಷೆಮಾಡುತ್ತೇನೆ. ಅದರಲ್ಲಿ ಎಲ್ಲವನ್ನೂ ಕೂಡ ನಾನು ವಿಸ್ತರಿಸಿ ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಅದು ದೊಡ್ಡ ಸಬ್ಜೆಕ್ಟ್ ವಿದ್ಯುತ್ ಇಲ್ಲದೇ ಇದ್ದರೆ ಕೃಷಿ ಕ್ಷೇತ್ರದಲ್ಲಾಗಲಿ, ಔದ್ಯೋಗಿಕ ಕ್ಷೇತ್ರದಲ್ಲಾಗಲಿ ಯಾವುದೇ ಕೆಲಸವನ್ನು ಮಾಡಲಿಕ್ಕಾಗುವುದಿಲ್ಲ. ಆದ್ದರಿಂದ ಇದರ ಬಗ್ಗೆ ಏನು ಪ್ರೈಯಾರಿಟಿ ಇದೆ, ಆದ್ಯತೆಗಳೇನು ಎಂಬುದನ್ನು ನಾವು ಇವತ್ತು ಸ್ಪಷ್ಟವಾಗಿ ಇದಕ್ಕೆ ಬಹಳ ಪ್ರಾಮುಖ್ಯವಾದಂಥ ಮಹತ್ವವನ್ನು ಕೊಡಬೇಕು. ನಾವು ವಾರ್ಷಿಕ ಆಯವ್ಯಯದಲ್ಲಿ ಸುಮಾರು 24-25 ಪರ್ಸೆಂಟ್ ವಿದ್ಯುತ್ ಯೋಜನೆಗಳಿಗೆ, ವಿದ್ಯುತ್ತಿಗೆ ಒದಗಿಸುವ ಕೆಲಸ ನಾವು ಮಾಡುತ್ತಾ ಬಂದಿದ್ದೇವೆ. ಇದರಲ್ಲಿ ಸ್ವಲ್ಪ ಆದ್ಯತೆ ಬರಬೇಕು. ಇನ್ನು ಸಮಯ ಕಳೆದಂತೆ ಇದರ ಬಗ್ಗೆ ಹೆಚ್ಚು ಸಿಸ್ಟಂ ಇಂಪ್ರೂವ್‌ಮೆಂಟಿಗೆ ಕೆ ಇ ಬಿ ಯಲ್ಲಿ ಹೆಚ್ಚು ನೀವು ಖರ್ಚು ಮಾಡಬೇಕು. ಆದಷ್ಟು ವಿದ್ಯುತ್ ಜನರೇಷನ್ ಪ್ರಾಜೆಕ್ಟ್ ಏನಿದೆ, ಅದನ್ನು ಖಾಸಗೀಕರಣ ಮಾಡುವುದನ್ನು ನೀವು ಎರಡಕ್ಕೂ ಕೈಹಾಕಿದರೆ ಯಾವುದೂ ಕೆಲಸವಾಗುವುದಿಲ್ಲ. ಇದರ ಬಗ್ಗೆ ಸ್ಪಷ್ಟವಾದಂಥ ನೀತಿಯನ್ನು ನೀವು ಸರ್ಕಾರ ತೆಗೆದುಕೊಳ್ಳಬೇಕಾದಂಥ ಒಂದು ಅವಶ್ಯಕತೆ ಖಂಡಿತವಾಗಿಯೂ ಕೂಡ ಇದೆ.

ಶ್ರೀ ಬಿ.ರಮಾನಾಥ ರೈ:- ವಿದ್ಯುತ್ ಇಲಾಖೆ ಬೇಡಿಕೆ ಬಗ್ಗೆ ಇವತ್ತು ಸಬ್ಜೆಕ್ಟ್ ಇಲ್ಲ.

ಶ್ರೀ ವೈ.ರಾಮಕೃಷ್ಣ:- ಮಾನ್ಯ ಅಧ್ಯಕ್ಷರೇ, ಇವತ್ತು ಸಭೆಯನ್ನು ಅಡ್ಜರ್ನ್ ಮಾಡುವುದು ಉತ್ತಮ ಎಂದು ಕಾಣುತ್ತದೆ. That is my humble submission because the Minister should be here. ಇದು ಮುಖ್ಯವಾದ ಬೇಡಿಕೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನಾಳೆಯಿಂದ ಸ್ವಲ್ಪ ಜಾಸ್ತಿ ಮಾಡಿ.

ಅಧ್ಯಕ್ಷರು:- ಈಗ ಕುಳಿತುಕೊಂಡು ಮುಗಿಸಿಬಿಡೋಣ.

ಶ್ರೀ ವೈ.ರಾಮಕೃಷ್ಣ:- ನಮಗೆ ಪಾರ್ಟಿ ಮೀಟಿಂಗ್ ಇದೆ. ನಾವು ಫಿಕ್ಸ್ ಮಾಡಿದ್ದೇವೆ. ದಯವಿಟ್ಟು ಅಲೋ ಮಾಡಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನಾವು ಒಂಭತ್ತೂವರೆಗೆ ಬಂದಿದ್ದೇವೆ. ನಿಮ್ಮನ್ನು ಹತ್ತಕ್ಕೆ

ಭೇಟಿಯಾಗಿದ್ದೇವೆ. ನಾವು ಒಂಭತ್ತೂವರೆಗೆ ಬಂದು ಇಲ್ಲಿಯೇ ಕುಳಿತಿದ್ದೇವೆ. ಮತ್ತೆ ತಮ್ಮ ದಯದಿಂದಲೂ ಊಟವೂ ಇಲ್ಲೇ ಸಿಕ್ಕಿತು. ತಮ್ಮ ಜೊತೆಯಲ್ಲಿ ಊಟ ಮಾಡಿದೆವು.

ಅಧ್ಯಕ್ಷರು:- ಅದನ್ನು ನಾಳೆಯೂ ಕಂಟಿನ್ಯೂ ಮಾಡುತ್ತೇನೆ. ಅದಕ್ಕೇನು ವರಿ ಮಾಡಬೇಡಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನಾವು ಎಲ್ಲಿಯೂ ಹೋಗಿಯೇ ಇಲ್ಲ. 9.30 ಗಂಟೆಯಿಂದ ಇಲ್ಲಿಯವರೆಗೂ ಇಲ್ಲೇ ಕುಳಿತಿದ್ದೇವೆ.

ಅಧ್ಯಕ್ಷರು:- ವಾಟಾಳ್‌ರು ಇರುವವರೆಗೂ ನಿಮ್ಮ ಊಟಕ್ಕೇನು ಸಮಸ್ಯೆ ಇಲ್ಲ. ಊಟ ನಿಮ್ಮ ದಯದಿಂದ ಸಿಕ್ಕಿತು ಎಂದರು. ಅದಕ್ಕೆ ವಾಟಾಳ್ ಇರುವವರೆಗೂ ತೊಂದರೆ ಇಲ್ಲ ಎಂದು ಹೇಳಿದ್ದೆ. ಕಂಟಿನ್ಯೂ ಮಾಡಿಬಿಡೋಣ. ಎಷ್ಟು ಹೊತ್ತಾಗಬಹುದು ತಮಗೆ ಮೊಯಿಲಿಯವರೇ, ನಿಮಗೆ ಸಮಯ ಎಷ್ಟು ಬೇಕು?

ಶ್ರೀ ಎಂ.ವೀರಪ್ಪಮೊಯಿಲಿ:- ಅರ್ಧ ಗಂಟೆ. ಈ ವಿದ್ಯುತ್ ಸಚಿವರು ಇಲ್ಲದೇ ಛಾರ್ಜ್ ಆಗುವುದಿಲ್ಲ. That is my difficulty ಬಹಳ ಡಲ್ಲಾಗಿಬಿಡುತ್ತೆ. ಅವರು ಎದುರಿಗೆ ಇಲ್ಲದಿದ್ದರೆ ಏನು ಸ್ವಾರಸ್ಯವೇ ಇಲ್ಲ.

MR. SPEAKER:- What the Hon'ble Law Minister says.

SRI. M.C. NANAIAH:- I think they want to have the discussion tomorrow.

ಅಧ್ಯಕ್ಷರು:- ಸಂಜೆ ಹೊತ್ತು ನಾಣಯ್ಯನವರು ಏನು ಹೇಳುತ್ತಾರೆ ಎನ್ನುವ ಒಂದು ಅರಿವು ನನಗಿದೆ. ಕೇಳುವ ಕರ್ತವ್ಯ ಮಾಡಬೇಕಲ್ಲ.

ಶ್ರೀ ಎಂ.ಸಿ.ನಾಣಯ್ಯ:- ನಾವಂತೂ 7 ಗಂಟೆಯವರೆಗೂ ಕೂರುವುದಕ್ಕೆ ನಾವು ತಯಾರಿದ್ದೇವೆ. ಮಾನ್ಯ ಮಂತ್ರಿಗಳು ಇಲ್ಲ ಎಂದು ಹೇಳುತ್ತಾರೆ. ವೀರಪ್ಪಮೊಯಿಲಿಯವರ ಒಂದು ತಕರಾರು ಏನೆಂದರೆ ಇವತ್ತು ಮಂತ್ರಿಗಳಾದ ಜೆ.ಹೆಚ್. ಪಟೇಲರು ಇಲ್ಲ. ಅವರು ಇಲ್ಲದೇ ಇರುವುದರಿಂದ ಅವರಿಗೆ ಛಾರ್ಜ್ ಆಗುವುದಿಲ್ಲ ಎಂದು ಹೇಳುವಂಥಾದ್ದು. ಅಂದರೆ ಜನರೇಟರ್ ಬೇಕಾಗುತ್ತದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಸಾಮಾನ್ಯವಾಗಿ ಬೇಡಿಕೆ ಬಗ್ಗೆ ಚರ್ಚೆ ಇರುವಾಗ, ಮಾತನಾಡುವಾಗ ಅವರು ಇರಬೇಕು.

ಡಾ.ಯು.ಚಿತ್ತರಂಜನ್:- ಬೇಡಿಕೆ 47 ರಲ್ಲಿ ವಿದ್ಯುತ್ ಯೋಜನೆ ಎಂದು ಇದೆ.

ಅಧ್ಯಕ್ಷರು:- ಎಲ್ಲಾ ಒಂದೇ. ಯೋಜನೆ, ವಿದ್ಯುತ್, ಸರಬರಾಜು, ಕಡಿತ ಎಲ್ಲಾ ಅದರಲ್ಲೇ ಬಂದುಬಿಡುತ್ತದೆ. ನಿನ್ನೆ ಮುಖ್ಯಮಂತ್ರಿಗಳು ಅಬ್ಕಾರಿ ಇಲಾಖೆಯ ಪ್ರಶ್ನೆ ಬಂದಾಗ ಒಂದು ಹೇಳಿಕೆ ಮಾಡುತ್ತೇನೆ ಎಂದು ಒಪ್ಪಿಕೊಂಡಿದ್ದರು. ಅಬ್ಕಾರಿ ಸಚಿವರು ನಿನ್ನೆ ಇರಲಿಲ್ಲ ಈಗ ಅವರು ಹೇಳಿಕೆಯನ್ನು ಮಾಡುತ್ತಾರೆ.

ಮಂತ್ರಿಗಳ ಹೇಳಿಕೆ

ವಿಷಯ:- ರಾಜ್ಯದಲ್ಲಿ ಅಬಕಾರಿ ಬಾಕಿ ಬಗ್ಗೆ.

ಶ್ರೀ ತಿಪ್ಪೆಸ್ವಾಮಿ (ಅಬ್ಕಾರಿ ಮಂತ್ರಿಗಳು):- ಮಾನ್ಯ ಅಧ್ಯಕ್ಷರೇ, ನಿನ್ನೆ, ಮಾನ್ಯ ಮುಖ್ಯ ಮಂತ್ರಿಗಳು ಸದನದಲ್ಲಿ ಅಬಕಾರಿ ಬಾಕಿಯ ಬಗ್ಗೆ, ಈ ದಿನ ಒಂದು ಹೇಳಿಕೆಯನ್ನು